ಉಪನ್ಯಾಸ
ಗ್ರಂಥಮಾಲೆ

೨೩೦

ಮಾನವ ಮತ್ತು ಶಾಕಾಹಾರ

ಎ. ಎಸ್. ಧರಣೇಂದ್ರಯ್ಯ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಜನವರಿ, ೧೯೭೬

ರಜತ ಮಹೋತ್ಸವದ ಪ್ರಕಟನೆ

ಉಪನ್ಯಾಸ ಗ್ರಂಥಮಾಲೆ

೨೩೦

ಮಾನವ ಮತ್ತು ಶಾಕಾಹಾರ

ಎ. ಎಸ್. ಧರಣೇಂದ್ರಯ್ಯ, ಎಂ.ಎ.

ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ
ಜನವರಿ, ೧೯೭೬

ಪ್ರಕಾಶಕರು :
ಎಸ್. ಎಸ್. ಒಡೆಯರ, ಎಂ.ಎ.,ಎಲ್‌ಎಲ್.ಬಿ.
ಕುಲಸಚಿವರು
ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ-೫೮೦೦೦೩

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು
ಜನವರಿ, ೧೯೭೬

ಬೆಲೆ: ೨೫ ಪೈಸೆ

ಮುದ್ರಕರು :
ಷ. ಶಿ. ಭಾಂಡಗೆ
ವಿದ್ಯಾವಾಹಿನಿ ವಿದ್ಯುನ್ಮುದ್ರಣ, (ಪುಸ್ತಕ ವಿಭಾಗ)
ಗಂಗಾಪೂರಪೇಟ, **ಗದಗ.**

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ವ್ಯಾಸಂಗವಿಸ್ತರಣ ಹಾಗು ಪ್ರಕಟನ ಶಾಖೆಯ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ ಜನಪ್ರಿಯವೂ ಆಗಿರುವದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ಎಂಟು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸ ಮಾಲೆಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವ ದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗು ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನ ಮುಟ್ಟಿ ಸಹಕರಿಸುತ್ತಿರುವದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೨೭೯ ಪುಸ್ತಕಗಳು ಪ್ರಕಟವಾಗಿವೆ ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿ ರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆ ಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆ ಎಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋ ಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ-೩

ಆರ್. ಸಿ. ಹಿರೇಮಠ
ಕುಲಪತಿಗಳು

ಕೃತಜ್ಞತೆ

ಭಗವಾನ್ ಮಹಾವೀರರ ೨೫೦೦ನೇ ನಿರ್ವಾಣೋತ್ಸವದ ಅಂಗವಾಗಿ ಕರ್ನಾಟಕ ವಿಶ್ವವಿದ್ಯಾಲಯ ವ್ಯಾಸಂಗ ವಿಸ್ತರಣ ಹಾಗು ಪ್ರಕಟನ ವಿಭಾಗವು ಬೆಳಗಾವಿ ಜಿಲ್ಲೆಯ ಶೇಡಬಾಳ ದಲ್ಲಿ ಏರ್ಪಡಿಸಿದ್ದ ೧೪೯ ನೇ ಉಪನ್ಯಾಸ ಶಿಬಿರದಲ್ಲಿ ಭಾಗವಹಿಸುವ ಭಾಗ್ಯ ನನ್ನದಾಗಿತ್ತು. ಸಾಮಾನ್ಯವಾಗಿ ಎರಡು ದಿನಗಳು ನಡೆಯುವ ಇಂತಹ ಶಿಬಿರಗಳಲ್ಲಿ ಸಹ ವಿದ್ವಾಂಸರು ಹಾಗೂ ಸಹೃದಯಿ ಸ್ಥಳೀಯ ಜನರೊಂದಿಗೆ ಕಲೆತು ಕಾಲಕಳೆದಾಗ ಮೈಮನಗಳಿಗೆ ಹಾಯೆನಿಸುತ್ತದೆ. ಅಲ್ಲದೇ ಸ್ವತಃ ಉಪನ್ಯಾಸ ಮಾಡುವುದರ ಜೊತೆಗೆ ಇತರ ವೈವಿಧ್ಯಪೂರ್ಣ ಉಪನ್ಯಾಸಗಳನ್ನು ಕೇಳುವ ಸುಯೋಗವೂ ಲಭಿಸುತ್ತದೆ.

ಈ ಶಿಬಿರದಲ್ಲಿ 'ಮಾನವ ಮತ್ತು ಶಾಕಾಹಾರ' ಎಂಬ ವಿಷಯದ ಬಗ್ಗೆ ನಾನು ಮಾಡಿದ ಉಪನ್ಯಾಸವು ಕೆಲವು ವಿವರಗಳೊಂದಿಗೆ ಮೈಗೂಡಿಕೊಂಡು ಈ ಪುಸ್ತಿಕೆಯ ರೂಪದಲ್ಲಿ ಹೊರಬರುತ್ತಿದೆ. ಇಲ್ಲಿ ಪ್ರತಿಪಾದಿತವಾಗಿರುವ ವಿಚಾರಗಳಲ್ಲಿ ಕೆಲವು ವಿಶ್ವಹಿಂದೂ ಪರಿಷತ್ ಸ್ಮೃತಿ ಸಂಪುಟದಲ್ಲಿ ಪ್ರಕಟವಾಗಿರುವ 'ಸಸ್ಯಾಹಾರವೇ ಏಕೆ?' ಎಂಬ ನನ್ನ ಕಿರುಲೇಖನದಲ್ಲಿ ಅಡಕವಾಗಿರುವುದನ್ನು ಕಾಣಬಹುದು. ಆ ವಿಚಾರಗಳು ಹೆಚ್ಚು ವಿಸ್ತೃತ ರೂಪದಲ್ಲಿ ಅಭಿವ್ಯಕ್ತವಾಗಿದ್ದರೂ, ವಿಷಯದ ಜಟಿಲತೆ

ಹಾಗೂ ಮಹತ್ವಪೂರ್ಣತೆಗಳ ದೃಷ್ಟಿಯಿಂದ ನೋಡಿದಾಗ ಅದರ ಸಮರ್ಥ ಪ್ರತಿಪಾದನೆಗೆ ಇಂತಹ ಕಿರುಹೊತ್ತಿಗೆಯಲ್ಲಿ ದೊರೆಯುವ ಅವಕಾಶ ಬಹಳ ಕಡಿಮೆ. ಆದರೂ ನಮ್ಮ ಸಾರ್ಥಕ ಬದುಕಿಗಾಗಿ ನಾವು ಸೇವಿಸಬೇಕಾದ ಆಹಾರದ ಶುದ್ಧತೆ ಮತ್ತು ನೈತಿಕತೆಗಳ ಕಡೆ ಜನಮನ ಸೆಳೆಯಲು ಈ ಪುಸ್ತಕ ಸ್ವಲ್ಪಮಟ್ಟಿಗೆ ಸಮರ್ಥವಾದರೂ ನನ್ನ ಆಶಯ ಸಫಲವಾದಂತೆ.

ಉಪನ್ಯಾಸ ಶಿಬಿರದಲ್ಲಿ ಭಾಗವಹಿಸಲು ಅವಕಾಶಕೊಟ್ಟು ಅನಂತರ, ಉಪನ್ಯಾಸದ ಸಾರಸಂಗ್ರಹವನ್ನು ಈ ಪುಸ್ತಿಕೆಯ ರೂಪದಲ್ಲಿ ಪ್ರಕಟಿಸುತ್ತಿರುವ ಕರ್ನಾಟಕ ವಿಶ್ವವಿದ್ಯಾಲಯ ವ್ಯಾಸಂಗವಿಸ್ತರಣ ಹಾಗೂ ಪ್ರಕಟನ ವಿಭಾಗದ ಮುಖ್ಯಸ್ಥರಾದ ಶ್ರೀ ಸಿ ಎಸ್. ಕಣವಿಯವರು ಹಾಗೂ ಅವರ ಸಹಾಯಕ ವರ್ಗದವರು, ನನ್ನ ಬರವಣಿಗೆಗೆ ಸದಾ ಪ್ರೋತ್ಸಾಹಿಸುತ್ತಿರುವ ನಮ್ಮ ವಿಭಾಗದ ಮುಖ್ಯಸ್ಥರಾದ ಪ್ರೊ. ಕೆ. ಆರ್. ಮಲ್ಲಪ್ಪನವರು ಮತ್ತು ಈ ಪುಸ್ತಿಕೆಯಲ್ಲಿ ಪ್ರತಿಪಾದಿತವಾಗಿರುವ ವಿಷಯಗಳ ಸರಳೀಕರಣಕ್ಕೆ ನೆರವಾದ ನನ್ನ ಪತ್ನಿ ಶ್ರೀಮತಿ ಕೌಸಲ್ಯಾ ಧರಣೇಂದ್ರ, ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಮನೋವಿಜ್ಞಾನ ವಿಭಾಗ
ಧಾರವಾಡ
೪-೧೨-೧೯೭೫

ಎ. ಎಸ್. ಧರಣೇಂದ್ರಯ್ಯ


We are the living graves of murdered beasts,
Slaughtered to satisfy our appetites
We never pause to wonder at our feasts
If kine, like men, can possibly have rights
We pray on Sundays that we may have light,
To guide our footsteps on the path we tread
We are sick of war, we do not want to fight
The thought of it now fills our hearts with dread
And yet we gorge ourselves on the dead.
Like carrion crows we live and feed on meet
Regardless of the suffering and pain
We cause by doing so, if thus we treat
Defenceless animals for sport or gain,
How can we hope in this world to attain
The peace we say we are so anxious for
We pray for it, o'er the tombs of slain
To God, while outraging the moral law
Thus cruelty begets its offspring– war.

— George Bernard Shaw

ಪರಿವಿಡಿ

ಪೀಠಿಕೆ

ಸೃಷ್ಟಿಯ ಕೀರ್ತಿಕಳಶ ತಾನೆಂದು ಅಭಿಮಾನದಿಂದ ಹೇಳಿಕೊಳ್ಳುವ ಮಾನವನು ತನ್ನ ಸಹಜೀವಿಗಳೊಂದಿಗೆ ಹೇಗೆ ವ್ಯವಹರಿಸುತ್ತಾನೆ ಎಂಬುದು ಪ್ರಜ್ಞಾವಂತರಾದವರು ಸೂಕ್ಷ್ಮವಾಗಿ ಪರಿಶೀಲಿಸಬೇಕಾದ ವಿಷಯ. ತನ್ನ ಅಗತ್ಯಗಳ ಪೂರೈಕೆಗಾಗಿ ಮತ್ತು ತನ್ನ ದುರಭಿಮಾನವನ್ನು ಮೆರೆಸಲೆಂದು ಆತನು ಅನೇಕ ಸಲ್ಲದ ಕಾರ್ಯಗಳಲ್ಲಿ ತೊಡಗಿರುವುದನ್ನು ನೋಡಿದಾಗ ಮೇಲಿನ ಮಾತಿಗೆ ಹೆಚ್ಚು ಮಹತ್ವ ಬರುತ್ತದೆ. ಜೀವಿಗಳು ತಮ್ಮ ಬದುಕಿಗಾಗಿ ಹೋರಾಡುವುದು ಪ್ರಕೃತಿಯ ನಿಯಮವೆನಿಸಿದರೂ ಅಂತಹ ಹೋರಾಟದಿಂದ ಸ್ವಪರಹಿತಗಳಿಗೆ ಧಕ್ಕೆಯೊದಗುವಂತಿದ್ದರೆ, ಪ್ರಕೃತಿಯ ಸಮತೋಲನ ಹಾಗೂ ಸೌಂದರ್ಯ–ಸಂನಾದಗಳ ಅಸ್ತವ್ಯಸ್ತತೆಯುಂಟಾಗುವಂತಿದ್ದರೆ ಮತ್ತು ಸಹಜೀವಿಗಳಿಗೆ ಅಸಹನೀಯ ದುಃಖವುಂಟಾಗುವಂತಿದ್ದರೆ ಅಂತಹ ಹೋರಾಟವು ವಿವೇಕಶೀಲನೆನಿಸಿದ ಮಾನವನಿಗೆ ಅಪವಾದವೆನಿಸದಿರದು. ಆದ್ದರಿಂದ ತನ್ನ ಮತ್ತು ತನ್ನ ಸಮಾಜದ ಸುಖಸಮೃದ್ಧಿಗಳ ಸಾಧನೆಗಾಗಿ, ಸುಸಂಸ್ಕೃತಿಯ ವಿಕಾಸಕ್ಕಾಗಿ ಮಾನವನು ತನ್ನ ನಡೆನುಡಿಗಳಲ್ಲಿ, ಅಗತ್ಯಗಳ ಪೂರೈಕೆಯಲ್ಲಿ ಹೆಚ್ಚು ಸಂಯಮಿಯಾಗಿ ವರ್ತಿಸುವದು ಅನಿವಾರ್ಯವಾಗುತ್ತದೆ. ತಾನು ಬದುಕಿ ಇತರರೂ ಬದುಕಲು ಆತನು ಬಿಡಬೇಕಾಗುತ್ತದೆ.



ಅಗತ್ಯಗಳ ಅಂತಸ್ತು ಶ್ರೇಣಿ

ಮಾನವನ ಬದುಕಿನ ಹಿನ್ನೆಲೆಯಲ್ಲಿರುವ ಅಭಿಪ್ರೇರಣೆಗಳು ಹಲವು ಎಂಬುದು ಧಾರ್ಮಿಕ ಮತ್ತು ತಾತ್ತ್ವಿಕ ಚಿಂತನೆಗಳಿಂದ ಮಾತ್ರವಲ್ಲದೆ ಆಧುನಿಕ ಮನೋವೈಜ್ಞಾನಿಕ ಸಂಶೋಧನೆಗಳಿಂದಲೂ ಸಿದ್ಧವಾಗಿದೆ. ಮಾಸ್ಲೋ ಎಂಬ ಮನೋವಿಜ್ಞಾನಿಯ ಪ್ರಕಾರ ಮಾನವನಲ್ಲಿ ಅಭಿಪ್ರೇರಣೆಗಳು ವಿವಿಧ ಹಂತಗಳಲ್ಲಿ ಕ್ರಿಯಾಶೀಲವಾಗಿರುತ್ತವೆ. ಪಕ್ಕದ ಚಿತ್ರದಲ್ಲಿ ತೋರಿಸಿರುವಂತೆ ಮೊದಮೊದಲು ಹಸಿವು, ನೀರಡಿಕೆಗಳಂತಹ ಮೂಲ ಅಗತ್ಯಗಳಿಂದಲೇ ಮಾನವನ ನಡೆನುಡಿಗಳೆಲ್ಲಾ ಅಭಿಪ್ರೇರಿತವಾಗುತ್ತವೆ. ಆದರೆ ಈ ಮೂಲ ಅಗತ್ಯಗಳು ಸ್ವಲ್ಪಸ್ವಲ್ಪವಾಗಿ ಸಂತೃಪ್ತಿ ಪಡೆಯುತ್ತಾ ಹೋದಂತೆಲ್ಲಾ ವ್ಯಕ್ತಿಯು ಮೇಲುಮೇಲಿನ ಅಗತ್ಯಗಳ ಪೂರೈಕೆಯತ್ತ ತನ್ನ ಶಕ್ತಿ ಸಾಮರ್ಥ್ಯಗಳನ್ನು ಹರಿಸುತ್ತಾ ಹೋಗುತ್ತಾನೆ. ಅಂದರೆ, ಮೂಲ ಅಗತ್ಯಗಳ ಸಾಪೇಕ್ಷ

ಸಂತೃಪ್ತಿಯ ನಂತರ, ಸುರಕ್ಷಿತತೆ ಮತ್ತು ಸ್ಥಿರತೆಗಳಂತಹ ಸಂರಕ್ಷಣಾಗತ್ಯಗಳು ಕ್ರಿಯಾಶೀಲವಾಗುತ್ತವೆ. ಅವುಗಳೂ ಸಾಪೇಕ್ಷವಾಗಿ ಸಂತೃಪ್ತಿಪಡೆದ ಅನಂತರ ಸಾಮಾಜಿಕ ಮಿಲನದಿಂದ ದೊರೆಯುವ ವಾತ್ಸಲ್ಯ ಮತ್ತು ಪ್ರೀತಿಯ ಅಗತ್ಯಗಳು ಕ್ರಿಯಾಶೀಲವಾಗುತ್ತವೆ. ಹೀಗೆ ಮುಂದ ಅಂತಸ್ತು ಶ್ರೇಣಿಯಲ್ಲಿ ಕ್ರಮವಾಗಿ ಮಾನ್ಯತಾಗತ್ಯಗಳು ಮತ್ತು ಅಹಂವಾಸ್ತವೀಕರಣ ಅಗತ್ಯಗಳು ಕ್ರಿಯಾಶೀಲವಾಗುತ್ತವೆ. ಒಟ್ಟಿನಲ್ಲಿ, ಕೆಳಕೆಳಗಿನ ಅಗತ್ಯಗಳು ಸಾಪೇಕ್ಷವಾಗಿ ಸಂತೃಪ್ತಿ ಪಡೆದ ಅನಂತರ, ವ್ಯಕ್ತಿಯು ತನ್ನಲ್ಲಿ ಅಂತರ್ಗತವಾಗಿರುವ ವಿಶಿಷ್ಟ ಸತ್ತ್ವಗಳನ್ನು ಸಾಕ್ಷಾತ್ಕರಿಸಿಕೊಳ್ಳಲು ಪ್ರಯತ್ನಿಸುತ್ತಾನೆ ಎಂಬುದು ಮಾಸ್ಲೋನ ಸಿದ್ಧಾಂತದ ಸಾರಾಂಶ* 'ಮನುಷ್ಯನು ಕೇವಲ ತಿನ್ನುವುದಕ್ಕಾಗಿ ಜೀವಿಸುವುದಿಲ್ಲ. ಜೀವಿಸುವದಕ್ಕಾಗಿ ತಿನ್ನುತ್ತಾನೆ' ಎಂಬ ನಾಣ್ಣುಡಿಯನ್ನು ಮಾಸ್ಲೋ ಸಿದ್ಧಾಂತ ಸಮರ್ಥಿಸುತ್ತದೆ. ಇಲ್ಲಿ ನಾವು ಗಮನಿಸಬೇಕಾದ ಪ್ರಧಾನ ಅಂಶವೆಂದರೆ ಪ್ರಗತಿಪಥದಲ್ಲಿರುವ ವ್ಯಕ್ತಿಯಾಗಲೀ ಅಥವಾ ಸಮಾಜವಾಗಲೀ, ರಚನಾತ್ಮಕ ಹಾಗೂ ಸೃಜನಾತ್ಮಕ ಸಾಧನೆಗಳಿಗಾಗಿ ದೈಹಿಕ ಅಗತ್ಯಗಳ ಸಂತೃಪ್ತಿಯನ್ನು ಪಡೆಯಬೇಕಾಗುತ್ತದೆಯೇ ಹೊರತು, ದೈಹಿಕ ಅಗತ್ಯಗಳ ಸಂತೃಪ್ತಿಗೋಸ್ಕರವಾಗಿಯೇ ತಮ್ಮ ಸಮಯವನ್ನು ಅಪವ್ಯಯಮಾಡಿಕೊಳ್ಳುವುದು

---

* ವಿವರಗಳಿಗೆ ನೋಡಿ–ಎ. ಎಸ್. ಧರಣೇಂದ್ರಯ್ಯ, ಸಾಮಾನ್ಯ ಮನೋವಿಜ್ಞಾನ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು: ೧೯೭೪, ೪೦೫–೪೦೮

ನಿರರ್ಥಕನೆಂಬುದು. ಅಲ್ಲದೆ ದೈಹಿಕ ಅಗತ್ಯಗಳ ಸಂತೃಪ್ತಿಯ ರೀತಿಯೂ ಕೂಡ ಮಾನವೀಯ ಮೌಲ್ಯಗಳನ್ನಾಧರಿಸಿರ ಬೇಕಾಗುತ್ತದೆ.


ದೈಹಿಕ ಅಗತ್ಯಗಳಲ್ಲಿ ಹಸಿವಿನ ಪ್ರಾಮುಖ್ಯತೆ ಸಾಪೇಕ್ಷವಾಗಿ ಹೆಚ್ಚು. ಧರ್ಮಜಿಜ್ಞಾಸುಗಳು ಹಸಿವನ್ನು 'ಕ್ಷುದ್ರೋಗ'ವೆಂದು ಕರೆದಿದ್ದಾರೆ. ಈ ರೋಗಕ್ಕೆ ಮದ್ದು ಆಹಾರ. ದೇಹಕ್ಕೆ ಸಾಕಷ್ಟು ಪೋಷಕಾಂಶಗಳು ದೊರಕದಿದ್ದಲ್ಲಿ, ಮೈಮನಗಳು ಅಸ್ವಸ್ಥಗೊಳ್ಳುತ್ತವೆ ಎಂಬುದು ಅನುಭವ ಸಿದ್ಧ ಸಂಗತಿ. ಬುದ್ಧಿಜೀವಿಗಳೆನಿಸಿಕೊಂಡವರೂ ಕೂಡ, ಅರೆಹೊಟ್ಟೆಯೂಟದ ಪ್ರಯೋಗವೊಂದಕ್ಕೆ ಒಳಗಾದಾಗ ಮೈಮನಗಳ ವಿಕಾರಗಳುಂಟಾದದ್ದು ಬೆಳಕಿಗೆ ಬಂದಿದೆ ದೈಹಿಕವಾಗಿ ದುರ್ಬಲರಾದುದು ಮಾತ್ರವಲ್ಲದೆ ಅವರು ತಮ್ಮ ಮಾನಸಿಕ ಏಕಾಗ್ರತೆಯನ್ನು ಕಳೆದುಕೊಂಡು ಆಹಾರದ ಬಗ್ಗೆ ಹಗಲುಗನಸು ಕಾಣುವಂತಾದರು ಮತ್ತು ಆಹಾರವನ್ನು ಕದಿಯುವುದು, ತಟ್ಟೆಗಳನ್ನು ನೆಕ್ಕುವುದು ಮುಂತಾದ ಹೇಯ ವರ್ತನೆಗಳಿಗೆ ತುತ್ತಾದರು. ಇಂತಹ ವರ್ತನೆಗಳು ಹಸಿದವರಲ್ಲಿ ಸಹಜವಾಗಿಯೇ ಕಂಡುಬರುತ್ತವೆ ಎಂಬುದಕ್ಕೆ ಮಾನವ ಶಾಸ್ತ್ರೀಯ ಪುರಾವೆಗಳೂ ದೊರೆತಿವೆ.*

---

* ವಿವರಗಳಿಗೆ ನೋಡಿ—ಎ. ಎಸ್. ಧರಣೇಂದ್ರಯ್ಯ, 'ಹಸಿವು ಮತ್ತು ವರ್ತನೆ', ಮಾನವಿಕ ಕರ್ನಾಟಕ, ಸಂಚಿಕೆ ೧, ಸಂಪುಟ ೧, ಮೈಸೂರು ವಿಶ್ವವಿದ್ಯಾನಿಲಯ, ಸೆಪ್ಟೆಂಬರ್ ೧೯೭೦

ಪೀಠಿಕೆ

ಸೃಷ್ಟಿಯ ಕೀರ್ತಿಕಳಶ ತಾನೆಂದು ಅಭಿಮಾನದಿಂದ ಹೇಳಿಕೊಳ್ಳುವ ಮಾನವನು ತನ್ನ ಸಹಜೀವಿಗಳೊಂದಿಗೆ ಹೇಗೆ ವ್ಯವಹರಿಸುತ್ತಾನೆ ಎಂಬುದು ಪ್ರಜ್ಞಾವಂತರಾದವರು ಸೂಕ್ಷ್ಮವಾಗಿ ಪರಿಶೀಲಿಸಬೇಕಾದ ವಿಷಯ. ತನ್ನ ಅಗತ್ಯಗಳ ಪೂರೈಕೆಗಾಗಿ ಮತ್ತು ತನ್ನ ದುರಭಿಮಾನವನ್ನು ಮೆರೆಸಲೆಂದು ಆತನು ಅನೇಕ ಸಲ್ಲದ ಕಾರ್ಯಗಳಲ್ಲಿ ತೊಡಗಿರುವುದನ್ನು ನೋಡಿದಾಗ ಮೇಲಿನ ಮಾತಿಗೆ ಹೆಚ್ಚು ಮಹತ್ವ ಬರುತ್ತದೆ. ಜೀವಿಗಳು ತಮ್ಮ ಬದುಕಿಗಾಗಿ ಹೋರಾಡುವುದು ಪ್ರಕೃತಿಯ ನಿಯಮವೆನಿಸಿದರೂ ಅಂತಹ ಹೋರಾಟದಿಂದ ಸ್ವಪರಹಿತಗಳಿಗೆ ಧಕ್ಕೆಯೊದಗುವಂತಿದ್ದರೆ, ಪ್ರಕೃತಿಯ ಸಮತೋಲನ ಹಾಗೂ ಸೌಂದರ್ಯ–ಸಂನಾದಗಳ ಅಸ್ತವ್ಯಸ್ತತೆಯುಂಟಾಗುವಂತಿದ್ದರೆ ಮತ್ತು ಸಹಜೀವಿಗಳಿಗೆ ಅಸಹನೀಯ ದುಃಖವುಂಟಾಗುವಂತಿದ್ದರೆ ಅಂತಹ ಹೋರಾಟವು ವಿವೇಕಶೀಲನೆನಿಸಿದ ಮಾನವನಿಗೆ ಅಪವಾದವೆನಿಸದಿರದು. ಆದ್ದರಿಂದ ತನ್ನ ಮತ್ತು ತನ್ನ ಸಮಾಜದ ಸುಖಸಮೃದ್ಧಿಗಳ ಸಾಧನೆಗಾಗಿ, ಸುಸಂಸ್ಕೃತಿಯ ವಿಕಾಸಕ್ಕಾಗಿ ಮಾನವನು ತನ್ನ ನಡೆನುಡಿಗಳಲ್ಲಿ, ಅಗತ್ಯಗಳ ಪೂರೈಕೆಯಲ್ಲಿ ಹೆಚ್ಚು ಸಂಯಮಿಯಾಗಿ ವರ್ತಿಸುವದು ಅನಿವಾರ್ಯವಾಗುತ್ತದೆ. ತಾನು ಬದುಕಿ ಇತರರೂ ಬದುಕಲು ಆತನು ಬಿಡಬೇಕಾಗುತ್ತದೆ.



ಅಗತ್ಯಗಳ ಅಂತಸ್ತು ಶ್ರೇಣಿ

ಮಾನವನ ಬದುಕಿನ ಹಿನ್ನೆಲೆಯಲ್ಲಿರುವ ಅಭಿಪ್ರೇರಣೆಗಳು ಹಲವು ಎಂಬುದು ಧಾರ್ಮಿಕ ಮತ್ತು ತಾತ್ತ್ವಿಕ ಚಿಂತನೆಗಳಿಂದ ಮಾತ್ರವಲ್ಲದೆ ಆಧುನಿಕ ಮನೋವೈಜ್ಞಾನಿಕ ಸಂಶೋಧನೆಗಳಿಂದಲೂ ಸಿದ್ಧವಾಗಿದೆ. ಮಾಸ್ಲೋ ಎಂಬ ಮನೋವಿಜ್ಞಾನಿಯ ಪ್ರಕಾರ ಮಾನವನಲ್ಲಿ ಅಭಿಪ್ರೇರಣೆಗಳು ವಿವಿಧ ಹಂತಗಳಲ್ಲಿ ಕ್ರಿಯಾಶೀಲವಾಗಿರುತ್ತವೆ. ಪಕ್ಕನ ಚಿತ್ರದಲ್ಲಿ ತೋರಿಸಿರುವಂತೆ ಮೊದಮೊದಲು ಹಸಿವು, ನೀರಡಿಕೆಗಳಂತಹ ಮೂಲ ಅಗತ್ಯಗಳಿಂದಲೇ ಮಾನವನ ನಡೆನುಡಿಗಳೆಲ್ಲಾ ಅಭಿಪ್ರೇರಿತವಾಗುತ್ತವೆ. ಆದರೆ ಈ ಮೂಲ ಅಗತ್ಯಗಳು ಸ್ವಲ್ಪಸ್ವಲ್ಪವಾಗಿ ಸಂತೃಪ್ತಿ ಪಡೆಯುತ್ತಾ ಹೋದಂತೆಲ್ಲಾ ವ್ಯಕ್ತಿಯು ಮೇಲುಮೇಲಿನ ಅಗತ್ಯಗಳ ಪೂರೈಕೆಯತ್ತ ತನ್ನ ಶಕ್ತಿ ಸಾಮರ್ಥ್ಯಗಳನ್ನು ಹರಿಸುತ್ತಾ ಹೋಗುತ್ತಾನೆ. ಅಂದರೆ. ಮೂಲ ಅಗತ್ಯಗಳ ಸಾಪೇಕ್ಷ

ಸಂತೃಪ್ತಿಯ ನಂತರ, ಸುರಕ್ಷಿತತೆ ಮತ್ತು ಸ್ಥಿರತೆಗಳಂತಹ ಸಂರಕ್ಷಣಾಗತ್ಯಗಳು ಕ್ರಿಯಾಶೀಲವಾಗುತ್ತವೆ. ಅವುಗಳೂ ಸಾಪೇಕ್ಷವಾಗಿ ಸಂತೃಪ್ತಿಪಡೆದ ಅನಂತರ ಸಾಮಾಜಿಕ ಮಿಲನ ದಿಂದ ದೊರೆಯುವ ವಾತ್ಸಲ್ಯ ಮತ್ತು ಪ್ರೀತಿಯ ಅಗತ್ಯಗಳು ಕ್ರಿಯಾಶೀಲವಾಗುತ್ತವೆ. ಹೀಗೆ ಮುಂದ ಅಂತಸ್ತು ಶ್ರೇಣಿ ಯಲ್ಲಿ ಕ್ರಮವಾಗಿ ಮಾನ್ಯತಾಗತ್ಯಗಳು ಮತ್ತು ಅಹಂವಾಸ್ತ ವೀಕರಣ ಅಗತ್ಯಗಳು ಕ್ರಿಯಾಶೀಲವಾಗುತ್ತವೆ. ಒಟ್ಟಿನಲ್ಲಿ, ಕೆಳಕೆಳಗಿನ ಅಗತ್ಯಗಳು ಸಾಪೇಕ್ಷವಾಗಿ ಸಂತೃಪ್ತಿ ಪಡೆದ ಅನಂತರ, ವ್ಯಕ್ತಿಯು ತನ್ನಲ್ಲಿ ಅಂತರ್ಗತವಾಗಿರುವ ವಿಶಿಷ್ಟ ಸತ್ತ್ವಗಳನ್ನು ಸಾಕ್ಷಾತ್ಕರಿಸಿಕೊಳ್ಳಲು ಪ್ರಯತ್ನಿಸುತ್ತಾನೆ ಎಂಬುದು ಮಾಸ್ಲೋನ ಸಿದ್ಧಾಂತದ ಸಾರಾಂಶ* 'ಮನುಷ್ಯನು ಕೇವಲ ತಿನ್ನುವುದಕ್ಕಾಗಿ ಜೀವಿಸುವುದಿಲ್ಲ. ಜೀವಿಸುವದಕ್ಕಾಗಿ ತಿನ್ನುತ್ತಾನೆ' ಎಂಬ ನಾಣ್ಣುಡಿಯನ್ನು ಮಾಸ್ಲೋ ಸಿದ್ಧಾಂತ ಸಮರ್ಥಿಸುತ್ತದೆ. ಇಲ್ಲಿ ನಾವು ಗಮನಿಸಬೇಕಾದ ಪ್ರಧಾನ ಅಂಶವೆಂದರೆ ಪ್ರಗತಿಪಥದಲ್ಲಿರುವ ವ್ಯಕ್ತಿಯಾಗಲೀ ಅಥವಾ ಸಮಾಜವಾಗಲೀ, ರಚನಾತ್ಮಕ ಹಾಗೂ ಸೃಜನಾತ್ಮಕ ಸಾಧನೆ ಗಳಿಗಾಗಿ ದೈಹಿಕ ಅಗತ್ಯಗಳ ಸಂತೃಪ್ತಿಯನ್ನು ಪಡೆಯಬೇಕಾ ಗುತ್ತದೆಯೇ ಹೊರತು, ದೈಹಿಕ ಅಗತ್ಯಗಳ ಸಂತೃಪ್ತಿಗೋಸ್ಕರ ವಾಗಿಯೇ ತಮ್ಮ ಸಮಯವನ್ನು ಅಪವ್ಯಯಮಾಡಿಕೊಳ್ಳುವುದು

* ವಿವರಗಳಿಗೆ ನೋಡಿ–ಎ. ಎಸ್. ಧರಣೇಂದ್ರಯ್ಯ, ಸಾಮಾನ್ಯ ಮನೋವಿಜ್ಞಾನ. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿದ್ಯಾನಿಲಯ, ಮೈಸೂರು: ೧೯೭೪, ೪೦೫–೪೦೮

ನಿರರ್ಥಕನೆಂಬುದು. ಅಲ್ಲದೆ ದೈಹಿಕ ಅಗತ್ಯಗಳ ಸಂತೃಪ್ತಿಯ ರೀತಿಯೂ ಕೂಡ ಮಾನವೀಯ ಮೌಲ್ಯಗಳನ್ನಾಧರಿಸಿರ ಬೇಕಾಗುತ್ತದೆ.

ದೈಹಿಕ ಅಗತ್ಯಗಳಲ್ಲಿ ಹಸಿವಿನ ಪ್ರಾಮುಖ್ಯತೆ ಸಾಪೇಕ್ಷ ವಾಗಿ ಹೆಚ್ಚು. ಧರ್ಮಜಿಜ್ಞಾಸುಗಳು ಹಸಿವನ್ನು 'ಕ್ಷುದ್ರೋಗ' ವೆಂದು ಕರೆದಿದ್ದಾರೆ. ಈ ರೋಗಕ್ಕೆ ಮದ್ದು ಆಹಾರ. ದೇಹಕ್ಕೆ ಸಾಕಷ್ಟು ಪೋಷಕಾಂಶಗಳು ದೊರಕದಿದ್ದಲ್ಲಿ, ಮೈಮನಗಳು ಅಸ್ವಸ್ಥಗೊಳ್ಳುತ್ತವೆ ಎಂಬುದು ಅನುಭವ ಸಿದ್ಧ ಸಂಗತಿ. ಬುದ್ಧಿ ಜೀವಿಗಳೆನಿಸಿಕೊಂಡವರೂ ಕೂಡ, ಅರೆಹೊಟ್ಟೆಯೂಟದ ಪ್ರಯೋಗವೊಂದಕ್ಕೆ ಒಳಗಾದಾಗ ಮೈಮನಗಳ ವಿಕಾರ ಗಳುಂಟಾದದ್ದು ಬೆಳಕಿಗೆ ಬಂದಿದೆ ದೈಹಿಕವಾಗಿ ದುರ್ಬಲರಾ ದುದು ಮಾತ್ರವಲ್ಲದೆ ಅವರು ತಮ್ಮ ಮಾನಸಿಕ ಏಕಾಗ್ರತೆ ಯನ್ನು ಕಳೆದುಕೊಂಡು ಆಹಾರದ ಬಗ್ಗೆ ಹಗಲುಗನಸು ಕಾಣು ವಂತಾದರು ಮತ್ತು ಆಹಾರವನ್ನು ಕದಿಯುವುದು, ತಟ್ಟೆ ಗಳನ್ನು ನೆಕ್ಕುವುದು ಮುಂತಾದ ಹೇಯ ವರ್ತನೆಗಳಿಗೆ ತುತ್ತಾ ದರು. ಇಂತಹ ವರ್ತನೆಗಳು ಹಸಿದವರಲ್ಲಿ ಸಹಜವಾಗಿಯೇ ಕಂಡುಬರುತ್ತವೆ ಎಂಬುದಕ್ಕೆ ಮಾನವ ಶಾಸ್ತ್ರೀಯ ಪುರಾವೆಗಳೂ ದೊರೆತಿವೆ.*

---

* ವಿವರಗಳಿಗೆ ನೋಡಿ—ಎ. ಎಸ್. ಧರಣೇಂದ್ರಯ್ಯ, 'ಹಸಿವು ಮತ್ತು ವರ್ತನೆ', ಮಾನವಿಕ ಕರ್ನಾಟಕ, ಸಂಚಿಕೆ ೧, ಸಂಪುಟ ೧, ಮೈಸೂರು ವಿಶ್ವವಿದ್ಯಾನಿಲಯ, ಸೆಪ್ಟೆಂಬರ್ ೧೯೭೦

ಹಸಿವಿನ ಸಂತೃಪ್ತಿ ಜೀವಿಯ ಬದುಕಿಗಾಗಿ ಅನಿವಾರ್ಯ ವೆಂದಮೇಲೆ ಆ ಸಂತೃಪ್ತಿಗೆ ಬೇಕಾದ ಆಹಾರ ಯಾವುದು ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇಂತಹ ಪ್ರಶ್ನೆ ನಿರುಪಯುಕ್ತ ವೆನಿಸಬಹುದು.ಕೆಲವರಿಗೆ. ಆದರೆ ಮಾನವ ಮತ್ತು ಇತರ ಜೀವ ವರ್ಗಗಳ ಜೀವನ ರಹಸ್ಯದ ಹಾಗೂ ಆಗುಹೋಗುಗಳ ಬಗ್ಗೆ ಚಿಂತನೆ ಮಾಡುವ, ಮಾಡಬಲ್ಲಂತಹ ವಿವೇಕಶಾಲಿಗಳಿಗೆ ಮೇಲಿನ ಪ್ರಶ್ನೆಯು ಅರ್ಥಪೂರ್ಣವೆನಿಸದಿರದು.

ಇತಿಹಾಸದ ಪುಟಗಳನ್ನು ತಿರುವಿದಾಗ, ಮಾನವನು ತನ್ನ ಆಹಾರಕ್ಕಾಗಿ ಪ್ರಕೃತಿಯಲ್ಲಿರುವ ಸಸ್ಯ ಮತ್ತು ಪ್ರಾಣಿ ಸಂಪತ್ತುಗಳನ್ನು ಬಳಸಿಕೊಂಡು ಬಂದಿರುವುದು ಕಂಡುಬರು ತ್ತದೆ. ಆದರೆ ಈ ಎರಡು ರೀತಿಯ ಆಹಾರ ಪದಾರ್ಥಗಳ ನೈತಿಕ ಹಿನ್ನೆಲೆಯ ಬಗ್ಗೆ ಪ್ರಾಜ್ಞರು ಇತಿಹಾಸದಾದ್ಯಂತ ಜಿಜ್ಞಾಸೆ ನಡೆಸಿರುವುದು ನಮಗೆ ಗೋಚರವಾಗುತ್ತದೆ. ಮಾನ ವನ ಪ್ರಾಕೃತಿಕ ಆಹಾರ ಯಾವುದು ? ಸಾರ್ಥಕವಾದ ಬದು ಕನ್ನು ಸಾಗಿಸಲು ಆತನು ತನ್ನಂತೆಯೇ ನೋವು ನಲಿವುಗಳಿಗೆ ಒಳಗಾಗುವಂತಹ ಪ್ರಾಣಿಗಳನ್ನು ಕೊಂದು ತಿನ್ನಬೇಕಾದುದು ಅನಿವಾರ್ಯವೇ ? ಬದುಕುವುದು ಮಾನವನ ಮೂಲಭೂತ ಹಕ್ಕೆನಿಸಿದರೆ, ಪ್ರಾಣಿಗಳಿಗೂ ಅದು ಮೂಲಭೂತವೆನಿಸುವು ದಿಲ್ಲವೇ ? ಇತರ ಪ್ರಾಣಿಗಳನ್ನು ಕೊಂದು ಅವುಗಳ ಮಾಂಸ ದಿಂದ ತನ್ನ ಹೊಟ್ಟೆತುಂಬಿಕೊಳ್ಳುವ ಹಕ್ಕು ಮಾನವನಿ ಗಿದೆಯೇ ? ಮಾನವನ ದೇಹಕ್ಕೆ ಬೇಕಾದ ಪೋಷಕಾಂಶಗಳು ಸಸ್ಯಸಂಪತ್ತಿನಿಂದ ದೊರೆಯಲಾರವೇ ? ಅನಿಷ್ಟವೆನಿಸು

ವಂತೆ ಬೆಳೆಯುತ್ತಿರುವ ಜಗತ್ತಿನ ಜನಸಂಖ್ಯೆಯ ಆಹಾರಾಗತ್ಯ ಗಳನ್ನು ಸಸ್ಯ ಸಂಪತ್ತಿನಿಂದ ಪೂರೈಸಲಾಗುವುದಿಲ್ಲವೇ? ಜೀವಿಸ ಲೆಂದು ಹೋರಾಡುವ ಮೂಕ ಪಶುಗಳ ಬಗ್ಗೆ ಸರಿತಪ್ಪುಗಳ, ಒಳಿತುಕೆಡುಕುಗಳ ಪ್ರಜ್ಞೆಯುಳ್ಳ ಮಾನವನ ನೈತಿಕ ಹೊಣೆಗಾರಿಕೆ ಎಂತಹದು? – ಇಂತಹ ಹಲವು ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳನ್ನು ಕೊಡುವ ಪ್ರಯತ್ನ ನಡೆದಿದ ಮತ್ತು ಈ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಕೆಲವು ಲೇಖನಗಳು ಈಗಾ ಗಲೇ ಪ್ರಕಟವಾಗಿವೆ. ಈ ಪುಟ್ಟ ಪುಸ್ತಿಕೆಯಲ್ಲಿ, ಮಾನವನ ಪ್ರಾಕೃತಿಕ ಆಹಾರಕ್ಕೆ ಸಂಬಂಧಿಸಿದಂತೆ ಒಂದು ಸ್ಥೂಲ ಆದರೂ ಸಮಗ್ರ ಪರಿಶೀಲನೆ ನಡೆಸುವ ಪ್ರಯತ್ನ ಮಾಡಲಾಗಿದೆ.

ಮಾನವನ ಪ್ರಾಕೃತಿಕ ಆಹಾರ

ಪ್ರಾಣಿಗಳು ಸೇವಿಸುವ ಆಹಾರದ ಆಧಾರದ ಮೇಲೆ ಅವುಗಳನ್ನು ಮಾಂಸಾಹಾರಿ ಮತ್ತು ಸಸ್ಯಾಹಾರಿ ಪ್ರಾಣಿ ಗಳೆಂದು ಒಂದು ಸಾಧಾರಣ ವರ್ಗೀಕರಣ ಮಾಡಲಾಗಿದೆ. ಈ ವರ್ಗೀಕರಣಕ್ಕೆ ಆಧಾರವೆಂದರೆ, ಪ್ರಾಣಿಗಳಲ್ಲಿ ಸಹಜವಾಗಿ ಕಂಡುಬರುವ ಆಹಾರಾಯ್ಕೆ. ಹುಲಿ, ಸಿಂಹ, ತೋಳ ಮುಂತಾದ ಕ್ರೂರ ಮೃಗಗಳು ಸಹಜವಾಗಿ ತಮ್ಮ ಆಹಾರಕ್ಕಾಗಿ ಇತರ ಪ್ರಾಣಿಗಳನ್ನು ಆಯ್ದುಕೊಂಡರೆ, ಹಸು, ಕುದುರೆ, ಆನೆ, ಕಾಡುಕೋಣ ಮುಂತಾದ ಪ್ರಾಣಿಗಳು ಸಸ್ಯಗಳನ್ನು ಸೇವಿಸಿ ತಮ್ಮ ಬದುಕನ್ನು ಸಾಗಿಸುತ್ತವೆ. ಬೆಕ್ಕು ನಾಯಿ

ಮುಂತಾದ ಮಾಂಸಾಹಾರಿ ಪ್ರಾಣಿಗಳು ಧಾನ್ಯಗಳ ಆಹಾರ ವನ್ನೂ ಸೇವಿಸುವುದನ್ನು ನಾವು ಕಾಣಬಹುದಾದರೂ ಅವು ಮಾಂಸಾಹಾರಿ ಪ್ರಾಣಿವರ್ಗಕ್ಕೆ ಸೇರುತ್ತವೆ ಎಂಬುದು ನಿರ್ವಿವಾದ ಅಂಶ. ಆದರೆ ಮಾನವನು ಈ ಎರಡರಲ್ಲಿ ಯಾವ ವರ್ಗಕ್ಕೆ ಸೇರುತ್ತಾನೆ ಎಂಬುದೇ ನಮ್ಮ ಮುಂದಿರುವ ಪ್ರಮುಖ ಪ್ರಶ್ನೆ. ಇಂತಹ ಪ್ರಶ್ನೆಗೆ ಆಧಾರ ಮಾನವನಲ್ಲಿ ಕಂಡುಬರುತ್ತಿರುವ ಮಿಶ್ರಾಹಾರ ಪ್ರಿಯತೆ. ಇಡೀ ಮಾನವ ಜನಾಂಗವನ್ನೇ ಪರಿಗಣಿಸಿದಾಗ ಕೆಲವರು ನಿಶ್ಚಿತ ಶಾಕಾಹಾರಿಗಳೂ, ಹಲವರು ಮಿಶ್ರಾಹಾರಿಗಳೂ ಕಂಡುಬರುತ್ತಾರೆ. ಆದರೆ ನಿಶ್ಚಿತ ಮಾಂಸಾಹಾರಿಗಳೆನಿಸಿಕೊಳ್ಳುವವರು ಬಹಳ ಅಪರೂಪ, ಇಲ್ಲವೇ ಇಲ್ಲವೆಂದರೂ ಬಹುಶಃ ತಪ್ಪಾಗದು. ಮಿಶ್ರಾಹಾರಿಗಳೆನಿಸಿಕೊಳ್ಳುವವರ ಸಂಖ್ಯೆ ಹೆಚ್ಚಾಗಿದ್ದಂತೆ ಕಂಡರೂ, ಅವರಲ್ಲಿ ಹಲವರು ಸೇವಿಸುವ ಆಹಾರದಲ್ಲಿ ಮಾಂಸವು ಸ್ವಲ್ಪ ಮಾತ್ರವಿರುತ್ತದೆ ಎಂಬುದು ಗಮನಿಸಬೇಕಾದ ಅಂಶ. ಪೂರ್ಣ ಮಾಂಸಾಹಾರಿ ಎನಿಸಿಕೊಳ್ಳುವಂತಹ ಜನರೇ ಅಪರೂಪ ಎಂದ ಮೇಲೆ, ಮಾಂಸವು ಮಾನವನ ಸಹಜ ಆಹಾರ ಎನಿಸಿಕೊಳ್ಳಲಾರದು. ಸುಮಾರು ನೂರಕ್ಕೆ ೯೯ ಮಂದಿ ಒಂದಿಲ್ಲ ಒಂದು ರೂಪದಲ್ಲಿ ಸಸ್ಯಪದಾರ್ಥಗಳನ್ನು ಸೇವಿಸುವುದನ್ನು ಕಂಡಾಗ 'ಮಾನವನು ಪ್ರಾಕೃತಿಕವಾಗಿ ಶಾಕಾಹಾರಿ' ಎಂಬ ಸತ್ಯ ನಮಗೆ ವೇದ್ಯವಾಗದಿರದು. ಇದಕ್ಕೆ ಅನೇಕ ಸಮರ್ಥ ಪುರಾವೆಗಳು ನಮಗೆ ದೊರೆಯುತ್ತವೆ. ಅವುಗಳಲ್ಲಿ ಪ್ರಧಾನವಾಗಿ ಅಂಗಾಂಗ ರಚನೆಯನ್ನು ನಾವು ಪರಿಶೀಲಿಸಬಹುದು.

ಅಂಗಾಂಗ ರಚನೆ ಮತ್ತು ಆಹಾರ : ಪ್ರಾಣಿಗಳ ಅಂಗಾಂಗ ರಚನೆಯಲ್ಲಿ ಮಾಂಸಾಹಾರಕ್ಕೆ ಬಹಳ ಮುಖ್ಯ ವಾದದ್ದು ಬಾಗಿ ಮುಂಚಾಚಿಕೊಂಡಿರುವ ಕೋರೆಹಲ್ಲುಗಳು. ಮಾಂಸವನ್ನು ಹರಿಯಲು ಅತ್ಯಾವಶ್ಯಕವಾದ ಚೂಪು ಹಲ್ಲು ಗಳು ಮಾಂಸಾಹಾರಿ ಪ್ರಾಣಿಗಳಲ್ಲಿ ಮಾತ್ರ ಕಾಣುತ್ತವೆಯೇ ಹೊರತು, ಸಸ್ಯಾಹಾರಿ ಪ್ರಾಣಿಗಳಲ್ಲಾಗಲೀ ಅಥವಾ ಮಾನವನ ಲ್ಲಾಗಲೀ ಅಂತಹ ಹಲ್ಲುಗಳು ಕಂಡುಬರುವುದಿಲ್ಲ. ಮನುಷ್ಯನಲ್ಲಿ ರುವ ಕೋರೆಹಲ್ಲುಗಳು ಆತನ ದಂತಪಂಕ್ತಿಯಲ್ಲಿನ ಇತರ ಹಲ್ಲು ಗಳಿಗೆ ಸಮವಾಗಿವೆ ಎಂಬ ಅಂಶದತ್ತ ಡಾ. ರಿಚರ್ಡ್ ಓವೆನ್ F.R.C.S., ಪ್ರೊ. ವಿಲಿಯಂ ಲಾರೆನ್ಸ್ F.R.S. ಮೊದಲಾದ ವರು ನಮ್ಮ ಗಮನವನ್ನು ಸೆಳೆದಿದ್ದಾರೆ. ಇಷ್ಟಲ್ಲದೆ ಅವರ ಪ್ರಕಾರ ಸಸ್ಯಾಹಾರ ಸೇವನೆಯು ಮನುಷ್ಯನ ದೇಹ ರಚನೆಗೆ ಅನುಗುಣವಾಗಿದೆ. ಉದಾಹರಣೆಗೆ, ಸಸ್ಯಾಹಾರಿ ಪ್ರಾಣಿ ಗಳಾದ ವಾನರರು, ಮಂಗಗಳು ಮತ್ತು ಇತರ ಕೆಲವು ಸಸ್ತನಿ ಗಳ ದೇಹ ರಚನೆ ಹಾಗೂ ಮಾನವ ದೇಹ ರಚನೆಗಳ ನಡುವೆ ಗಣನೀಯ ಸಾಮ್ಯ ಕಂಡುಬರುತ್ತದೆ. ಹೀಗೆಯೇ ಮಾಂಸಾ ಹಾರಿ ಪ್ರಾಣಿಗ ಕಣ್ಣುಗಳು ಸೂರ್ಯ ಪ್ರಕಾಶವನ್ನು ಎದು ರಿಸಲಾರವು ಮತ್ತು ಅವುಗಳ ಮರಿಗಳು ಹುಟ್ಟಿದ ಕೆಲವು ದಿನ ಗಳ ವರೆಗೆ ತಮ್ಮ ಕಣ್ಣುಗಳನ್ನು ತೆರೆಯಲಾರವು. ತದ್ವಿರುದ್ಧ ವಾಗಿ, ಶಾಕಾಹಾರಿ ಪ್ರಾಣಿಗಳ ಮರಿಗಳೂ, ಮಾನವ ಶಿಶು ಗಳೂ ಹುಟ್ಟಿದ ಸ್ವಲ್ಪ ಸಮಯದಲ್ಲಿಯೇ ತಮ್ಮ ಕಣ್ಣುಗಳನ್ನು ತೆರೆಯಬಲ್ಲವು. ಮತ್ತೊಂದು ಗಮನಾರ್ಹ ವ್ಯತ್ಯಾಸವೆಂದರೆ,

ಹಸಿವಿನ ಸಂತೃಪ್ತಿ ಜೀವಿಯ ಬದುಕಿಗಾಗಿ ಅನಿವಾರ್ಯ ವೆಂದಮೇಲೆ ಆ ಸಂತೃಪ್ತಿಗೆ ಬೇಕಾದ ಆಹಾರ ಯಾವುದು ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇಂತಹ ಪ್ರಶ್ನೆ ನಿರುಪಯುಕ್ತ ವೆನಿಸಬಹುದು.ಕೆಲವರಿಗೆ. ಆದರೆ ಮಾನವ ಮತ್ತು ಇತರ ಜೀವ ವರ್ಗಗಳ ಜೀವನ ರಹಸ್ಯದ ಹಾಗೂ ಆಗುಹೋಗುಗಳ ಬಗ್ಗೆ ಚಿಂತನೆ ಮಾಡುವ, ಮಾಡಬಲ್ಲಂತಹ ವಿವೇಕಶಾಲಿಗಳಿಗೆ ಮೇಲಿನ ಪ್ರಶ್ನೆಯು ಅರ್ಥಪೂರ್ಣವೆನಿಸದಿರದು.

ಇತಿಹಾಸದ ಪುಟಗಳನ್ನು ತಿರುವಿದಾಗ, ಮಾನವನು ತನ್ನ ಆಹಾರಕ್ಕಾಗಿ ಪ್ರಕೃತಿಯಲ್ಲಿರುವ ಸಸ್ಯ ಮತ್ತು ಪ್ರಾಣಿ ಸಂಪತ್ತುಗಳನ್ನು ಬಳಸಿಕೊಂಡು ಬಂದಿರುವುದು ಕಂಡುಬರು ತ್ತದೆ. ಆದರೆ ಈ ಎರಡು ರೀತಿಯ ಆಹಾರ ಪದಾರ್ಥಗಳ ನೈತಿಕ ಹಿನ್ನೆಲೆಯ ಬಗ್ಗೆ ಪ್ರಾಜ್ಞರು ಇತಿಹಾಸದಾದ್ಯಂತ ಜಿಜ್ಞಾಸೆ ನಡೆಸಿರುವುದು ನಮಗೆ ಗೋಚರವಾಗುತ್ತದೆ. ಮಾನ ವನ ಪ್ರಾಕೃತಿಕ ಆಹಾರ ಯಾವುದು ? ಸಾರ್ಥಕವಾದ ಬದು ಕನ್ನು ಸಾಗಿಸಲು ಆತನು ತನ್ನಂತೆಯೇ ನೋವು ನಲಿವುಗಳಿಗೆ ಒಳಗಾಗುವಂತಹ ಪ್ರಾಣಿಗಳನ್ನು ಕೊಂದು ತಿನ್ನಬೇಕಾದುದು ಅನಿವಾರ್ಯವೇ ? ಬದುಕುವುದು ಮಾನವನ ಮೂಲಭೂತ ಹಕ್ಕೆನಿಸಿದರೆ, ಪ್ರಾಣಿಗಳಿಗೂ ಅದು ಮೂಲಭೂತವೆನಿಸುವು ದಿಲ್ಲವೇ ? ಇತರ ಪ್ರಾಣಿಗಳನ್ನು ಕೊಂದು ಅವುಗಳ ಮಾಂಸ ದಿಂದ ತನ್ನ ಹೊಟ್ಟೆತುಂಬಿಕೊಳ್ಳುವ ಹಕ್ಕು ಮಾನವನಿ ಗಿದೆಯೇ ? ಮಾನವನ ದೇಹಕ್ಕೆ ಬೇಕಾದ ಪೋಷಕಾಂಶಗಳು ಸಸ್ಯಸಂಪತ್ತಿನಿಂದ ದೊರೆಯಲಾರವೇ ? ಅನಿಷ್ಟವೆನಿಸು

ವಂತೆ ಬೆಳೆಯುತ್ತಿರುವ ಜಗತ್ತಿನ ಜನಸಂಖ್ಯೆಯ ಆಹಾರಾಗತ್ಯ ಗಳನ್ನು ಸಸ್ಯ ಸಂಪತ್ತಿನಿಂದ ಪೂರೈಸಲಾಗುವುದಿಲ್ಲವೇ? ಜೀವಿಸ ಲೆಂದು ಹೋರಾಡುವ ಮೂಕ ಪಶುಗಳ ಬಗ್ಗೆ ಸರಿತಪ್ಪುಗಳ, ಒಳಿತುಕೆಡುಕುಗಳ ಪ್ರಜ್ಞೆಯುಳ್ಳ ಮಾನವನ ನೈತಿಕ ಹೊಣೆಗಾರಿಕೆ ಎಂತಹದು ? – ಇಂತಹ ಹಲವು ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳನ್ನು ಕೊಡುವ ಪ್ರಯತ್ನ ನಡೆದಿದ ಮತ್ತು ಈ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಕೆಲವು ಲೇಖನಗಳು ಈಗಾ ಗಲೇ ಪ್ರಕಟವಾಗಿವೆ. ಈ ಪುಟ್ಟ ಪುಸ್ತಿಕೆಯಲ್ಲಿ, ಮಾನವನ ಪ್ರಾಕೃತಿಕ ಆಹಾರಕ್ಕೆ ಸಂಬಂಧಿಸಿದಂತೆ ಒಂದು ಸ್ಥೂಲ ಆದರೂ ಸಮಗ್ರ ಪರಿಶೀಲನೆ ನಡೆಸುವ ಪ್ರಯತ್ನ ಮಾಡಲಾಗಿದೆ.

ಮಾನವನ ಪ್ರಾಕೃತಿಕ ಆಹಾರ

ಪ್ರಾಣಿಗಳು ಸೇವಿಸುವ ಆಹಾರದ ಆಧಾರದ ಮೇಲೆ ಅವುಗಳನ್ನು ಮಾಂಸಾಹಾರಿ ಮತ್ತು ಸಸ್ಯಾಹಾರಿ ಪ್ರಾಣಿ ಗಳೆಂದು ಒಂದು ಸಾಧಾರಣ ವರ್ಗೀಕರಣ ಮಾಡಲಾಗಿದೆ. ಈ ವರ್ಗೀಕರಣಕ್ಕೆ ಆಧಾರವೆಂದರೆ, ಪ್ರಾಣಿಗಳಲ್ಲಿ ಸಹಜವಾಗಿ ಕಂಡುಬರುವ ಆಹಾರಾಯ್ಕೆ. ಹುಲಿ, ಸಿಂಹ, ತೋಳ ಮುಂತಾದ ಕ್ರೂರ ಮೃಗಗಳು ಸಹಜವಾಗಿ ತಮ್ಮ ಆಹಾರಕ್ಕಾಗಿ ಇತರ ಪ್ರಾಣಿಗಳನ್ನು ಆಯ್ದುಕೊಂಡರೆ, ಹಸು, ಕುದುರೆ, ಆನೆ, ಕಾಡುಕೋಣ ಮುಂತಾದ ಪ್ರಾಣಿಗಳು ಸಸ್ಯಗಳನ್ನು ಸೇವಿಸಿ ತಮ್ಮ ಬದುಕನ್ನು ಸಾಗಿಸುತ್ತವೆ. ಬೆಕ್ಕು ನಾಯಿ

ಮುಂತಾದ ಮಾಂಸಾಹಾರಿ ಪ್ರಾಣಿಗಳು ಧಾನ್ಯಗಳ ಆಹಾರವನ್ನೂ ಸೇವಿಸುವುದನ್ನು ನಾವು ಕಾಣಬಹುದಾದರೂ ಅವು ಮಾಂಸಾಹಾರಿ ಪ್ರಾಣಿವರ್ಗಕ್ಕೆ ಸೇರುತ್ತವೆ ಎಂಬುದು ನಿರ್ವಿವಾದ ಅಂಶ. ಆದರೆ ಮಾನವನು ಈ ಎರಡರಲ್ಲಿ ಯಾವ ವರ್ಗಕ್ಕೆ ಸೇರುತ್ತಾನೆ ಎಂಬುದೇ ನಮ್ಮ ಮುಂದಿರುವ ಪ್ರಮುಖ ಪ್ರಶ್ನೆ. ಇಂತಹ ಪ್ರಶ್ನೆಗೆ ಆಧಾರ ಮಾನವನಲ್ಲಿ ಕಂಡುಬರುತ್ತಿರುವ ಮಿಶ್ರಾಹಾರ ಪ್ರಿಯತೆ. ಇಡೀ ಮಾನವ ಜನಾಂಗವನ್ನೇ ಪರಿಗಣಿಸಿದಾಗ ಕೆಲವರು ನಿಶ್ಚಿತ ಶಾಕಾಹಾರಿಗಳೂ, ಹಲವರು ಮಿಶ್ರಾಹಾರಿಗಳೂ ಕಂಡುಬರುತ್ತಾರೆ. ಆದರೆ ನಿಶ್ಚಿತ ಮಾಂಸಾಹಾರಿಗಳೆನಿಸಿಕೊಳ್ಳುವವರು ಬಹಳ ಅಪರೂಪ, ಇಲ್ಲವೇ ಇಲ್ಲವೆಂದರೂ ಬಹುಶಃ ತಪ್ಪಾಗದು. ಮಿಶ್ರಾಹಾರಿಗಳೆನಿಸಿಕೊಳ್ಳುವವರ ಸಂಖ್ಯೆ ಹೆಚ್ಚಾಗಿದ್ದಂತೆ ಕಂಡರೂ, ಅವರಲ್ಲಿ ಹಲವರು ಸೇವಿಸುವ ಆಹಾರದಲ್ಲಿ ಮಾಂಸವು ಸ್ವಲ್ಪ ಮಾತ್ರವಿರುತ್ತದೆ ಎಂಬುದು ಗಮನಿಸಬೇಕಾದ ಅಂಶ. ಪೂರ್ಣ ಮಾಂಸಾಹಾರಿ ಎನಿಸಿಕೊಳ್ಳುವಂತಹ ಜನರೇ ಅಪರೂಪ ಎಂದ ಮೇಲೆ, ಮಾಂಸವು ಮಾನವನ ಸಹಜ ಆಹಾರ ಎನಿಸಿಕೊಳ್ಳಲಾರದು. ಸುಮಾರು ನೂರಕ್ಕೆ ೯೯ ಮಂದಿ ಒಂದಿಲ್ಲ ಒಂದು ರೂಪದಲ್ಲಿ ಸಸ್ಯಪದಾರ್ಥಗಳನ್ನು ಸೇವಿಸುವುದನ್ನು ಕಂಡಾಗ 'ಮಾನವನು ಪ್ರಾಕೃತಿಕವಾಗಿ ಶಾಕಾಹಾರಿ' ಎಂಬ ಸತ್ಯ ನಮಗೆ ವೇದ್ಯವಾಗದಿರದು. ಇದಕ್ಕೆ ಅನೇಕ ಸಮರ್ಥ ಪುರಾವೆಗಳು ನಮಗೆ ದೊರೆಯುತ್ತವೆ. ಅವುಗಳಲ್ಲಿ ಪ್ರಧಾನವಾಗಿ ಅಂಗಾಂಗ ರಚನೆಯನ್ನು ನಾವು ಪರಿಶೀಲಿಸಬಹುದು.

ಅಂಗಾಂಗ ರಚನೆ ಮತ್ತು ಆಹಾರ : ಪ್ರಾಣಿಗಳ ಅಂಗಾಂಗ ರಚನೆಯಲ್ಲಿ ಮಾಂಸಾಹಾರಕ್ಕೆ ಬಹಳ ಮುಖ್ಯವಾದದ್ದು ಬಾಗಿ ಮುಂಚಾಚಿಕೊಂಡಿರುವ ಕೋರೆಹಲ್ಲುಗಳು. ಮಾಂಸವನ್ನು ಹರಿಯಲು ಅತ್ಯಾವಶ್ಯಕವಾದ ಚೂಪು ಹಲ್ಲುಗಳು ಮಾಂಸಾಹಾರಿ ಪ್ರಾಣಿಗಳಲ್ಲಿ ಮಾತ್ರ ಕಾಣುತ್ತವೆಯೇ ಹೊರತು, ಸಸ್ಯಾಹಾರಿ ಪ್ರಾಣಿಗಳಲ್ಲಾಗಲೀ ಅಥವಾ ಮಾನವನಲ್ಲಾಗಲೀ ಅಂತಹ ಹಲ್ಲುಗಳು ಕಂಡುಬರುವುದಿಲ್ಲ. ಮನುಷ್ಯನಲ್ಲಿರುವ ಕೋರೆಹಲ್ಲುಗಳು ಆತನ ದಂತಪಂಕ್ತಿಯಲ್ಲಿನ ಇತರ ಹಲ್ಲುಗಳಿಗೆ ಸಮವಾಗಿವೆ ಎಂಬ ಅಂಶದತ್ತ ಡಾ. ರಿಚರ್ಡ್ ಓವೆನ್ F.R.C.S., ಪ್ರೊ. ವಿಲಿಯಂ ಲಾರೆನ್ಸ್ F.R.S. ಮೊದಲಾದವರು ನಮ್ಮ ಗಮನವನ್ನು ಸೆಳೆದಿದ್ದಾರೆ. ಇಷ್ಟಲ್ಲದೆ ಅವರ ಪ್ರಕಾರ ಸಸ್ಯಾಹಾರ ಸೇವನೆಯು ಮನುಷ್ಯನ ದೇಹ ರಚನೆಗೆ ಅನುಗುಣವಾಗಿದೆ. ಉದಾಹರಣೆಗೆ, ಸಸ್ಯಾಹಾರಿ ಪ್ರಾಣಿಗಳಾದ ವಾನರರು, ಮಂಗಗಳು ಮತ್ತು ಇತರ ಕೆಲವು ಸಸ್ತನಿಗಳ ದೇಹ ರಚನೆ ಹಾಗೂ ಮಾನವ ದೇಹ ರಚನೆಗಳ ನಡುವೆ ಗಣನೀಯ ಸಾಮ್ಯ ಕಂಡುಬರುತ್ತದೆ. ಹೀಗೆಯೇ ಮಾಂಸಾಹಾರಿ ಪ್ರಾಣಿಗ ಕಣ್ಣುಗಳು ಸೂರ್ಯ ಪ್ರಕಾಶವನ್ನು ಎದುರಿಸಲಾರವು ಮತ್ತು ಅವುಗಳ ಮರಿಗಳು ಹುಟ್ಟಿದ ಕೆಲವು ದಿನಗಳ ವರೆಗೆ ತಮ್ಮ ಕಣ್ಣುಗಳನ್ನು ತೆರೆಯಲಾರವು. ತದ್ವಿರುದ್ಧವಾಗಿ, ಶಾಕಾಹಾರಿ ಪ್ರಾಣಿಗಳ ಮರಿಗಳೂ, ಮಾನವ ಶಿಶುಗಳೂ ಹುಟ್ಟಿದ ಸ್ವಲ್ಪ ಸಮಯದಲ್ಲಿಯೇ ತಮ್ಮ ಕಣ್ಣುಗಳನ್ನು ತೆರೆಯಬಲ್ಲವು. ಮತ್ತೊಂದು ಗಮನಾರ್ಹ ವ್ಯತ್ಯಾಸವೆಂದರೆ,

ಮಾಂಸಾಹಾರಿ ಪ್ರಾಣಿಗಳು ನೀರನ್ನು ತಮ್ಮ ನಾಲಿಗೆಯಿಂದ ನೆಕ್ಕಿ ಕುಡಿದರೆ, ಶಾಕಾಹಾರಿ ಪ್ರಾಣಿಗಳೂ, ಮನುಷ್ಯರೂ ನೀರನ್ನು ತಮ್ಮ ತುಟಿಗಳಿಂದ ಹೀರಿ ದಾಹ ತೀರಿಸಿಕೊಳ್ಳುವುದು. ಮಾನವನ ಅಂಗಾಂಗ ರಚನೆ ಮತ್ತು ಆತನ ಆಹಾರಕ್ಕೆ ಸಂಬಂಧಿಸಿದಂತೆ ಡಾ. ಸಿಲ್ವೆಸ್ಟರ್ ಗ್ರಹಾಂ ಹೇಳಿದ, "ಹಣ್ಣುಗಳು ಮತ್ತು ಕಾಯಿಪಲ್ಲೆಗಳನ್ನು ಸೇವಿಸಿ ಜೀವಿಸಲು ರೂಪಗೊಂಡಿರುವ ಮಾನವನು, ಸ್ವಾಭಾವಿಕವಾಗಿ ಶಾಕಾಹಾರಿ ಪ್ರಾಣಿ ಎಂಬುದನ್ನು ತೌಲನಿಕ ಅಂಗಾಂಗ ಶಾಸ್ತ್ರವು ಸಮರ್ಥಿಸುತ್ತದೆ" ಎಂಬ ಮಾತುಗಳು ಗಮನಾರ್ಹವಾಗಿವೆ. ಒಟ್ಟಿನಲ್ಲಿ, ದೇಹ ರಚನೆ ಮತ್ತು ಕ್ರಿಯೆಗಳಲ್ಲಿ ಶಾಕಾಹಾರಿ ಪ್ರಾಣಿಗಳೊಂದಿಗೆ ಮಾನವನಿಗಿರುವ ಕೆಲವು ಸಾಮ್ಯಗಳನ್ನು ನೋಡಿದಾಗ, ಮಾನವನು ಸಹಜವಾಗಿ ಶಾಕಾಹಾರಿ ಎನ್ನುವುದರಲ್ಲಿ ಆಶ್ಚರ್ಯವಿಲ್ಲ.

ಮಾನವನು ಪ್ರಾಕೃತಿಕವಾಗಿ ಶಾಕಾಹಾರಿ ಎಂಬುದಕ್ಕೆ ಮತ್ತೊಂದು ಪ್ರಬಲ ಪುರಾವೆಯೆಂದರೆ ಶಿಶುಗಳ ಆಹಾರಾಯ್ಕೆ. ಅವುಗಳ ಎದುರಿಗೆ ಹಣ್ಣು ಮತ್ತು ಮಾಂಸದ ಮುದ್ದೆಗಳನ್ನಿಟ್ಟಾಗ ಮತ್ತು ಅವು ಸಹಜವಾಗಿ ಹಣ್ಣುಗಳನ್ನು ಆರಿಸಿಕೊಳ್ಳುವುದನ್ನು ನೋಡಿದಾಗ ಮಾನವನ ಒಲವು ಎತ್ತ ಕಡೆಗಿದೆ ಎಂಬುದು ಸ್ಪಷ್ಟವಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ರೂಸೋ ಆಡಿದ ಮಾತುಗಳು ಗಮನಾರ್ಹವಾಗಿವೆ : "ಮಾಂಸಕ್ಕಾಗಿರುವ ಲಾಲಸೆಯು ಮನುಷ್ಯನಲ್ಲಿ ಸ್ವಾಭಾವಿಕವಲ್ಲವೆಂಬುದನ್ನು ಸಮರ್ಥಿಸಲು ಮಕ್ಕಳು ಎಲ್ಲಾ ರೀತಿಯ ಮಾಂಸದತ್ತ ಉದಾಸೀನರಾಗಿರುತ್ತಾರೆಯಲ್ಲದೆ ಸ್ವಾಭಾವಿಕ ಆಹಾರ ಮತ್ತು

ಹಣ್ಣುಗಳ ಬಗ್ಗೆ ತಮ್ಮ ಆನಂದವನ್ನು ತೋರಿಸುತ್ತಾರೆ ಎಂಬುದನ್ನು ತಿಳಿಸಿದರೆ ಸಾಕು."

ಮಾನವನು ಪ್ರಾಕೃತಿಕವಾಗಿ ಶಾಕಾಹಾರಿ ಎಂಬುವನ್ನು ನಾವು ಐತಿಹಾಸಿಕವಾಗಿಯೂ ಪ್ರತಿಪಾದಿಸಬಹುದು. ಇತಿಹಾಸ ಪೂರ್ವ ಮಾನವನು ತನ್ನ ಹಸಿವನ್ನು ಹಿಂಗಿಸಿಕೊಳ್ಳುವ ಸಲುವಾಗಿ ಕಾಡುಪ್ರಾಣಿಗಳ ಅನುಕರಣೆಯಿಂದ ಮಾಂಸವನ್ನು ತಿನ್ನುತ್ತಿದ್ದಿರಬಹುದು. ಆದರೆ ಹಕ್ಕಿ ಪಕ್ಷಿಗಳು ತಿನ್ನುತ್ತಿದ್ದ ಹಣ್ಣುಗಳತ್ತ ಅವನ ಒಲವು ಹರಿದದ್ದು ಸಹಜವೆನಿಸುತ್ತದೆ. ಕ್ರಮೇಣ ಆತನು ಆಹಾರಕ್ಕಾಗಿ ಬೇಟೆಯಾಡುವುದರಿಂದ ವಿಮುಖನಾಗುತ್ತಾ ಬಂದು, ತನ್ನ ಉಪಜೀವಿಕೆಗಾಗಿ ಕೃಷಿಯನ್ನೂ ಅನಂತರ ವಾಣಿಜ್ಯ ಮತ್ತು ಕೈಗಾರಿಕೆಗಳನ್ನೂ ಆಶ್ರಯಿಸಿದ್ದು ಆತನ ಆಹಾರಾಪೇಕ್ಷೆಯ ದಿಸೆಯನ್ನು ಸೂಚಿಸುತ್ತದೆ. ಅಲ್ಲದೆ. ಇಂದು ಮನುಷ್ಯರು ಸಾಮಾನ್ಯವಾಗಿ ಆಡುವ ಬೇಟೆಯು. ಅವರ ಕ್ರೀಡಾಸಕ್ತಿಯ ಕುರುಹಾಗಿದೆಯಲ್ಲದೆ ಮಾಂಸಾಹಾರದ ಅಪೇಕ್ಷೆಯ ದ್ಯೋತಕವಲ್ಲ. ಸಸ್ಯಗಳ ಅಭಾವವಿರುವ ಪ್ರದೇಶಗಳಲ್ಲಿ ಇಂದೂ ಕೂಡ ಎಸ್ಕಿಮೋ ಜನರಂಥವರಿಗೆ ಮಾಂಸಾಹಾರವು ಅನಿವಾರ್ಯವೆನಿಸುತ್ತದೆಯೇ ವಿನಹ ಅದು ಅವರಿಗೆ ಸಹಜವೆನಿಸದು. ಆದರೆ ಸಸ್ಯ ಸಂಪತ್ತು ಹೇರಳವಾಗಿರುವ ಕಡೆಗಳಲ್ಲಿಯೂ ಇಂದು ಹಲವರು ಮಾಂಸ ಲಾಲಸೆಗೆ ಒಳಗಾಗಿರುವುದರ ಮರ್ಮವನ್ನು ಅರಿತಲ್ಲಿ ಮಾನವನ ಮಿಶ್ರಾಹಾರ ಪ್ರಿಯತೆಯ ಬಣ್ಣ ಬೆಳಗಾಗುವುದರಲ್ಲಿ ಸಂಶಯವಿಲ್ಲ.

ಕೆಲವು ವಾದಗಳು

ಮಾಂಸಭಕ್ಷಣೆಯಲ್ಲಿ ಆಸಕ್ತರಾಗಿರುವವರು ತಮ್ಮ ವರ್ತನೆಯ ಸಮರ್ಥನೆಗಾಗಿ ಕೆಲವು ವಾದಗಳನ್ನು ಮುಂದಿಡುತ್ತಾರೆ. ಅವುಗಳಲ್ಲಿ ಪ್ರಧಾನವಾದವುಗಳು :

'ಜೀವೋ ಜೀವಸ್ಯ ಜೀವನಂ'- (Life breeds on life) ಜೀವಿಯು ಜೀವಿಯನ್ನು ತಿಂದು ಬದುಕುವುದು ಪ್ರಕೃತಿ ನಿಯಮವಾಗಿರುವಾಗ ಸಸ್ಯ ಮತ್ತು ಮಾಂಸ ಭಕ್ಷಣಗಳಲ್ಲಿ ನೈತಿಕವಾಗಿ ಭೇದವಿಲ್ಲ !

ವ್ಯಕ್ತಿಯ ದೇಹವು ಬಲಿಷ್ಠವಾಗಿ ಬೆಳೆಯಲು ಮತ್ತು ಆತನಲ್ಲಿ ಧೈರ್ಯ ಸ್ಥೈರ್ಯಗಳು ತುಂಬಿರಲು ಮಾಂಸಾಹಾರ ಹೆಚ್ಚು ಸಹಕಾರಿ !

ದೇಹಕ್ಕೆ ಬೇಕಾದ ಪೌಷ್ಟಿಕಾಂಶಗಳೆಲ್ಲಾ ಶಾಕಾಹಾರದಲ್ಲಿ ದೊರೆಯಲಾರವು ಆದ್ದರಿಂದ ಮಾಂಸಾಹಾರ ಅಗತ್ಯ !

"ಸಂಸಾರದ ಫಲಮಾವುದೋ ಬಿಸುಟು ಕಳ್ಳುಮಂ ಮಾಂಸಮುಂ"— ಮದ್ಯಮಾಂಸಗಳನ್ನು ಸೇವಿಸದಿದ್ದರೆ ಸಂಸಾರ ಸುಖವೆಂಬುದು ನಿರರ್ಥಕ !

ಜಗತ್ತಿನಲ್ಲಿ ವಿಪರೀತವಾಗಿ ಬೆಳೆಯುತ್ತಿರುವ ಜನಸಂಖ್ಯೆಯ ಆಹಾರಾಗತ್ಯಗಳ ಪೂರೈಕೆಗಾಗಿ ಮಾಂಸ ಸೇವನೆ ಅನಿವಾರ್ಯ !

ಮಾಂಸಕ್ಕಾಗಿ ಮಾಡಲಾಗುವ ಪ್ರಾಣಿವಧೆಯಲ್ಲಿ ನೇರ ವಾಗಿ ಪಾಲ್ಗೊಳ್ಳದಿರುವುದರಿಂದ ಪ್ರಾಣಿವಧೆಯ ನೈತಿಕ ಹೊಣೆಗಾರಿಕೆ ಮಾಂಸಾಹಾರಿಗಳ ಮೇಲೆ ಬೀಳುವುದಿಲ್ಲ ! ಮೇಲೆ ಪ್ರಸ್ತಾಪಿಸಲಾದಂತಹ ವಿತಂಡ ವಾದಗಳ ಅನುಭವಿಕ, ತಾರ್ಕಿಕ, ನೈತಿಕ ಹಾಗೂ ಧಾರ್ಮಿಕ ಆಧಾರಗಳೇನೆಂಬುದನ್ನು ಸ್ವಲ್ಪ ವಿಶದವಾಗಿ ಪರಿಶೀಲಿಸುವುದುತ್ತಮ.

ಆಹಾರಕ್ಕಾಗಿ ಪ್ರಾಣಿವಧೆ

ಬದುಕಲು ಹೆಣಗುತ್ತಿರುವ ಜೀವಿಯೊಂದು ಮತ್ತೊಂದು ಜೀವಿಯನ್ನು ಸೇವಿಸ ಬೇಕಾಗುತ್ತದೆ ಎಂಬ ಮಾತನ್ನು ಬಹುಶಃ ಯಾರೂ ಅಲ್ಲಗಳೆಯಲಾರರು. ಸಸ್ಯಗಳಲ್ಲಿಯೂ ಜೀವವಿದೆ ಹಾಗೂ ಭಾವನಾನುಭವವಿದೆ ಎಂಬ ಸತ್ಯವನ್ನು ಸಾವಿರಾರು ವರ್ಷಗಳ ಹಿಂದೆಯೇ ಜ್ಞಾನಿಗಳು ನಿಖರವಾಗಿ ಅರಿತಿದ್ದರೆಂಬುದಕ್ಕೆ ಸ್ಪಷ್ಟ ಶಾಸ್ತ್ರಾಧಾರಗಳಿವೆ. ಈ ಅಂಶವನ್ನು ತಿಳಿಯದಿದ್ದ ಕೆಲವರು, ಸಸ್ಯಗಳಿಗೆ ಜೀವವಿದೆ ಎಂಬುದನ್ನು ಸರ್ ಜಗದೀಶಚಂದ್ರ ಬೋಸರು ೧೯೦೨ ರಲ್ಲಿ ತೋರಿಸಿ ಕೊಟ್ಟರು ಮತ್ತು ಸಸ್ಯಗಳಿಗೂ ಭಾವನಾನುಭವಗಳಿವೆ ಎಂಬುದನ್ನು ಕ್ಲೀವ್ ಬ್ಯಾಕ್‌ಸ್ಟರ್ ೧೯೬೬ ರಲ್ಲಿ ವಿದ್ಯುನ್ಮಾಪಕ

ಗಳ ನೆರವಿನಿಂದ ತೋರಿಸಿಕೊಟ್ಟರು* ಎಂದು ಹೇಳುವುದು ಸಹಜವೇ ಸರಿ. ಒಟ್ಟಿನಲ್ಲಿ ಯಾರೇ ಹೇಳಿರಲಿ ಸಸ್ಯಗಳಲ್ಲಿ ಜೀವವಿದೆ ಹಾಗೂ ತೀವ್ರತರ ಭಾವನಾನುಭವಗಳೂ ಇವೆ ಎಂಬುದು ನಿರ್ವಿವಾದ ಸತ್ಯ. ಹಾಗೆಂದ ಮೇಲೆ, ಆಹಾರದ ದೃಷ್ಟಿಯಿಂದ ಸಸ್ಯ ಮತ್ತು ಪ್ರಾಣಿಗಳು ಸಮವೆಂದು ಪರಿಗಣಿಸುವುದು ಸರಿಯೇ ? ಇದಕ್ಕೆ 'ಸರಿ'ಎಂದು ಉತ್ತರಿಸುವವರಿಗೆ ಕಾದಿರುವ ಸವಾಲೆಂದರೆ 'ನರಭಕ್ಷಣೆ ಯಾಕೆ ಮಾಡಬಾರದು?' ಎಂಬುದು.ಆದರೆ ಇಂತಹ ಸವಾಲು ಎದುರಾದಾಗ ನಾಗರೀಕ ಮಾಂಸಾಹಾರಿಯ ಎದೆಯೂ ನಡುಗದಿರದು. ಅವನ ತತ್‌ಕ್ಷಣದ ತೀವ್ರಪ್ರತಿಕ್ರಿಯೆ— 'ಕೂಡದು, ಅದು ಅಮಾನುಷ ಕೃತ್ಯ' ಎಂಬುದು. ನರಭಕ್ಷಕರ ಬಗ್ಗೆ ಆತನಲ್ಲಿ ಹೇಯ ಭಾವನೆಯುಂಟಾಗುತ್ತದೆ. ಆದರೆ ಶಾಕಾಹಾರಿಗಳ ದೃಷ್ಟಿಯಲ್ಲಿ ಮಾಂಸಾಹಾರಿಗಳೂ ಕೂಡ ಅಂತಹ ಹೇಯ ಭಾವನೆಯನ್ನೇ ಮೂಡಿಸುತ್ತಾರೆ ಎಂಬುದನ್ನು ನಾವೆಲ್ಲಾ ಮನಗಾಣಬೇಕಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಡಾಕ್ಟರ್ ಸ್ಟೀವನ್‌ಸನ್ ಹೇಳಿರುವ ಮರೆಯಲಾಗದ ಮಾತುಗಳು– "ನರಭಕ್ಷಣೆಗಿಂತ ಮತ್ತಾವ ಹೇಯ ಕೃತ್ಯವೂ ನಮ್ಮ ಜುಗುಪ್ಸೆಯನ್ನು ಕೆರಳಿಸುವುದಿಲ್ಲ. ಅದರಂತೆಯೇ

---

* ವಿವರಗಳಿಗೆ ನೋಡಿ— Geeta .Doctor, Vegetaria--nism Illustrated Weekly vol. XCVI,42, Oct. 1975 and
ಎಸ್. ಎನ್. ರವೀಂದ್ರನಾಥ., ಸಸ್ಯಗಳಿಗೂ ಬೇಕು ಸಂಗೀತ- ನಾಟ್ಯ, ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, ೨೩–೧೧–೭೫

ಬೌದ್ಧ ಮತ್ತು ಇತರ ಸಸ್ಯಾಹಾರಿಗಳಲ್ಲಿ ಇದೇ ರೀತಿಯ ಹೇವರಿಕೆಯನ್ನು ಮಾಂಸಾಹಾರಿಗಳಾದ ನಾವು ಮೂಡಿಸುತ್ತೇವೆ. ಏಕೆಂದರೆ ನಾವು ನಮ್ಮವೇ ಅಲ್ಲದಿದ್ದರೂ, ಇತರ ಪ್ರಾಣಿಗಳ ಶಿಶುಗಳನ್ನು ಭಕ್ಷಿಸುತ್ತೇವೆ." ಜೀವಿಗಳಲ್ಲಿಯೇ ಅತಿಶ್ರೇಷ್ಠನೆಂದು ಹೆಮ್ಮೆಪಟ್ಟುಕೊಳ್ಳುತ್ತಿರುವ ಮಾನವನ ನೈತಿಕ ಹೊಣೆಗಾರಿಕೆಯು ಇತರ ಪ್ರಾಣಿಗಳ ವಿಷಯದಲ್ಲಿ ಎಷ್ಟೆಂಬುದು ಈ ಮಾತುಗಳಿಂದ ನಮಗೆ ವೇದ್ಯವಾಗದಿರದು. ಅಜ್ಞಾನಿಗಳೆನಿಸಿದ ಕ್ರೂರ ಮೃಗಗಳೂ ಕೂಡ ತಮ್ಮ ಶಿಶುಗಳನ್ನು ಸಾಮಾನ್ಯವಾಗಿ ಭಕ್ಷಿಸವು. ನರಭಕ್ಷಕರೂ ತಮ್ಮ ಮಕ್ಕಳನ್ನೂ, ತಮ್ಮ ಜನರನ್ನೂ ಕೊಂದುತಿನ್ನರು. ಅಂದಮೇಲೆ ಅಂಥವರ ಅಂತರಂಗದಲ್ಲಿಯೂ ಜೀವದಯಾಭಾವದ ಕೆಲವಂಶ ಜಾಗೃತವಾಗಿರುವಾಗ, ಇನ್ನು ಪ್ರಜ್ಞಾವಂತನೆನಿಸಿದ ಮಾನವನಲ್ಲಿ ಆ ದಯಾಭಾವದ ದಮನವಾಗುತ್ತಿರುವುದು ದುರ್ದೈವದ ಸಂಗತಿ.

ಜಗತ್ತಿನ ಜೀವರಾಶಿಗಳೆಲ್ಲಾ ಆಹಾರಕ್ಕೆ ಸಂಬಂಧಿಸಿದಂತೆ ಸಮವೆಂದು ವಾದಿಸುವರಲ್ಲಿ ಕೆಲವರು ಅಜ್ಞಾನಿ ವಿಜ್ಞಾನಿಗಳೂ ಸೇರಿರುವುದು ಮಾನವತೆಯ ದುರ್ದೈವ. ಜಪಾನಿನಲ್ಲಿ ನಡೆದ ಒಂದು ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿ ಅಲ್ಲಿ ಅಹಿಂಸಾ ತತ್ತ್ವವನ್ನು ಪ್ರತಿಪಾದಿಸಿದ ಶ್ರೀ ಸುಮೇರುಚಂದ್ ದಿವಾಕರರೊಂದಿಗೆ ಮಾತನಾಡುತ್ತಾ ಒಬ್ಬ ಜಪಾನಿ ರಸಾಯನ ಶಾಸ್ತ್ರಜ್ಞನು ಹೇಳಿದ ಮಾತುಗಳು : "ಮಾಂಸ ಮತ್ತು ಕಾಯಿಪಲ್ಲೆಗಳು ಒಂದೇ ರೀತಿಯ ವಸ್ತುಗಳು. ನೀವು ಮದ್ಯಪಾನವನ್ನು ವಿರೋಧಿಸುತ್ತೀರಿ, ಆದರೆ ಅದು ಅರಿಯದ ಅಭ್ಯಾಸ. ಜಠರವನ್ನು

ಸೇರಿದ ಕೂಡಲೇ ನೀರು ಮದ್ಯಸಾರವಾಗಿ ಪರಿವರ್ತನೆ ಹೊಂದು ತ್ತದೆ ಎಂಬುದು ನಿಮಗೆ ಗೊತ್ತಿರಬಹುದು. ಆದ್ದರಿಂದ ಈ ವಿಜ್ಞಾನ ಯುಗದಲ್ಲಿ, ಆಹಾರ ಮತ್ತು ಪಾನೀಯಗಳ ಮೇಲೆ ಯಾವುದೇ ರೀತಿಯ ನಿರ್ಬಂಧ ಹಾಕುವದನ್ನು ನಾವು ಯೋಚಿಸುವ ಅಗತ್ಯವಿಲ್ಲ"* ಇಂತಹ ಅಭಿಪ್ರಾಯದಿಂದ ಕೂಡಿದ್ದ ಆ ವಿಜ್ಞಾನಿಗೆ, ವಸ್ತುಸ್ಥಿತಿಯನ್ನು ಪರಿಶೀಲಿಸಬೇಕಾದರೆ ವಿವಿಧ ದೃಷ್ಟಿಕೋನಗಳಿಂದ ನೋಡಬೇಕಾಗುತ್ತದೆ ಎಂಬ ಅಂಶವನ್ನು ಮನದಟ್ಟು ಮಾಡಿಕೊಟ್ಟ ಶ್ರೀ ದಿವಾಕರರು "ನಾವು ಸೇವಿಸುವ ಆಹಾರವು ನಮ್ಮ ಆತ್ಮವಿಕಾಸಕ್ಕೂ ಕಾರಣವಾಗಬೇಕೆಂಬುದನ್ನು ಮರೆಯಬಾರದು" ಎಂಬ ಎಚ್ಚರಿಕೆ ಕೊಡುತ್ತಾರೆ. ಸುಣ್ಣದ ನೀರು ಮತ್ತು ಹಾಲು ಈ ಎರಡು ವಸ್ತುಗಳೂ ಬೆಳ್ಳಗೆ ಕಾಣಿಸಿದರೂ, ಸುಣ್ಣದ ನೀರನ್ನು ಹಾಲೆಂದು ಸೇವಿಸುವುದು ಅವಿವೇಕದ ಪರಮಾವಧಿ ಎನಿಸುತ್ತದೆ. ಅದೇ ರೀತಿ, ಹಂದಿ ಮತ್ತು ಅಮೇಧ್ಯಗಳಲ್ಲಿ ರಾಸಾಯನಿಕವಾಗಿ ಇರುವ ಮೂಲವಸ್ತುಗಳಲ್ಲಿ ಸಾಮ್ಯವಿರುವುದಾದರೂ, ಹಂದಿಯು ಇಚ್ಛೆಪಟ್ಟು ಸೇವಿಸುವ ಅಮೇಧ್ಯವನ್ನು ಮನುಷ್ಯನು ಸೇವಿಸಲಾರನು.

ಹೀಗೆ ಸಸ್ಯ ಮತ್ತು ಪ್ರಾಣಿಗಳ ನಡುವಣ ವ್ಯತ್ಯಾಸವನ್ನು ನಾವು ಬಹಳ ಎಚ್ಚರಿಕೆಯಿಂದಲೂ, ಸೂಕ್ಷ್ಮ ರೀತಿಯಿಂದಲೂ ಪರಿಶೀಲಿಸಬೇಕಾಗುತ್ತದೆ. ಆಹಾರದಲ್ಲಿ ಆಯ್ಕಾ ಸ್ವಾತಂತ್ರ್ಯ

---

* S. C. Diwakar, Religion and Peace, All India Digumber Jain Sangh; Mathura: U.P., 1962, Pp 186–187

ವನ್ನು ಪಡೆದಿರುವ ನಾವು ಬದುಕಲು ಅತಿ ಕನಿಷ್ಟ ಮಟ್ಟದ ಹಿಂಸೆಯಲ್ಲಿ ತೊಡಗಬೇಕಾಗುತ್ತದೆ. ಸಸ್ಯ ಮತ್ತು ಪ್ರಾಣಿಗಳು ಪ್ರಕೃತಿ ಮಾತೆಯ ಎದೆಯಲ್ಲಿ ತುಂಬಿ ಪ್ರವಹಿಸುವ ಹಾಲು ಮತ್ತು ರಕ್ತಗಳಿದ್ದಂತೆ. "ತನ್ನ ತಾಯಿಯ ಮೊಲೆಯಲ್ಲಿರುವ ಹಾಲು ಮತ್ತು ರಕ್ತಗಳಲ್ಲಿ ಯಾವುದನ್ನು ಸೇವಿಸಿದರೂ ಮಗುವಿಗೆ ಪೋಷಕಾಂಶಗಳು ದೊರೆಯುತ್ತವೆ. ಆದರೆ ತಾಯಿಯ ರಕ್ತವನ್ನು ಹೀರುವಂತಹ ಹೇಯಕಾರ್ಯವನ್ನು ಮಗುವು ಎಂದೆಂದೂ ಮಾಡದು" ಎಂಬ ಶ್ರೀ ನೇಮಿಸಾಗರಜೀಯವರ ಮಾತುಗಳು ಮಾಂಸಾಹಾರಿಗಳನ್ನೂ ವಿಚಾರಶೀಲರನ್ನಾಗಿ ಮಾಡದಿರಲಾರವು. ಸಸ್ಯವು ಭೋಜ್ಯ ವಸ್ತುವೂ, ಮಾಂಸವು ಅಭೋಜ್ಯ ವಸ್ತುವೂ ಆಗಿವೆ ಎಂಬುದು ಈ ಕೆಳಗಿನ ಶ್ಲೋಕದಲ್ಲಿ ಸ್ಪಷ್ಟವಾಗಿ ಪ್ರತಿಪಾದಿತವಾಗಿರುವುದನ್ನು ಕಾಣಬಹುದು:

ಪ್ರಾಣ್ಯಂಗತ್ವೇ ಸಮೇಽಪ್ಯನ್ನಂ ಭೋಜ್ಯಂ ಮಾಂಸಂ
ನ ಧಾರ್ಮಿಕೈಃ |
ಭೋಗ್ಯಾ ಸ್ತ್ರೀತ್ವಾ ವಿಶೇಷೇಽಪಿ ಜನೈರ್ಜಾಯೈವ
ನಾಂಬಿಕಾ || †

ಸ್ತ್ರೀತ್ವದ ದೃಷ್ಟಿಯಿಂದ ತಾಯಿ ಮತ್ತು ಪತ್ನಿಯರಲ್ಲಿ ಸಾಮ್ಯವಿದ್ದರೂ, ಪತ್ನಿಯು ಮಾತ್ರ ಭೋಗಿಸಲು ಯೋಗ್ಯಳಾಗಿರುವಂತೆ. ಏಕೇಂದ್ರಿಯ ಜೀವವಾದ ಸ್ಥಾವರದ ಧಾನ್ಯರೂಪ ಶರೀರದಲ್ಲಿಯೂ. ತ್ರಸಜೀವಿಗಳ ಮಾಂಸರೂಪವಾದ ಶರೀರ

† ಆಶಾಧರಸೂರಿ, ಸಾಗಾರ ಧರ್ಮಾಮೃತಂ: ಪುಟ ೩೪

ದಲ್ಲಿಯೂ. ಪ್ರಾಣಿಯ ದೇಹವಾಗಿರುವಿಕೆಯು ಸಮಾನವಾಗಿದ್ದರೂ, ಧಾನ್ಯದಿಂದಾಗುವ ಅನ್ನವು ಭೋಜ್ಯವೂ, ಮಾಂಸವು ಅಭೋಜ್ಯವೂ ಆಗಿರುತ್ತದೆ. ಬೇರು ಮರವೆನಿಸಿದರೂ. ಮರಗಳೆಲ್ಲವೂ ಬೇರಲ್ಲ. ಅಂತೆಯೇ ಮಾಂಸವು ಜೀವಶರೀರವಾಗಿದ್ದರೂ. ಜೀವ ಶರೀರಗಳೆಲ್ಲವೂ ಮಾಂಸವಲ್ಲ ಎಂಬುದು ಗಮನಿಸಬೇಕಾದ ಅಂಶ. ಸಪ್ತಧಾತುಮಯವಾದ ಶರೀರದಿಂದ ಉಂಟಾದ ಮಾಂಸಭಕ್ಷಣೆಯು ಹೇಯವಾದುದು. ಆಹಾರಕ್ಕಾಗಿ ಮಾಡುವ ಹಿಂಸೆಯ ತೀವ್ರತೆಯ ದೃಷ್ಟಿಯಿಂದಲೂ ಮಾಂಸಾಹಾರವು ತ್ಯಾಜ್ಯವಾದುದು. ಮಾಂಸವನ್ನು ಪಡೆಯಲು ಪ್ರಾಣಿವಧೆಯಾಗುವುದು ಅನಿವಾರ್ಯವಾಗುವುದರ ಜೊತೆಗೆ. ಹಸಿಯ ಮಾಂಸದಲ್ಲಾಗಲೀ ಅಥವಾ ಬೆಂದ ಮಾಂಸದಲ್ಲಾಗಲೀ ಸದಾಕಾಲ ಹುಟ್ಟುತ್ತಿರುವ ಕ್ರಿಮಿಗಳ ವಧೆ ಸಂಭವಿಸುವುದು ಹಿಂಸೆಯ ತೀವ್ರತೆಯನ್ನು ಹೆಚ್ಚಿಸುತ್ತದೆ. ತದ್ವಿರುದ್ಧವಾಗಿ ಶಾಕಾಹಾರದಿಂದ ಅಲ್ಪಹಿಂಸೆಯು ಸಂಭವಿಸುವುದರಿಂದ, ಮಾನವನಿಗೆ ಅದು ಹೆಚ್ಚು ಉತ್ಕೃಷ್ಟವಾಗುತ್ತದೆ. ಈ ಕೆಳಗಿನ ಮಾತುಗಳು ಇದನ್ನು ಸಮರ್ಥಿಸುತ್ತವೆ:

> "........ಪ್ರಕೃತಿಯು ತನ್ನ ಸಸ್ಯ ಸಂಪತ್ತಿನ ಮೂಲಕ ವೈವಿಧ್ಯಮಯವಾದ ಆಹಾರವನ್ನು ದೊರಕಿಸಿ ಕೊಟ್ಟಿದೆ. ಆದರೆ ಅಜ್ಞಾನ ಮತ್ತು ಹೊಟ್ಟೆಬಾಕತನಗಳಿಂದಾಗಿ ಮನುಷ್ಯನು ಪ್ರಾಣಿಗಳನ್ನು ಕೊಂದು, ತನ್ನ ದೇಹವನ್ನು ಅವುಗಳ ಗೋರಿಯನ್ನಾಗಿ ಮಾಡಿಕೊಳ್ಳುತ್ತಾನೆ".
>
> —ಸಾಮ್ರಾಟ ಅಕ್ಬರ

"........ಅಯ್ಯೋ ! ಒಂದು ದುರಾಸೆಯ ದೇಹವು ಮತ್ತೊಂದು ದೇಹದಿಂದ ಪಡೆದ ಆಹಾರದಿಂದ ಪುಷ್ಟವಾಗಿ ಬೆಳೆಯಲು ಮಾಂಸವನ್ನು ಮಾಂಸದಲ್ಲಿ ಶೇಖರಿಸುವುದು, ಒಂದು ಪ್ರಾಣಿಯು ಮತ್ತೊಂದು ಪ್ರಾಣಿಯ ವಧೆಯಿಂದ ಜೀವಿಸುತ್ತಾ ಹೋಗುವುದು ಎಂತಹ ಅಪರಾಧ ! ತಾಯಂದಿರಲ್ಲೇ ಅತ್ಯುತ್ತಮಳೆನಿಸಿರುವ ಭೂಮಿತಾಯಿಯು ನಮಗೆ ಒದಗಿಸಿರುವ ಸಸ್ಯಾಹಾರ ಸಂಪತ್ಸಮೃದ್ಧಿಯ ಮಧ್ಯೆ ಕೊಲೆಯಾದ ದುರ್ದೈವಿ ಪ್ರಾಣಿಗಳ ಶೋಚನೀಯ ಮಾಂಸವನ್ನು ಜಗಿಯುವ ಹೇಯಕಾರ್ಯ ಕೆಲವರ ಪಾಲಿಗಿದೆ".

—ಓವಿದ್

ಹೆಚ್ಚು ಹೆಚ್ಚು ವಿಚಾರ ಮಾಡಿದಂತೆಲ್ಲಾ ಮಾಂಸಾಹಾರದಲ್ಲಿ ಅಂತರ್ಗತವಾಗಿರುವ ಹಿಂಸೆಯ ಅರಿವು ನಮಗೆ ಹೆಚ್ಚುತ್ತಾ ಹೋಗುತ್ತದೆ. ಆಹಾರಕ್ಕಾಗಿ ನಾವು ಹಿಂಸೆ ಮಾಡುವುದು ಅನಿವಾರ್ಯವೆನಿಸಿದರೂ,ಅಂತಹ ಹಿಂಸೆಯು ಅತ್ಯಂತ ಕಡಿಮೆ ಮಟ್ಟದ್ದಾಗಿರಬೇಕೆಂಬುದು ದಯಾಶೀಲರೆಲ್ಲಾ ಒಪ್ಪತಕ್ಕ ವಿಚಾರ. ಏಕೇಂದ್ರಿಯ ಜೀವಿಗಳಾದ ವನಸ್ಪತಿಗಳಿಗೂ. ಆಹಾರಕ್ಕಾಗಿ ಬಲಿಯಾಗುವ ಪಂಚೇಂದ್ರಿಯ ಪ್ರಾಣಿಗಳಿಗೂ ಹಿಂಸಾನುಭವ ತೀವ್ರತೆಯಲ್ಲಿ ಅಪಾರ ಅಂತರವಿದೆಯೆಂಬುದನ್ನು ವಿವೇಕಶೀಲರೆಲ್ಲಾ ಒಪ್ಪುತ್ತಾರೆ. ಸಸ್ಯ ಮತ್ತು ಪ್ರಾಣಿಗಳ ನಡುವೆ ಹಿಂಸಾನುಭವ ತೀವ್ರತೆಯಲ್ಲಿ ಬಿಂದು ಮತ್ತು ಸಿಂಧುಗಳಷ್ಟು ಅಂತರವಿರುತ್ತದೆ

ಎಂದರೆ ಬಹುಶಃ ತಪ್ಪಾಗದು.* ಹೀಗಿದ್ದರೂ, ಆಧ್ಯಾತ್ಮ ಪಥ ದಲ್ಲಿ ಮುಂದುವರಿಯುತ್ತಿರುವ ಪ್ರಜ್ಞಾಶೀಲರು ಹೆಚ್ಚು ಹೆಚ್ಚು ಸಂಯಮಿಗಳಾಗಿದ್ದು, ಸಸ್ಯಗಳಲ್ಲಿಯೇ ಹಲವನ್ನು ತ್ಯಾಗ ಮಾಡಿರುವುದನ್ನು ಇಂದು ಕಾಣಬಹುದು. ಅಂತಹ ಪುಣ್ಯಾತ್ಮರು ಹೆಚ್ಚು ಜೀವ ಸಮೂಹದಿಂದ ಕೂಡಿರುವಂತಹ ಗಡ್ಡೆಗೆಣಸುಗಳನ್ನೂ ಆಲ, ಬಸರಿ, ಅತ್ತಿಯಂತಹ ಕ್ಷೀರಫಲಗಳನ್ನೂ ಸೇವಿಸುವುದಿಲ್ಲ. ಮಹಾವ್ರತ ಧಾರಿಗಳಾದ ಮುನಿಗಳಂತೂ ಕೇವಲ ಕೆಲವು ಸಸ್ಯ ಪದಾರ್ಥಗಳನ್ನು ಮಾತ್ರ ಸೇವಿಸುತ್ತಾರೆ.

ಸಸ್ಯ ಮತ್ತು ಮಾಂಸದ ನಡುವಣ ಭೇದವನ್ನು ವಿಶ್ಲೇಷಿಸುವಾಗ ವಸ್ತುನಿಷ್ಠತೆ ಅತ್ಯಗತ್ಯ. "ಮದ್ದು ಕುಣಿಕೆಯಂ ತಿಂದಂಗೆ ಕಲ್ಲುಂ ಮಣ್ಣುಂ ಮರಸುಂ ಪೊಂಬಣ್ಣಮಾಗಿ ತೋರುವಂತೆ" ಮಾಂಸಾಹಾರದ ಬಗ್ಗೆ ಒಲವಿರುವವನ ದೃಷ್ಟಿಯಾಗಬಾರದು. ಹಾಗಾದಲ್ಲಿ ಅದು ಒಂದು ಪುಟ್ಟ ನೀತಿಕಥೆಯಲ್ಲಿ ಬರುವ ಕಣಜದ ವರ್ತನೆಗೆ ಅನುಗುಣವಾಗುತ್ತದೆ.

---

* ಸಸ್ಯಗಳೂ ಕೂಡ ಸೂಕ್ಷ್ಮಸಂವೇದಿಗಳಾಗಿರುತ್ತವೆ ಎಂಬುದು ಇಂದು ಪ್ರಾಯೋಗಿಕ ಸತ್ಯ. ಏಕೇಂದ್ರಿಯ ಜೀವಿಗಳಲ್ಲಿಯೇ ಹಿಂಸಾನುಭವವು ಸ್ಪಷ್ಟವಾಗಿ ಕಂಡು ಬರುತ್ತಿರುವಾಗ, ಇನ್ನು ಹೆಚ್ಚು ಇಂದ್ರಿಯಂಗಳುಳ್ಳ ಅದರಲ್ಲಿಯೂ ಪಂಚೇಂದ್ರಿಯಗಳುಳ್ಳ ಪ್ರಾಣಿಗಳಲ್ಲಿ ಹಿಂಸಾನುಭವ ತೀವ್ರತೆ ಎಷ್ಟಿರಬಹುದು! ಸಸ್ಯಗಳ ಭಾವನಾನುಭವಗಳಿಗೆ ಸಂಬಂಧಿಸಿದ ವಿವರಗಳಿಗೆ ನೋಡಿ: ರವೀಂದ್ರನಾಥ., ಸಸ್ಯಗಳಿಗೂ ಬೇಕು ಸಂಗೀತ-ನಾಟ್ಯ.

ಜೇನ್ನೊಣ ಮತ್ತು ಕಣಜ ಸ್ನೇಹಿತರು. ಒಂದು ದಿನ ಜೇನ್ನೊಣವು ಕಣಜದ ಗೂಡಿಗೆ ಅತಿಥಿಯಾಗಿ ಹೋಗುತ್ತದೆ. ಮಲ ನಿರ್ಮಿತವಾದ ಆ ಗೂಡಿನ ವಾಸನೆಯು ಜೇನ್ನೊಣಕ್ಕೆ ಅಸಹನೀಯವಾಗುತ್ತದೆ. ಮತ್ತೊಂದು ದಿನ ಜೇನ್ನೊಣದ ಆಹ್ವಾನದ ಮೇಲೆ ಕಣಜವು ಸುಂದರ ಸರೋವರದ ನಡುವೆ ತಾವರೆ ಎಲೆಯ ಮೇಲಿದ್ದ ಜೇನ್ನೊಣದ ಮನೆಗೆ ಅತಿಥಿಯಾಗಿ ಬಂದಾಗ; "ಇಲ್ಲಿನ ವಾಸನೆ ಅಸಹನೀಯ" ಎಂದು ಉದ್ಗಾರ ತೆಗೆಯುತ್ತದೆ. ಅದರ ವಿಚಿತ್ರ ವರ್ತನೆಗೆ ಅಚ್ಚರಿಪಟ್ಟ ಜೇನ್ನೊಣವು, ಅದರ ಬಾಯನ್ನು ತೆರೆಯಿಸಿ ಅಲ್ಲಿಟ್ಟುಕೊಂಡಿದ್ದ ಮಲದ ಗುಳಿಗೆಯನ್ನು ಉಗುಳಲು ಹೇಳುತ್ತದೆ. ಅನಂತರ ಕಣಜಕ್ಕೆ ಸುಂದರ ಸನ್ನಿವೇಶದ ಸ್ವರ್ಗೀಯ ಅನುಭವವಾಗಿ ತನ್ನ ಅಜ್ಞಾನದ ಅರಿವುಂಟಾಗುತ್ತದೆ.

ಮಲದ ಗುಳಿಗೆಯಂತಹ ಪೂರ್ವಗ್ರಹಗಳಿಂದ ಮುಕ್ತರಾಗಿ ನಾವು ಶಾಕಾಹಾರದ ಸೈದ್ಧಾಂತಿಕ ಆಧಾರಗಳನ್ನು ಪರಿಶೀಲಿಸಬೇಕೆಂಬುದು ಜಗತ್ಪ್ರಸಿದ್ಧ ಕವಿ ಷೆಲ್ಲಿಯವರ ಮಾತುಗಳಲ್ಲಿ ಸ್ಪಷ್ಟವಾಗುತ್ತದೆ:

"ಮಾನವತೆಯ ಕಲ್ಯಾಣದಲ್ಲಿ ಆಸಕ್ತಿಯುಳ್ಳ ಹಾಗೂ ಸತ್ಯಪ್ರಿಯರಾದವರೆಲ್ಲರೂ ನಿಷ್ಪಕ್ಷಪಾತದಿಂದ ಸಸ್ಯಾಹಾರ ಸಿದ್ಧಾಂತಗಳನ್ನು ಪರಿಶೀಲಿಸಬೇಕೆಂದು, ಮಾನವ

ಕುಲದ ಶ್ರೇಯಸ್ಸಿಗಾಗಿ ನನ್ನಲ್ಲಿರುವ ಸದಾಶಯದಲ್ಲಿ ಅಂತರ್ಗತವಾಗಿರುವ ಪೂರ್ಣ ಪ್ರಾಮಾಣಿಕತೆಯಿಂದ ಕೋರುತ್ತೇವೆ."

ಮನುಷ್ಯ ಜೀವಿ ಪ್ರಾಣಿಗಳ ಹಿತದ ಬಗ್ಗೆ ಸರಿಯಾದ ಅರಿವನ್ನು ಮಾಂಸಾಹಾರ ಪ್ರಿಯನೂ ಪಡೆಯಲು ಆತನ ಹೃದಯದಲ್ಲೇ ಅಂತರ್ಗತವಾಗಿರುವ ಅನುಕಂಪೆಯು ನೆರವಾಗಬೇಕಾಗುತ್ತದೆ.

ದೇಹಬಲ ಮತ್ತು ಧೈರ್ಯಸ್ಥೈರ್ಯ

ಮಾಂಸಾಹಾರದಿಂದ ದೇಹದಾರ್ಢ್ಯವು ಹೆಚ್ಚಿ, ವ್ಯಕ್ತಿಯಲ್ಲಿ ಧೈರ್ಯಸ್ಥೈರ್ಯಗಳು ಉಂಟಾಗುತ್ತವೆ ಎಂಬ ತಪ್ಪು ಕಲ್ಪನೆ ಹಲವರಲ್ಲಿ ಬೆಳೆಯುತ್ತಿರುವುದು ವಿಷಾದನೀಯ. ದೇಹಬಲದಲ್ಲಿ ಸಸ್ಯಾಹಾರಿ ಪ್ರಾಣಿಗಳನ್ನು ಮಾಂಸಾಹಾರಿ ಪ್ರಾಣಿಗಳು ಮೀರಿಸಲಾರವೆಂಬುದಕ್ಕೆ ಅನೇಕ ಉದಾಹರಣೆಗಳಿವೆ. ಅಪ್ಪಟ ಸಸ್ಯಾಹಾರಿ ಪ್ರಾಣಿಗಳಾದ ಆನೆ, ಎತ್ತು, ಕಾಡುಕೋಣ, ಕುದುರೆ ಮುಂತಾದವುಗಳ ದೇಹಬಲವು ಕ್ರೂರಮೃಗಗಳಾದ ಸಿಂಹ. ಹುಲಿ ಮುಂತಾದವುಗಳಿಗಿರುವುದಿಲ್ಲ. ಆದರೆ ಅವು ತಮ್ಮ ಕ್ರೂರತನ ಮತ್ತು ವಂಚನೆಗಳ ಮೂಲಕ. ಸಸ್ಯಾಹಾರಿ ಪ್ರಾಣಿಗಳ ಮೇಲೆ ತಮ್ಮ ದೌರ್ಜನ್ಯ ಕೃತ್ಯವನ್ನೆಸಗುತ್ತವೆ. ಕ್ರೂರತೆ

ಯನ್ನೇ ಧೈರ್ಯವೆಂದು ತಪ್ಪು ತಿಳಿಯಬಾರದು. ಇದರ ಬಗ್ಗೆ ಡಾ. ಜೆ. ಡಿ. ಕ್ರೇಗ್ ಹೇಳುವ ಮಾತು : "ದೇಹಬಲದ ಬಗ್ಗೆ ಮಾಂಸಾಹಾರಿಗಳು ಜಂಭ ಕೊಚ್ಚಿಕೊಳ್ಳುವುದು ಕಾಣುತ್ತದೆ ....ಆದರೆ ಅವರಲ್ಲಿ ನಾವು ಕಾಣುವ ವಿಚಿತ್ರವೆಂದರೆ ಶಾಕಾಹಾರಿಗಳಂತೆ ಅವರು ಕಷ್ಟಸಹಿಷ್ಣುಗಳಾಗಿರುವುದಿಲ್ಲ". ಸರ್ ಹೆನ್ರಿ ಥಾಂಪ್ಸನ್ F.R.C.S., ಇವರ ಪ್ರಕಾರ "ಮಾಂಸವು ಯಾವುದೇ ರೂಪದಲ್ಲಿ ಮನುಷ್ಯನ ಜೀವನಕ್ಕೆ ಅನಿವಾರ್ಯವೆಂದು ಪರಿಗಣಿಸುವುದು ಹೀನಾಯ. ಮನುಷ್ಯ ದೇಹಕ್ಕೆ ಅಗತ್ಯವಾದ ಪದಾರ್ಥಗಳನ್ನೆಲ್ಲಾ ಶಾಕಾಹಾರದಿಂದ ಒದಗಿಸಬಹುದು. ಶಾಕಾಹಾರಿಯು ತಾನು ಸೇವಿಸುವ ಆಹಾರದಿಂದ ತನ್ನ ದೇಹದ ಬೆಳವಣಿಗೆ ಮತ್ತು ಒತ್ತಾಸೆಗೆ ಬೇಕಾದ ಉಷ್ಣತೆ ಹಾಗೂ ಶಕ್ತಿಯನ್ನು ಉತ್ಪಾದಿಸಲು ಅಗತ್ಯವಿರುವ ಎಲ್ಲಾ ಅಂಶಗಳನ್ನೂ ಪಡೆಯಬಹುದು. ಇಂತಹ ಆಹಾರದಿಂದ ಜೀವಿಸುವ ಹಲವರು ಹೆಚ್ಚು ಬಲಶಾಲಿಗಳಾಗಿಯೂ ಮತ್ತು ಹೆಚ್ಚು ಆರೋಗ್ಯವಂತರಾಗಿಯೂ ಇರುತ್ತಾರೆ ಎಂಬುದರ ಬಗ್ಗೆ ಸಮಸ್ಯೆಯೇ ಸುಳಿಯುವುದಿಲ್ಲ. ಈಗ ಉಪಯೋಗಿಸಲಾಗುತ್ತಿರುವ ಮಾಂಸಾಹಾರವು ಎಷ್ಟು ನಿರುಪಯುಕ್ತವಾಗಿರುತ್ತದೆ ಎಂಬುದನ್ನೂ ಮತ್ತು ಅದನ್ನು ಸೇರಿಸುವವರಿಗೆ ಅದು ತೀವ್ರತರ ಹಾನಿಕಾರಕವೆಂಬುದನ್ನೂ ನಾನು ಬಲ್ಲೆ."

ಜಗತ್ಪ್ರಸಿದ್ಧ ಜೀವವಿಜ್ಞಾನಿ ಚಾರಲ್ಸ್ ಡಾರ್ವಿನ್ ತನ್ನ 'ಮಾನವನ ಉಗಮ' ಎಂಬ ಗ್ರಂಥದಲ್ಲಿ ಹೀಗೆ ಬರೆದಿದ್ದಾನೆ : "ಪ್ರಾಚೀನ ಕಾಲದಲ್ಲಿ ಸಸ್ಯಾಹಾರಿಗಳು ಅಧಿಕಸಂಖ್ಯೆಯಲ್ಲಿದ್ದುದು

ನಿಜ. ಇದನ್ನು ತಿಳಿಯುವಲ್ಲಿ ಇದುವರೆಗೆ ನಾನು ಅದು ಹೇಗೆ ಅಸಮರ್ಥನಾಗಿದ್ದೇನೆಂಬುದು ನನಗೇ ಆಶ್ಚರ್ಯ. ಚಿಲಿಯ ಕಾಡುಗಳಲ್ಲಿ ವಾಸಿಸುವ ಜನರು ಅಪ್ಪಟ ಶಾಕಾಹಾರಿಗಳಾಗಿದ್ದಾರೆ. ಅವರು ಅಸಾಮಾನ್ಯ ರೀತಿಯ ಬಲಶಾಲಿಗಳಾಗಿರುವುದರ ಜೊತೆಗೆ ಆರೋಗ್ಯವಂತರೂ ಆಗಿದ್ದಾರೆ." ಇಷ್ಟಲ್ಲದೆ ತನ್ನ ಒಂದು ಪತ್ರದಲ್ಲಿ ಆತ ಹೀಗೆ ಬರೆದಿದ್ದಾನೆ: "ನಾನು ಕಂಡಿರುವ ಅಸಾಮಾನ್ಯ ಕೆಲಸಗಾರರಲ್ಲೆಲ್ಲಾ ಚಿಲಿಯ ಗಣಿಗಳಲ್ಲಿ ಕೆಲಸಮಾಡುತ್ತಿರುವ ಕೂಲಿಯಾಳುಗಳು ಸಂಪೂರ್ಣವಾಗಿ ಸಸ್ಯಾಹಾರದಿಂದಲೇ ಜೀವಿಸುತ್ತಾರೆ. ಅವರ ಆಹಾರದಲ್ಲಿ ದ್ವಿದಳ ಧಾನ್ಯಗಳೂ ಸೇರಿರುತ್ತವೆ." ಶಾಕಾಹಾರಿಗಳು ಹೆಚ್ಚು ಬಲಶಾಲಿಗಳೂ, ದೀರ್ಘಾಯುಗಳೂ ಹಾಗೂ ಧೈರ್ಯಸ್ಥೈರ್ಯವಂತರೂ ಆಗಿರುತ್ತಾರೆ ಎಂಬುದಕ್ಕೆ ಸ್ಪಷ್ಟ ಉದಾಹರಣೆಗಳು ಹಿಮಾಲಯದ ಹುಂಸಾ ಜನರು ಮತ್ತು ನಾಮಧಾರಿ ಸಿಕ್ಕರು. "ಇಂಗ್ಲೆಂಡಿನ ಪ್ರಸಿದ್ಧ ವೈದ್ಯ ಡಾ. ರಾಬರ್ಟ ಮೆಕಾರಿಸನ್ ಹಿಮಾಲಯದ ಹುಂಸಾ ಜನರೊಂದಿಗೆ ಹತ್ತುವರ್ಷ ವಾಸಿಸುತ್ತಿದ್ದರು. ಆ ಜನಗಳ ಬಗ್ಗೆ, "ದೇಹ ಬೆಳವಣಿಗೆಯ ಪರಿಪೂರ್ಣತೆಯಲ್ಲಿಯೂ ಮತ್ತು ನಿರೋಗಿಗಳಾಗಿರುವುದರಲ್ಲಿಯೂ ಹುಂಸಾ ಜನರಿಗೆ ಸರಿಸಾಟಿಯಾಗುವವರು ಯಾರೂ ಇಲ್ಲ" ಎಂದು ಅವರು ಬರೆದಿದ್ದಾರೆ. ಅವರ ಈ ಹೇಳಿಕೆಯನ್ನು ಪರೀಕ್ಷಿಸಲು ೧೯೬೪ರಲ್ಲಿ ಬಿ.ಬಿ.ಸಿ ತಂಡವೊಂದು ಹುಂಸಾ ಕಣಿವೆಗೆ ಭೇಟಿ ಕೊಟ್ಟಿತು. ಆ ತಂಡವು ಡಾ. ಮೆಕಾರಿಸನ್‌ರವರ ಹೇಳಿಕೆಯನ್ನು ಸಮರ್ಥಿಸುತ್ತಾ, "ಹುಂಸಾ ಜನರು ದೈಹಿಕ ಮತ್ತು ಮಾನಸಿಕ ರೋಗ

ಗಳಿಂದ ಮುಕ್ತರಾಗಿದ್ದಾರೆ. ಅವರಲ್ಲಿ ೭೦ ವರ್ಷ ವಯಸ್ಸಿನವರು ಪ್ರೋಲೋ ಆಟವಾಡುತ್ತಾರೆ. ೯೦ ರಿಂದ ೧೦೦ ವರ್ಷ ವಯಸ್ಸಿನವರು ೧೦ ಮೈಲಿಗಳಷ್ಟು ನಡೆಯಬಲ್ಲರಲ್ಲದೆ ದಟ್ಟವಾದ ಅರಣ್ಯಗಳಲ್ಲಿ ನುಗ್ಗಬಲ್ಲರು. ಅವರಲ್ಲಿ ಯುದ್ಧವಿಲ್ಲ. ಸೆರೆಮನೆಗಳಿಲ್ಲ ಮತ್ತು ಪೋಲಿಸಿನವರಿಲ್ಲ. ಅವರ ಆಹಾರ ಸಾವೆ ಮತ್ತು ರಾಗಿ, ಗೋಧಿ, ಬಾರ್ಲಿ, ಕಂದಮೂಲಗಳು. ಸೊಪ್ಪುಳ್ಳ ತರಕಾರಿಗಳು. ಆಡಿನ ಹಾಲು ಮತ್ತು ಏಪ್ರಿಕಾಟ್ ಹಣ್ಣು. ಅಲ್ಲದೆ ಅವರು ಆಹ್ಲಾದಕರವಾದ ಜೀವನವನ್ನು ನಡೆಸುತ್ತಾರೆ" ಎಂದು ವರದಿ ಮಾಡಿದೆ.*

ಸಮರ ಸಾಹಸ ಮತ್ತು ದೇಹದಾರ್ಢ್ಯಗಳಲ್ಲಿ ಸಿಕ್ಕರಿಗೆ ಜಗತ್ಪ್ರಸಿದ್ಧಿಯಂತ ಮನ್ನಣೆಯಿರುವುದು ಎಲ್ಲರಿಗೂ ತಿಳಿದ ವಿಷಯ. ಒಬ್ಬ ಸಿಕ್ ನಾಯಕರ ಪ್ರಕಾರ ಮೊಗಲರ ಕಾಲದಲ್ಲಿ ಎಲ್ಲಾ ಸಿಕ್ ಗುರುಗಳೂ, ಇತರರೂ ಅಪ್ಪಟ ಸಸ್ಯಾಹಾರಿಗಳಾಗಿದ್ದರು. ಮೊಗಲರ ಶಕ್ತಿಯನ್ನು ಮೀರಿ ನಿಲ್ಲುವಷ್ಟು ಶಕ್ತಿಶಾಲಿಗಳಾಗಿದ್ದರು ಎಂಬ ಸಂಗತಿ ನಮಗೆಲ್ಲಾ ಗೊತ್ತು. ಅಪ್ಪಟ ಶಾಕಾಹಾರಿಗಳಾದ ನಾಮಧಾರಿ ಸಿಕ್ಕರು ಬ್ರಿಟಿಷ್ ಚಕ್ರಾಧಿಪತ್ಯದ ೧೯೧೧ರ ಹಗ್ಗ ಎಳೆಯುವ ಸ್ಪರ್ಧೆ (Tug-of-War) ಯಲ್ಲಿ ಎಲ್ಲಾ ತಂಡಗಳನ್ನೂ ಸೋಲಿಸಿದ್ದು ಅವರ ದೇಹಬಲಕ್ಕೆ ಮತ್ತೊಂದು ಪ್ರಬಲ ನಿದರ್ಶನ.

ಕಷ್ಟ ಸಂಹಿಷ್ಣುತೆಯ ಅಗತ್ಯವಿದ್ದ ಅನೇಕ ಕ್ರೀಡಾ ಸ್ಪರ್ಧೆಗಳನ್ನು ಜರ್ಮನಿ ಮತ್ತು ಇಂಗ್ಲೆಂಡುಗಳಲ್ಲಿ ಶಾಕಾಹಾರಿಗಳು ಮತ್ತು ಮಾಂಸಾಹಾರಿಗಳ ನಡುವೆ ಏರ್ಪಡಿಸಲಾಗಿತ್ತು.

* V. G. Nair, Hindu, 15th June, 1966

ಶಾಕಾಹಾರಿಗಳ ನಿಶ್ಚಿತ ಜಯವೇ ಈ ಸ್ಪರ್ಧೆಗಳ ಪರಿಣಾಮ.† ದೈಹಿಕಬಲ ಮತ್ತು ಆಹಾರದ ವಿಷಯವನ್ನು ಪ್ರಸ್ತಾಪಿಸುತ್ತ ಹೆನ್ರಿ ಥೋರೋ ಒಂದು ವಿನೋದಪೂರ್ಣ ಪ್ರಸಂಗವನ್ನು ಹೀಗೆ ನಿರೂಪಿಸುತ್ತಾರೆ: "ನೀವು ಸಸ್ಯಾಹಾರದಿಂದ ಜೀವಿಸಲಾಗುವುದಿಲ್ಲ. ಏಕೆಂದರೆ ಅದು ಮೂಳೆಗಳ ತಯಾರಿಕೆಗೆ ಯಾವ ಅಂಶವನ್ನೂ ಒದಗಿಸಲಾರದು" ಎಂದು ಒಬ್ಬ ರೈತ ನನಗೆ ಹೇಳಿದ. ಈ ಕಾರಣದಿಂದಲೇ ಬಹುಶಃ ಆತನು ಬಹು ಧಾರ್ಮಿಕವಾಗಿ, ದಿನವಲ್ಲಿ ತನಗೆ ಬೇಕಾದ ಮೂಳೆಗಳ ಕಚ್ಚಾ ಪದಾರ್ಥವನ್ನು ಒದಗಿಸುವುದರಲ್ಲಿ ಕಳೆದು. ಉಳಿದ ಸಮಯದಲ್ಲಿ ಮಾತನಾಡುತ್ತಾ ತನ್ನ ಎತ್ತುಗಳ ಹಿಂದೆ ನಡೆಯುತ್ತಿರುತ್ತಾನೆ. ಪಾಪ ಸಸ್ಯಾಹಾರದಿಂದ ರೂಪಿತವಾದ ಮೂಳೆಗಳುಳ್ಳ ಆ ಪ್ರಾಣಿಗಳು ಅವನನ್ನೂ ಅವನ ಮರದ ನೇಗಿಲನ್ನೂ ಅಡಚಣೆಗಳನ್ನು ದಾಟಿ ಎಳೆದುಕೊಂಡು ಹೋಗುತ್ತವೆ."

ಮಾಂಸಾಹಾರ ಮತ್ತು ಅದರ ಬಗ್ಗೆ ಇರುವ ಕಟ್ಟುಕಥೆಗಳು ನಿರರ್ಥಕವೆಂಬುದನ್ನು ಶಾಕಾಹಾರ ಸಂಕೀರ್ಣ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ಅನೇಕ ಸಮೀಕ್ಷೆಗಳು ಸ್ಪಷ್ಟಪಡಿಸುತ್ತಿವೆ. ಅಲ್ಲದೆ ಜಗತ್ತಿನಾದ್ಯಂತ ಇರುವ ರೈತರು ಕಾರ್ಯತಃ ಶಾಕಾಹಾರಿಗಳಾಗಿದ್ದಾರೆ ಎಂಬುದನ್ನು ದೇಹಬಲ ಪರಿಣಿತರು ಪ್ರಸ್ತಾಪಿಸಿದ್ದಾರೆ. ಮತ್ತೊಂದು ಗಮನಾರ್ಹ ಅಂಶವೆಂದರೆ ಶಾಕಾಹಾರವು ಆಯುರ್ವರ್ಧಕವೆಂಬ ಪ್ರಾಚೀನ ಆರ್ಯೋಕ್ತಿ

† S. C. Diwakar, Religion and Peace

ಯನ್ನು ಆಧುನಿಕ ಸಂಶೋಧನೆಗಳು ಸಮರ್ಥಿಸುತ್ತಿವೆ. ಒಟ್ಟಿನಲ್ಲಿ ಶಾಕಾಹಾರದಿಂದ ದೇಹಬಲ ಮತ್ತು ಆಯುಸ್ಸುಗಳು ನಿಶ್ಚಿತವಾಗಿ ಹೆಚ್ಚುತ್ತವೆ ಎಂಬುದು ನೆನಪಿನಲ್ಲಿಡಬೇಕಾದ ಅಂಶ.

ಶಾಕಾಹಾರ ಮತ್ತು ಪೌಷ್ಟಿಕಾಂಶಗಳು

ಮಾಂಸಾಹಾರದ ಸಮರ್ಥನೆಗೋಸ್ಕರ. ಕೆಲವರು ಮುಂದಿಡುವ ಮತ್ತೊಂದು ಪೊಳ್ಳು ವಾದ, 'ದೇಹಕ್ಕೆ ಬೇಕಾದ ಎಲ್ಲಾ ಪೋಷಕಾಂಶಗಳೂ ಶಾಕಾಹಾರದಿಂದ ದೊರೆಯದಿರುವುದರಿಂದ ಮಾಂಸಾಹಾರ ಸೇವನೆಯು ಅಗತ್ಯವೆನಿಸುತ್ತದೆ' ಎಂಬುದು. ಅವರ ಪ್ರಕಾರ, ದೇಹದ ಪ್ರಮುಖ ಪೋಷಕಾಂಶಗಳಲ್ಲಿ ಒಂದಾದ ಸಸಾರಜನಕ (ಪ್ರೋಟೀನ್) ಮಾಂಸದಲ್ಲಿ ಹೇರಳವಾಗಿ ದೊರೆಯುತ್ತದೆ. ಇಂತಹ ಅಭಿಪ್ರಾಯ ನಿರಾಧಾರವಾದುದು ಎಂಬುದಕ್ಕೆ ಅನೇಕ ಸಾಕ್ಷ್ಯಾಧಾರಗಳಿವೆ. ಶಾಕಾಹಾರ ಮತ್ತು ಮಾಂಸಾಹಾರಗಳ ಪೌಷ್ಟಿಕ ಸತ್ತ್ವಗಳಿಗೆ ಸಂಬಂಧಿಸಿದಂತೆ ಪ್ರಸಿದ್ಧ ಆಹಾರ ತಜ್ಞ ಡಾ. ಎಫ್. ಜೆ. ಸ್ಕೈಸರ ಪ್ರಕಾರ ಅಂಗಾಂಶ (Tissue) ಗಳನ್ನು ರಿಪೇರಿ ಮಾಡಲು ಬೇಕಾದ ನೈಟ್ರೋಜಿನ್ ಪದಾರ್ಥಗಳನ್ನು ಒದಗಿಸಲು ಮಾಂಸಾಹಾರದ ಅಗತ್ಯ ಖಂಡಿತ ಇರುವದಿಲ್ಲ. ಹೀಗಿರುವಲ್ಲಿ ರಾಸಾಯನಿಕ ದೃಷ್ಟಿಯಿಂದ, ಸಸ್ಯ ಸಾಮ್ರಾಜ್ಯದಿಂದ ಉತ್ತಮವಾಗಿ ಆರಿಸಿಕೊಂಡ ಆಹಾರವು ಜನರ ಪೋಷಣೆಗೆ ಅತ್ಯುತ್ತಮವಾಗಿರುತ್ತದೆ.

ದೇಹಕ್ಕೆ ಬೇಕಾಗಿರುವ ನಾನಾ ರೀತಿಯ ಪೋಷಕಾಂಶಗಳಲ್ಲಿ ಪ್ರಮುಖವಾದವುಗಳು. ಶರ್ಕರ ಪಿಷ್ಟಗಳು, ಸಸಾರಜನಕ ಪದಾರ್ಥಗಳು, ಮೇದಸ್ಸು, ಖನಿಜಗಳು, ಲವಣಗಳು ಮತ್ತು ಅನ್ನಾಂಗಗಳು. ಪ್ರಮಾಣಿತ (Balanced) ಶಾಕಾಹಾರದಿಂದ ಈ ಎಲ್ಲಾ ಪೋಷಕಾಂಶಗಳೂ ನಮಗೆ ದೊರೆಯುವುದರಲ್ಲಿ ಸಂದೇಹವಿಲ್ಲ. ಉದಾಹರಣೆಗೆ, ಸಕ್ಕರೆ ಮತ್ತು ಸಿಹಿ ಹಣ್ಣುಗಳಲ್ಲಿ ಶರ್ಕರ ಪಿಷ್ಟಗಳೂ; ದ್ವಿದಳ ಧಾನ್ಯಗಳು, ಹಾಲು ಮತ್ತು ಮೊಸರಿನಲ್ಲಿ ಸಸಾರಜನಕ ಪದಾರ್ಥಗಳೂ; ಎಣ್ಣೆ ಬೀಜಗಳು, ಕಡಲೆಕಾಯಿ, ತೆಂಗಿನಕಾಯಿ ಮತ್ತು ತುಪ್ಪಗಳಲ್ಲಿ ಮೇದಸ್ಸೂ; ಗೋಧಿ. ಅಕ್ಕಿ ಮತ್ತು ಜೋಳಗಳಲ್ಲಿ ಪಿಷ್ಟ ಪದಾರ್ಥಗಳೂ ದೊರೆಯುತ್ತವೆ. ತದ್ವಿರುದ್ಧವಾಗಿ ಮಾಂಸದಲ್ಲಿ ಸಸಾರಜನಕ ಪದಾರ್ಥವೊಂದನ್ನು ಬಿಟ್ಟರೆ ಮಿಕ್ಕ ಆಹಾರಾಂಶಗಳು ದೊರೆಯುವುದು ದುರ್ಲಭ. ಅವುಗಳಿಗಾಗಿ ಮಾಂಸ ಪ್ರೇಮಿಯು ಶಾಕಾಹಾರಕ್ಕೆ ಶರಣುಹೋಗಲೇ ಬೇಕಾಗುತ್ತದೆ. ಅಲ್ಲದೆ ಸಸಾರಜನಕ ಪದಾರ್ಥಗಳೂ ಕೂಡ ಮಾಂಸದಲ್ಲಿರುವುದಕ್ಕಿಂತ ದ್ವಿದಳ ಧಾನ್ಯಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿರುತ್ತವೆ ಮತ್ತು ನೀರಿನ ಪ್ರಮಾಣವೂ ಅವುಗಳಲ್ಲಿ ಕಡಿಮೆಯಿರುತ್ತದೆ. ಶಾಕಾಹಾರ ಪದಾರ್ಥಗಳಿಂದ ಪೋಷಕಾಂಶಗಳು ಎಷ್ಟು ಉತ್ಕೃಷ್ಟವಾಗಿ ದೊರೆಯುತ್ತವೆ ಎಂಬುದು ೧ ಮತ್ತು ೨ ನೆಯ ಪಟ್ಟಿಗಳಲ್ಲಿ ವಿವರವಾಗಿ ದೊರೆಯುತ್ತದೆ.

ವಿವಿಧ ಆಹಾರಾಂಶಗಳ ದೃಷ್ಟಿಯಿಂದ ಮಾತ್ರವಲ್ಲದೆ. ಸುಮಾರು ನೂರು ಗ್ರಾಂ ತೂಕದ ಆಹಾರ ಪದಾರ್ಥಗಳಲ್ಲಿ ದೊರೆಯುವ ಕೆಲೋರಿಗಳು, ಶಾಕಾಹಾರ ಪದಾರ್ಥಗಳಲ್ಲಿ ಮಾಂಸಾಹಾರ ಪದಾರ್ಥಗಳಿಗಿಂತ ಅತ್ಯಂತ ಹೆಚ್ಚು ಹೇರಳವಾಗಿ ದೊರೆಯುತ್ತವೆ ಎಂಬುದು ಪಟ್ಟಿಯಲ್ಲಿ ಕೊಡಲಾಗಿರುವ ಕೆಲವು ವಿವರಗಳಿಂದ ಸುಸ್ಪಷ್ಟ. ಪೌಷ್ಠಿಕತೆಯಲ್ಲಿಯೂ ಶಾಕಾಹಾರವು ಅತ್ಯುತ್ತಮವಾದುದೆಂಬುದನ್ನು ಸ್ಪಷ್ಟಪಡಿಸುತ್ತ ಸರ್ ಬೆಂಜಾಮಿನ್ ರಿಚರ್ಡ್ಸನ್ M. D, "ಪೌಷ್ಠಿಕತೆಯ ಮೌಲ್ಯದಲ್ಲಿ ಮಾಂಸಾಹಾರಕ್ಕಿಂತ, ಸಸ್ಯದ ಪದಾರ್ಥಗಳನ್ನು ವಿವೇಕದಿಂದ ಆರಿಸಿಕೊಂಡಾಗ, ಅವುಗಳ ಕಣ ಕಣಗಳೂ ಹೆಚ್ಚು ಪರಿಗಣನೀಯ ಉಪಯುಕ್ತತೆಯನ್ನು ಹೊಂದಿರುತ್ತವೆ" ಎಂದು ಆಡಿರುವ ಮಾತು ಸದಾ ನೆನಪಿನಲ್ಲಿಡಬೇಕಾದುದು.

ಆಹಾರ ಮತ್ತು ಆರೋಗ್ಯ

'ಆರೋಗ್ಯವೇ ಭಾಗ್ಯ' ಎಂಬ ನಾಣ್ಣುಡಿಯನ್ನು ಬಹುಶಃ ಯಾರೂ ಅಲ್ಲಗಳೆಯಲಾರರು. ಆ ಭಾಗ್ಯವು ಬಹುಮಟ್ಟಿಗೆ ನಾವು ಸೇವಿಸುವ ಪದಾರ್ಥಗಳನ್ನು ಅವಲಂಬಿಸಿರುತ್ತದೆ ಎಂಬುದು 'ಊಟ ಬಲ್ಲವನಿಗೆ ರೋಗವಿಲ್ಲ; ಮಾತು ಬಲ್ಲವನಿಗೆ ಜಗಳವಿಲ್ಲ' ಎಂಬ ಮಾತಿನಲ್ಲಿ ಅಡಕವಾಗಿದೆ. ಉಚಿತಾನುಚಿತಗಳನ್ನು ಅರಿತು, ಸಕಾಲದಲ್ಲಿ ಸೇವಿಸುವ ಶುಚಿರುಚಿಯಾದ ಆಹಾರವು ನಮ್ಮ ಆರೋಗ್ಯಪಾಲನೆಯಲ್ಲಿ ಪ್ರಮುಖ ಪಾತ್ರ

ವಹಿಸುತ್ತದೆ ಎಂಬುದು ಸಾಮಾನ್ಯ ಅಭಿಪ್ರಾಯ ಮಾತ್ರವಲ್ಲ, ವೈದ್ಯಕೀಯ ಅಭಿಪ್ರಾಯವೂ ಹೌದು. ಸುಪ್ರಸಿದ್ಧ ವೈದ್ಯರು ಗಳೆನಿಸಿದ ಡಾ. ಎ. ಕಿಂಗ್ಸ್‌ಫೋರ್ಡ್, ಎಚ್. ಜಿ. ಕೆಲ್ಲಾಗ್, ಗ್ಯಾಮಲೀ. ರಿಚರ್ಡ್ ಓವೆನ್. ಎಡ್ವರ್ಡ ಸಾಂಡರ್ಸ್. ಕಿಂಗ್‌ಸ್ಲೇ, ಆಲ್ಬರ್ಟ ಷ್ವೀಟ್ಸರ್ ಮುಂತಾದವರು ತಮ್ಮ ಅನು ಭವ ಹಾಗೂ ಸಂಶೋಧನೆಗಳ ಆಧಾರದ ಮೇಲೆ, ಶಾಕಾ ಹಾರವು ಹೆಚ್ಚು ಆರೋಗ್ಯಕರವೂ, ಮಾಂಸಾಹಾರವು ಹೆಚ್ಚು ಅನಾರೋಗ್ಯಕರವೂ ಆಗಿವೆ ಎಂದು ಅಭಿಪ್ರಾಯ ಪಡುತ್ತಾರೆ. ಪ್ಯಾರಿಸ್ ವಿಶ್ವವಿದ್ಯಾನಿಲಯದ ಡಾ. ಎ ಕಿಂಗ್ಸ್‌ಫೋರ್ಡ್‌ನ ಪ್ರಕಾರ ಮಾಂಸಾಹಾರವು ನೇರವಾಗಿ ಅನೇಕ ವೇದನಾಪೂರ್ಣ ಹಾಗೂ ಹೆದರಿಕೆ ಹುಟ್ಟಿಸುವಂತಹ ರೋಗಗಳನ್ನುಂಟು ಮಾಡುವ ಸಾಧ್ಯತೆಯಿದೆ. ಗಂಡಮಾಲೆಯಂತಹ ಹೀನರೋಗಕ್ಕೆ ಮಾಂಸಾಹಾರವೇ ಕಾರಣವೆಂಬುದು ಆತನ ಅಭಿಮತ. ಡಾ. ಗ್ಯಾಮಲೀ ಪ್ರಿವಿಕೌನ್ಸಿಲಿಗೆ ಸಲ್ಲಿಸಿದ ವರದಿಯಲ್ಲಿ, "ನಾವು ಭಕ್ಷಿಸುವ ಮಾಂಸದಲ್ಲಿ ೩ ರಷ್ಟು ಭಾಗವು ಉಗ್ರರೋಗ ಸ್ಥಿತಿ ಯಲ್ಲಿರುವ ಪ್ರಾಣಿಗಳಿಂದ ಪಡೆದದ್ದು" ಎಂದು ತಿಳಿಸಿದ್ದಾರೆ.

ಮಾಂಸಾಹಾರಿ ಪ್ರಾಣಿಗಳಂತೆ ಮನುಷ್ಯನು ತಾನು ತಿಂದ ಮಾಂಸವನ್ನು ಸುಲಭವಾಗಿ ಜೀರ್ಣಿಸಿಕೊಳ್ಳಲಾರ. ಆ ಪ್ರಾಣಿಗಳಾದರೋ ತಮ್ಮ ಬೇಟೆಯ ಪ್ರಾಣಿಯನ್ನು, ಚರ್ಮ, ಕೂದಲು, ಮೂಳೆ ಮತ್ತು ರಕ್ತಗಳ ಸಹಿತ ಭಕ್ಷಿಸುವುದರಿಂದ ಅವುಗಳಿಗೆ ಬೇಕಾಗುವ ಆಹಾರಾಂಶಗಳು ದೊರೆಯುತ್ತವೆ. ಕೂದಲು ಮತ್ತು ಚರ್ಮಗಳು ಆಹಾರ ಜೀರ್ಣ ಕಾರ್ಯಕ್ಕೆ

ನೆರವಾಗುತ್ತವೆ. ಆದರೆ ಮೂಳೆಗಳನ್ನು ಕಡಿದು ತಿನ್ನುವುದಾಗಲೀ ಕೂದಲು ಮತ್ತು ಚರ್ಮಗಳನ್ನು ನುಂಗುವದಾಗಲೀ ಮತ್ತು ರಕ್ತಪಾನ ಮಾಡುವುದಾಗಲೀ ಮನುಷ್ಯನಿಗೆ ಸಾಮಾನ್ಯವಾಗಿ ಆಗದ ಕಾರ್ಯ. ಆದ್ದರಿಂದ ಆತನು ತಿಂದ ಮಾಂಸದಲ್ಲಿ ಉಪಯುಕ್ತವಲ್ಲದ ವಿಷಪೂರಿತ ಪದಾರ್ಥಗಳನ್ನು ವಿಸರ್ಜಿಸಲು ನೆರವಾಗುವ ಪದಾರ್ಥಗಳ ಅಭಾವವಿರುವುದರಿಂದ ತಾನು ತಿಂದ ಮಾಂಸವನ್ನು ಜೀರ್ಣಿಸಿಕೊಳ್ಳುವ ಕಾರ್ಯದಲ್ಲಿ ಆತನು ತನ್ನ ಮೂತ್ರಪಿಂಡಗಳು ಮತ್ತು ಹೃದಯಗಳನ್ನು ಕ್ರಮೇಣ ಅಶಕ್ತಗೊಳಿಸುತ್ತಾನೆ. ಈ ಕಾರಣದಿಂದಲೇ ಮಾಂಸಾಹಾರಿಗಳಲ್ಲಿ ಹೃದಯ ಮತ್ತು ಮೂತ್ರಪಿಂಡ ರೋಗಗಳು ಅಧಿಕ ಸಂಖ್ಯೆಯಲ್ಲಿ ಕಾಣಸಿಗುತ್ತವೆ ಎಂಬುದು ಪರಿಣತರ ಅಭಿಮತ. ಇದಲ್ಲದೆ ಎಲ್ಲಾ ವಿಧವಾದ ಮಾಂಸದಲ್ಲಿಯೂ ಇರುವ ಒಂದು ವಿಶೇಷ ರೀತಿಯ ಮೇದಸ್ಸು ಜಠರದ ಒಳಭಾಗದಲ್ಲಿ ಶೇಖರವಾಗಿ ಅಂಟಿಕೊಂಡು ಒಂದು ಶಾಶ್ವತವಾದ ಲೇಪನವಾಗಿ ಪರಿಣಮಿಸುವುದರಿಂದ ಜೀರ್ಣಶಕ್ತಿಯನ್ನು ದುರ್ಬಲಗೊಳಿಸುತ್ತದೆ. ಈ ಕಾರಣದಿಂದಾಗಿ, ದಂತರೋಗವೂ ಸೇರಿದಂತೆ ಅನೇಕ ರೋಗಗಳು ಉಂಟಾಗುವುದು ಕಂಡುಬಂದಿದೆ. ಮಾಂಸವು ಶರೀರದ ಕ್ರಿಯಾ ಸಂಕ್ಷೋಭೆಗಳಿಗೆ ಕಾರಣವಾಗಿ, ಭಯಂಕರ ರೋಗಗಳಾದ ಕ್ಯಾನ್ಸರ್, ಕ್ಷಯ, ಕರುಳಿನ ರೋಗ ಮುಂತಾದವುಗಳನ್ನೂ ಹುಟ್ಟಿಸುತ್ತದೆ ಎಂಬುದು ಡಾ. ಜೋಸಯ ಓಲ್ಡ್‌ಫೀಲ್ಡರ ಅಭಿಮತ.

ಡಾ. ಜೆ. ಎಚ್. ಕೆಲ್ಲಾಗ್ ಹೇಳುವಂತೆ ಪ್ರಾಣಿಗಳ ಮಾಂಸವು ಆಹಾರವಾಗುವಷ್ಟು ಸ್ವಚ್ಛ ಪದಾರ್ಥವಾಗಿಲ್ಲ ಎಂಬ

ಸತ್ಯದ ಕಡೆ, ಜಗತ್ತಿನ ಎಲ್ಲಾ ವಿಜ್ಞಾನಿಗಳ ಗಮನ ಹರಿದಿದೆ. ಮಾಂಸವು ಅಮೇಧ್ಯದಂತಿರುವ ವಿಷಪೂರಿತ ಪದಾರ್ಥಗಳೊಂದಿಗೆ ಬೆರೆತಿರುತ್ತದೆ. ಅಂತಹ ಪದಾರ್ಥಗಳು ಪ್ರಾಣಿ ಜೀವನದ ಸ್ವಭಾವಜನ್ಯ ಫಲಿತಾಂಶಗಳು ಎಂಬುದು ಗಮನಾರ್ಹ ಅಂಶ. ಪ್ರಾಣಿಗಳು ಶಕ್ತಿಯನ್ನು ವ್ಯಯಮಾಡುವುದಾದರೆ, ಸಸ್ಯಗಳು ಶಕ್ತಿಯನ್ನು ಉತ್ಪತ್ತಿಮಾಡುತ್ತವೆ. ಮಾಂಸಖಂಡದಲ್ಲಾಗಲೀ ಅಪ್ಷೇಕೆ ಮಾನಸಿಕ ಕ್ರಿಯಾರೂಪದಲ್ಲಾಗಲೀ ಪ್ರಕಟವಾಗುವ ಶಕ್ತಿಯು ಪ್ರತ್ಯಕ್ಷವಾಗಿಯಾಗಲೀ, ಪರೋಕ್ಷವಾಗಿಯಾಗಲೀ ಬರುವುದು ವನಸ್ಪತಿ ಪ್ರಪಂಚದಿಂದ. ಹೀಗೆ ಶಕ್ತಿ ಸಂಚಯನ ಮತ್ತು ಶಕ್ತಿವರ್ಧನೆಗಳಿಗೂ ತನ್ಮೂಲಕ ವೈಮನಗಳ ಉತ್ತಮ ನೆಮ್ಮದಿಗೂ ಕಾರಣವಾಗುವ ಶಾಕಾಹಾರವನ್ನು ಅಲ್ಲಗಳೆದು ಮಾಂಸಾಹಾರವನ್ನು ಬಯಸುವ ಜನರು ದುರ್ದೈವಿಗಳೆಂದೇ ಹೇಳಬೇಕಾಗುತ್ತದೆ.

ಮನೋನಿಯಂತ್ರಣಕ್ಕೆ ಶಾಕಾಹಾರ

'ವ್ಯಾಕುಲತಾ ಯುಗ'* ಎಂದು ಹೆಸರಾಂತ ಈ ಇಪ್ಪತ್ತನೇ ಶತಮಾನದ ಕೊನೆಯ ಭಾಗದಲ್ಲಿ ಜಗತ್ತಿನಾದ್ಯಂತ ಮನುಷ್ಯನು ಮಾನಸಿಕ ಅಶಾಂತಿಗೆ ಒಳಗಾಗಿರುವುದು ನಮ್ಮೆಲ್ಲರಿಗೂ ತಿಳಿದ

---

* ವಿವರಗಳಿಗೆ ನೋಡಿ— ಎ. ಎಸ್. ಧರಣೇಂದ್ರಯ್ಯ, ಮಾನಸಿಕ ಆರೋಗ್ಯ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೩,

ವಿಷಯ. ಮಾನಸಿಕ ಅಶಾಂತಿಗೆ ಕಾರಣಗಳು ಹಲವೆಂಬುದನ್ನು ನಾವು ಒಪ್ಪುತ್ತೇವೆ. ಆ ಕಾರಣಗಳಲ್ಲಿ ನಾವು ಸೇವಿಸುವ ಆಹಾರವೂ ನಮ್ಮ ಚಿತ್ತಪ್ರವೃತ್ತಿ ಮತ್ತು ಭಾವನೆಗಳ ಮೇಲೆ ಗಣನೀಯ ಪ್ರಭಾವವನ್ನು ಬೀರುತ್ತದೆ ಎಂಬ ವಿಚಾರವನ್ನು ಅಲ್ಲಗಳೆಯುವಂತಿಲ್ಲ. ಪ್ರಾಚೀನ ಭಾರತೀಯ ತತ್ತ್ವಜ್ಞಾನಿಗಳು, ಮಾನವನ ಸತ್ತ್ವ, ರಜೋ ಮತ್ತು ತಮೋಗುಣಗಳು ಬಹುಮಟ್ಟಿಗೆ ಆತನು ಸೇವಿಸುವ ಆಹಾರವನ್ನವಲಂಬಿಸಿರುತ್ತವೆ ಎಂದು ಪ್ರತಿಪಾದಿಸಿದ್ದಾರೆ. ಮದ್ಯಪಾನ ಮತ್ತು ಮಾಂಸಾಹಾರಗಳಲ್ಲಿ ಆಸಕ್ತನಾಗಿರುವಾತ ತಮೋಗುಣ ಪರಿಪೂರ್ಣವೆನಿಸಿದರೆ, ಉಷ್ಣೋತ್ಪಾದಕ ಆಹಾರ ಪದಾರ್ಥಗಳೆನಿಸಿದ ಈರುಳ್ಳಿ, ಬೆಳ್ಳುಳ್ಳಿ, ಮದ್ಯ ಮುಂತಾದವುಗಳ ಸೇವನೆಯಲ್ಲಿ ಆಸಕ್ತರಾದವರಲ್ಲಿ ರಜೋಗುಣ ಪ್ರಧಾನವಾಗಿರುತ್ತದೆ. ಆದರೆ ಪ್ರಶಾಂತ ಚಿತ್ತತೆಯನ್ನು ಉಂಟುಮಾಡುವಂತಹ ಹಾಲು, ಹಣ್ಣು ಮುಂತಾದ ಪದಾರ್ಥಗಳನ್ನು ಸೇವಿಸುವ ವ್ಯಕ್ತಿಗಳಲ್ಲಿ ಸತ್ತ್ವಗುಣ ಪ್ರಧಾನವಾಗಿರುತ್ತದೆ. ಈ ಮೂರು ಗುಣಗಳು ಎಲ್ಲಾ ವ್ಯಕ್ತಿಗಳಲ್ಲಿಯೂ ಹೆಚ್ಚು ಕಡಿಮೆ ಪ್ರಮಾಣದಲ್ಲಿ ಇರುವುವಾದರೂ, ಕೆಲವರಲ್ಲಿ ಒಂದು ಗುಣವು ಪ್ರಧಾನವಾಗಿದ್ದರೆ ಮತ್ತೆ ಕೆಲವರಲ್ಲಿ ಮತ್ತೊಂದು ಗುಣವೂ, ಉಳಿದವರಲ್ಲಿ ಮೂರನೆಯ ಗುಣವೂ ಪ್ರಧಾನವಾಗಿರುತ್ತವೆ. ಇದಕ್ಕೆ ಆಹಾರದ ಹಿನ್ನೆಲೆಯಿರುತ್ತದೆ ಎಂಬುದು ಧಾರ್ಮಿಕ ಜನರ ಅಭಿಮತ. ಇಂತಹ ಅಭಿಮತಕ್ಕೆ ವೈಜ್ಞಾನಿಕ ಒತ್ತಾಸೆಯೂ ಇದೆ ಎಂಬುದಕ್ಕೆ ಮದಿರೋನ್ಮಾದದ ಬಗ್ಗೆ ನಲವತ್ತು ವರ್ಷಗಳ ವರೆಗೆ ಅಧ್ಯಯನ

ನಡೆಸುವುದರ ಜೊತೆಗೆ, ಅದರ ಬಗ್ಗೆ ಬೋಧಿಸಿದ ಎಚ್. ಪಿ. ಫೌಲರನ ಸ್ಪಷ್ಟ ಹೇಳಿಕೆಯೇ ಸಾಕ್ಷಿ: "ಮಾಂಸಾಹಾರವು ತಂತು ಮಂಡಲವನ್ನು ಉತ್ತೇಜಿಸುವದರ ಮೂಲಕ ಪ್ರತಿಯೊಂದರಲ್ಲಿಯೂ ಸಂಯಮ ಹೀನತೆಯನ್ನು ಬೆಳೆಸಲು ಹಾದಿ ಮಾಡಿಕೊಡುತ್ತದೆ. ಮದ್ಯಪಾನದಲ್ಲಿ ಆಸಕ್ತರಾಗಲು ವ್ಯಕ್ತಿಗಳಿಗೆ ಅದು ಕಾರಣವಾಗುವುದರ ಜೊತೆಗೆ ಅವರ ಮೃಗೀಯ ಲಾಲಸೆಗಳನ್ನು ಹೆಚ್ಚಿಸುತ್ತದೆ. ಅವಿಶ್ರಾಂತ ತಂತುಗಳ ಲಾಲಸೆಯನ್ನು ತೃಪ್ತಿಪಡಿಸುವ ಸಲುವಾಗಿ, ವ್ಯಕ್ತಿಯು ಅನೇಕ ವೇಳೆ ಪ್ರಚೋದಕಗಳಿಗೆ ಹಿಂದಿರುಗುತ್ತಾನೆ. ಈ ಪ್ರಚೋದಕಗಳು ತಂತುಗಳನ್ನು ತಾತ್ಕಾಲಿಕವಾಗಿ ಸಾಂತ್ವನಗೊಳಿಸಿದರೂ ಹೊಸಹೊಸ ವಸ್ತುಗಳ ರುಚಿಯ ಅನುಭವವನ್ನು ಪಡೆಯಬೇಕೆಂಬ ವಿಕೃತಾಸಕ್ತಿಯನ್ನೂ ತೀವ್ರಗೊಳಿಸುವುದರ ಜೊತೆಗೆ ಅಧಿಕಗೊಳಿಸುತ್ತವೆ. ಅಂತಹ ವಿಕೃತಾಸಕ್ತಿಯು, ವ್ಯಕ್ತಿಯನ್ನು ಆತನ ಶಾಂತ ಚಿತ್ತತೆಯಿಂದ ವಂಚಿಸುವುದರ ಜೊತೆಗೆ, ಆತನಲ್ಲಿ ಇಚ್ಛೆಗಳ ಬಿರುಗಾಳಿಯನ್ನೇ ಎಬ್ಬಿಸುತ್ತದೆ. ಆತನಲ್ಲಿ ಸಂಯಮ ಶಕ್ತಿಯನ್ನು ನಾಶಮಾಡಿ, ಕೋಪ ತಾಪಗಳ ಅಭಿವ್ಯಕ್ತತೆಗೆ ಕಾರಣವಾಗುತ್ತದೆ. ಇದರಿಂದ ವ್ಯಕ್ತಿಯಲ್ಲಿ ಪದೇ ಪದೇ ಕಂಡುಬರುವ ಕಿರಿಕಿರಿ ಭಾವವು, ಒಂದೊಂದು ಸಲ ಭಯಂಕರ ಮಾನಸಿಕ ರೋಗದಲ್ಲಿ ಪರ್ಯವಸಾನವಾಗುವುದೂ ಉಂಟು".

"........ಸಂಸಾರದ ಫಲಮಾವುದೋ ಬಿಸುಟು ಕಳ್ಳುಮಂ ಮಾಂಸಮುಂ" ಎಂಬ ವಿಕೃತ ತತ್ತ್ವದ ದಾಸರಾಗಿ ಮದ್ಯಮಾಂಸ

ಗಳಿಗಾಗಿ ಹಂಬಲಿಸುವ ಜನರು. ಬರುಬರುತ್ತಾ ರೋಗಗ್ರಸ್ತ ರಾಗುವುದರ ಜೊತೆಗೆ, ತಮ್ಮ ಕುಟುಂಬದ ಹಾಗೂ ಬಂಧು ಮಿತ್ರರ ಸುಖ ಸಂತೋಷಗಳಿಗೂ ಧಕ್ಕೆತರುತ್ತಾರೆ. ಹೂವೆಂದುದೇ ಹಾವಾಗುತ್ತದೆ. ಸಿಹಿ ಸುಖ ಕಹಿ ವಿಷವಾಗಿ ಪರಿಣಮಿ ಸುತ್ತದೆ.

ಸುಪ್ರಸಿದ್ಧ ರಷ್ಯನ್ ವಿಚಾರವಾದಿ ಟಾಲ್‌ಸ್ಟಾಯ್ ಪ್ರಕಾರ ಮಾಂಸಾಹಾರಿಗೆ ಸರಿಯಾದ ಚಿತ್ತಪರಿಶುದ್ಧತೆಯಿರು ವುದು ಅಸಾಧ್ಯ. ಅವರು ಹೇಳಿರುವ ಮಾತು: "ಮಾಂಸಾ ಹಾರವು ಮೃಗೀಯ ಲಾಲಸೆಗಳನ್ನೂ, ಕಾಮುಕತೆಯನ್ನೂ ಉತ್ತೇಜಿಸುತ್ತದೆ. ಅದು ಅನೇಕ ತುಚ್ಛ ಪ್ರವೃತ್ತಿಗಳನ್ನು ಪ್ರೋತ್ಸಾಹಿಸುತ್ತದೆ ಎಂಬುದನ್ನು ಅನೇಕ ಸ್ತ್ರೀ ಪುರುಷರು ಸ್ಪಷ್ಟವಾಗಿ ಒಪ್ಪಿಕೊಂಡಿದ್ದಾರೆ". ಅಷ್ಟಲ್ಲದೆ ಅಪರಾಧ ಪ್ರವೃತ್ತಿ ಗಳಿಗೂ ಮಾಂಸಾಹಾರವು ಪ್ರೋತ್ಸಾಹಕೊಡುತ್ತದೆ ಎಂಬುದೂ ಗಮನಾರ್ಹ ಅಂಶ.

ನಮ್ಮ ಮೈಮನಗಳ ಸ್ವಸ್ಥ ಸ್ಥಿತಿಗೆ ನಾವು ಸೇವಿಸುವ ಆಹಾ ರವು ಎಷ್ಟು ಮುಖ್ಯವಾದುದು ಎಂಬುದನ್ನು "ನಾವು ನಮ್ಮ ಸಮಾಧಿಯನ್ನು ಪ್ರತಿ ದಿನವೂ ನಮ್ಮ ಹಲ್ಲುಗಳಿಂದಲೇ ಅಗೆ ಯುತ್ತೇವೆ". ಎಂದು ವಿನೋದವಾಗಿಯೂ ಮಿಶ್ರ ಸತ್ಯದ ರೂಪದಲ್ಲಿಯೂ ಹೇಳಲಾಗಿದೆ. ಅಂದರೆ ನಾವು ಸೇವಿಸಿ ಆನಂದ ಪಡುವ ಆಹಾರವು ನಮ್ಮ ಜೀವನವನ್ನು ಈ ಭೂಮಿಯ ಮೇಲೆ ರೂಪಿಸುವುದು ಮಾತ್ರವಲ್ಲದೆ, ಆರೋಗ್ಯಕರ ಅಥವಾ

ಅನಾರೋಗ್ಯಕರ ದೇಹದಲ್ಲಿ ಆರೋಗ್ಯಕರ ಅಥವಾ ಅನಾರೋಗ್ಯಕರ ಮನಸ್ಸನ್ನು ಬೆಳೆಸುತ್ತದೆ. ಅಲ್ಲದೆ ದೇಹಕ್ಕೆ ನಾವು ಒದಗಿಸಿದ ಆಹಾರದ ಸ್ವಭಾವವನ್ನನುಸರಿಸಿ ನಮ್ಮ ಹೃದಯಗಳಲ್ಲಿ ಉತ್ಕೃಷ್ಟವಾದ ಅಥವಾ ಅನುತ್ಕೃಷ್ಟವಾದ ಭಾವನೆಗಳು ಮತ್ತು ರಸಭಾವಗಳು ಅಭಿವೃದ್ಧಿಹೊಂದುತ್ತವೆ.* ಬೌದ್ಧಿಕ ದೃಷ್ಟಿಯಿಂದಲೂ ಶಾಕಾಹಾರವು ಉತ್ಕೃಷ್ಟವಾದುದು. ಬುದ್ಧಿಜೀವಿಗಳು ಸಾಮಾನ್ಯವಾಗಿ ಮಾಂಸಾಹಾರವನ್ನು ವರ್ಜಿಸುತ್ತಾರೆ ಎಂಬುದು ಗಾಂಧೀಜಿಯವರ ಅಭಿಮತವಾಗಿದ್ದಿತು.

ಆರ್ಥಿಕ ಸಾಧನವಾಗಿ ಶಾಕಾಹಾರ

ಶಾಕಾಹಾರ ಪದಾರ್ಥಗಳು ಮಾಂಸಕ್ಕಿಂತ ಹೆಚ್ಚು ಕಡಿಮೆ ಬೆಲೆಗೆ ದೊರೆಯುತ್ತವೆ ಎಂಬುದನ್ನು ಅನೇಕ ಅರ್ಥಶಾಸ್ತ್ರಜ್ಞರು ಸ್ಪಷ್ಟಪಡಿಸಿದ್ದಾರೆ. ಒಂದುಕಡೆ ಮಾಂಸದ ಲಾಲಸೆಯಿಂದ ಜನರು ದರಿದ್ರರಾಗುವುದನ್ನು ತಡೆಯುವುದರಲ್ಲಿ ಶಾಕಾಹಾರವು ಬಹುಮಟ್ಟಿಗೆ ನೆರವಾಗುತ್ತದೆಯಲ್ಲದೆ, ಮತ್ತೊಂದು ಕಡೆ. ಸಾಮಾನ್ಯ ಜನರ ಲಾಲಸೆಗಳ ಲಾಭಪಡೆದು ಕೇವಲ ಕೆಲವು ಪರಮ ಲೋಭಿಗಳು ಅಪಾರ ಸಂಪತ್ತನ್ನು ಸಂಗ್ರಹ

---

* ಡಿ. ಎಸ್. ಪರಮಾಜ್, Lord Mahaveera's Voice of Non-Violence, Sanmati Publications 1975, Serial No. 34, Page 25.

ಮಾಡುವುದನ್ನು ತಡೆಯುವುದರಲ್ಲಿಯೂ, ಅದು ಪ್ರಭಾವಕಾರಿ ಪಾತ್ರವನ್ನು ನಿರ್ವಹಿಸಬಲ್ಲದು. ಸುಶೀಲ್ ಕುಮಾರ್‌ರವರ ವರದಿಯ ಪ್ರಕಾರ ಒಂದು ವರ್ಷಕ್ಕೆ ಒಬ್ಬ ಮಾಂಸಾಹಾರಿಗೆ ಆಹಾರವನ್ನು ಒದಗಿಸಲು ೧.೫೦ ಚ.ಕಿ. ಮೀ ಭೂಮಿ ಬೇಕಾದರೆ ಸಸ್ಯಾಹಾರಿಗೆ ಕೇವಲ ೦.೭೦ ಚ.ಕಿ. ಮೀ. ಭೂಮಿ ಮಾತ್ರ ಸಾಕು. ಅಂದರೆ ಒಬ್ಬ ಮಾಂಸಾಹಾರಿಯ ಆಹಾರಕ್ಕಾಗಿ ಇಬ್ಬರು ಸಸ್ಯಾಹಾರಿಗಳಿಗೆ ಬೇಕಾಗುವಷ್ಟು ಭೂಮಿಯ ಅವಶ್ಯಕತೆ ಇದೆ ಎಂದಂತಾಯಿತು. ಇಷ್ಟು ಮಾತ್ರವಲ್ಲದೆ. ಧಾರಣೆಯಲ್ಲಿಯೂ ಒಂದು ಕಿ. ಗ್ರಾಂ. ಮಾಂಸಕ್ಕೆ ಸುಮಾರು ೧೨ ರಿಂದ ೧೫ ರೂಪಾಯಿಗಳ ಬೆಲೆಯಾದರೆ ಒಂದು ಕಿ.ಗ್ರಾಂ. ಧಾನ್ಯಕ್ಕೆ ೨-೫೦ ರಿಂದ ೩-೫೦ ರೂಪಾಯಿಗಳು ಮಾತ್ರ ಎಂಬುದು ಗಮನಾರ್ಹ ಅಂಶ. ಅಲ್ಲದೆ ಹಿಂದೆಯೆ ತಿಳಿಸಿದಂತೆ ಈ ಧಾನ್ಯಗಳಿಂದ ದೊರೆಯುವ ಕೆಲೊರೀ ಬೆಲೆಯು ಗಣನೀಯವಾಗಿ ಅಧಿಕ. ಇದು ಸತ್ಯಸಂಗತಿ. ಹೀಗಿರುವಾಗ, ಆಹಾರದ ಕೊರತೆಯನ್ನು ನಾವು ಮಾಂಸದ ಮೂಲಕ ನಿವಾರಿಸುತ್ತೇವೆ, ಅದರ ಮೂಲಕ ಆರ್ಥಿಕ ಸಮಸ್ಯೆಯನ್ನು ಬಿಡಿಸುತ್ತೇವೆ. ಎಂಬ ಮಾತುಗಳು ಬೂಟಾಟಿಕೆ ಪ್ರೇರಿತವಾದವುಗಳು ಮಾತ್ರವಲ್ಲ; ಹಾಸ್ಯಾಸ್ಪದವಾದವುಗಳೂ ಹೌದು. ಮಾಂಸಕ್ಕೆಂದು ಬೆಳಸಲಾಗುವ ಪ್ರಾಣಿಗಳಿಗೆ ಅನೇಕ ತಿಂಗಳು ಅಥವಾ ವರ್ಷಗಳ ವರೆಗೆ ಆಹಾರವೊದಗಿಸಿ ಅವುಗಳನ್ನು ಪ್ರೀತಿಯಿಂದ ಸಾಕುತ್ತೇವೆ.ಆದರೆ ಒಂದು ದಿನ, ನಮ್ಮ ನಾಲಿಗೆಯ ಲಾಲಸೆ ಮತ್ತು ಅಮಾನುಷ ಕೃತ್ಯಕ್ಕೆ ಬಲಿಯಾಗಿ, ಅವು ತಮ್ಮ ಪ್ರಾಣನೀಗಿ ನಮ್ಮ

ಹೊಟ್ಟೆಯು ಸಮಾಧಿಯನ್ನು ಸೇರುತ್ತವೆ. ಇದನ್ನು ನೋಡಿ ದಾಗ, ದುರದೃಷ್ಟಶಾಲಿಯಾದ ಪ್ರಾಣಿಯೊಂದು ಮಾಂಸ ಕ್ಕಾಗಿ ಬಲಿಯಾಗುವುದು ಒಂದೇ ಸಲ. ಅದು ಮತ್ತೆ ಜೀವಿಸ ಲಾರದು. ಆದರೆ ಗಿಡ-ಮರ-ಬಳ್ಳಿಗಳು ತಮ್ಮ ಕಾಯಿಪಲ್ಲೆ ಗಳು ಮತ್ತು ಹಣ್ಣು ಹಂಪಲುಗಳನ್ನು ಅನೇಕ ಸಲ ನಮಗಿತ್ತು ಅನಂತರ ತಮ್ಮ ಕಾಲ ತೀರಿದ ಮೇಲೆ ನಾಶವಾಗುತ್ತವೆ. ಕೆಲವು ಮರಗಳಂತೂ ನೂರಾರು ವರ್ಷಗಳ ವರೆಗೆ ಮಾನವನಿಗೆ ಆಹಾರ ಒದಗಿಸಬಲ್ಲವು. ಧಾನ್ಯದ ಗಿಡಗಳೂ ಕೂಡ ತಮ್ಮ ಪರಿಪಕ್ವ ಸ್ಥಿತಿಯನ್ನು ಮುಟ್ಟಿದ ಅನಂತರವೇ ನಾಶಹೊಂದುತ್ತವೆ. ಅತ್ಯಲ್ಪ ಮಟ್ಟದ ಹಿಂಸೆಯಿಂದ ಅಧಿಕ ಪ್ರಯೋಜನ ಪಡೆಯುವ ಸಾಧ್ಯತೆಯಿರುವುದನ್ನು ಕಡೆಗಣಿಸಿ ನಾವು ನಮ್ಮ ಅಜ್ಞಾನ, ಹೊಟ್ಟೆಬಾಕತನ ಮತ್ತು ಕಿಡಿಗೇಡಿತನಗಳಿಂದ ಅಲ್ಪಯಾಸೆ ಮತ್ತು ಅಲ್ಪ ಪ್ರಯೋಜನಗಳಿಗಾಗಿ. ಜೀವಿಸಲು ಹೋರಾಡು ತ್ತಿರುವ ಪ್ರಾಣಿಗಳನ್ನು ಕೊಂದು ತಿನ್ನುವ ಹೇಯ ಕಾರ್ಯಕ್ಕೆ ಕೈ ಹಾಕುವುದು ನಮ್ಮ ಹಿರಿಮೆಗೆ ತಕ್ಕ ಕ್ರಿಯೆಯಲ್ಲ.

ಮಾಂಸಕ್ಕಾಗಿ ಪ್ರಾಣಿಗಳನ್ನು ಸಾಕುವಾಗ ಅವುಗಳ ಪಾಲನೆ ಪೋಷಣೆಗಳಿಗಾಗಿ ವ್ಯಯವಾಗುವ ಮಾನವ ಶಕ್ತಿ ಮತ್ತು ಸಂಪನ್ಮೂಲಗಳು ಇಷ್ಟೆಂದು ಹೇಳಲಾಗುವುದಿಲ್ಲ. ಈ ವಿಷಯದಲ್ಲಿ ಲಾರ್ಡ್ ಬರ್ನಾರ್ಡ್ ಷಾರವರು ಆಡಿರುವ ಮರೆಯ ಲಾರದ ಮಾತುಗಳು :

"ಮಾಂಸ ಮತ್ತು ಮೊಟ್ಟೆಗಳ ಉತ್ಪನ್ನವು ಪ್ರಾಣಿಗಳಿಗೆ ಮಾನವನು ಗುಲಾಮನಾಗಿರುವುದರ ಪ್ರತೀಕ. ಆತನು

ಪ್ರಾಣಿಗಳಿಗೆ ಆಳಾಗಿ, ದಾದಿಯಾಗಿ. ಸೂಲಗಿತ್ತಿಯಾಗಿ ಕೊನೆಗೆ ಕೊಲೆಗಡುಕನಾಗಿ ಸೇವೆಸಲ್ಲಿಸಬೇಕಾಗುತ್ತದೆ. ಮಾಂಸದ ಆಸೆಯಿಂದ ಪ್ರಾಣಿಗಳಿಗೆ ಮಾನವನು ಈ ರೀತಿ ಗುಲಾಮನಾಗಿರುವುದು ನಿಜವಾಗಿಯೂ ಹೃದಯ ವಿದ್ರಾವಕ ಸಂಗತಿ. ಇಷ್ಟಲ್ಲದೆ ಸತ್ತ ದೇಹಗಳನ್ನು ಭಕ್ಷಿಸುವ ಇಚ್ಛೆಯಿಂದ ಅಸಹ್ಯಕರವಾದ ಮತ್ತು ಅನಾರೋಗ್ಯಕರವಾದ ಸ್ಥಳಗಳಲ್ಲಿ ಆ ಪ್ರಾಣಿಯೊಂದಿಗೇ ಆತನು ವಾಸಿಸುತ್ತಾನೆ".

ಆಹಾರಾಗತ್ಯಗಳ ಪೂರೈಕೆ

ಜಗತ್ತಿನಲ್ಲಿ ವಿಪರೀತವಾಗಿ ಬೆಳೆಯುತ್ತಿರುವ ಜನಸಂಖ್ಯೆಯ ಆಹಾರಾಗತ್ಯಗಳನ್ನು ಪೂರೈಸಲು ಮಾಂಸಾಹಾರವನ್ನು ಆಶ್ರಯಿಸದೆ ಗತ್ಯಂತರವಿಲ್ಲ ಎಂಬ ಕೆಲವರ ವಾದದಲ್ಲಿಯೂ ಹುರುಳಿಲ್ಲ. ತನ್ನ ಅವಲೋಕನಗಳ ಆಧಾರದ ಮೇಲೆ ಹ್ಯಾಂಬೋಲ್ಟ್ ನೀಡಿರುವ ಹೇಳಿಕೆಯು ಮೇಲಿನ ವಾದವನ್ನು ನಿರ್ವೀರ್ಯಗೊಳಿಸುತ್ತದೆ: "ಹತ್ತು ಜನರಿಗೆ ಮಾತ್ರ ಸಾಕಾಗುವಷ್ಟು ಮಾಂಸವನ್ನು ಪಡೆಯಲೋಸ್ಕರ ಪ್ರಾಣಿಗಳನ್ನು ಕೊಬ್ಬಿಸಲೆಂದು ಬಳಸಲಾಗುವ ಹುಲ್ಲುಗಾವಲನ್ನು ಜೋಳ. ಬಟಾಣಿ ಮತ್ತು ಬಾರ್ಲಿಗಳನ್ನು ಬೆಳೆಸಲು ಬಳಸುವುದಾದರೆ. ಅದರಿಂದ ಬರುವ ಫಲದಿಂದ ಸುಮಾರು ನೂರು ಜನರಿಗೆ ಆಹಾರವನ್ನು ಒದಗಿಸಲು ಸಾಧ್ಯವಾಗುತ್ತದೆ". ಸುನೀಲ್‌ಕುಮಾರ್ ಮತ್ತು

ಹ್ಯಾಂಜೋಲ್ಟ್ ಇಬ್ಬರ ಅಂಕಿಅಂಶಗಳಲ್ಲಿ ಭೇದವಿದ್ದರೂ ಶಾಕಾಹಾರದ ವಿಪುಲ ಉಪಯುಕ್ತತೆಯ ಬಗ್ಗೆ ಇಬ್ಬರ ಅಭಿಪ್ರಾಯವೂ ಒಂದೇ ಆಗಿದೆ.

ಮಾಂಸಾಹಾರ ಲಾಲಸೆಯನ್ನು ಮರೆಮಾಡಲು ಜನಸಂಖ್ಯೆಯ ಹೆಚ್ಚಳದ ಸೋಗು ಹಾಕಿಕೊಂಡು ನಡೆಸಲಾಗಿರುವ ಸುಳ್ಳು ಪ್ರಚಾರಗಳಲ್ಲಿ "ಭಾರತೀಯರ ಆಹಾರದಲ್ಲಿ ಸಸಾರಜನಕ ಪದಾರ್ಥದ ಕೊರತೆಯಿರುವುದರಿಂದ ಆ ಕೊರತೆಯನ್ನು ನೀಗಿಸಲು ಮಾಂಸ ಸೇವನೆ ಮಾಡಬೇಕು"ಎಂಬ ಮಾತಿನಿಂದ ಜನತೆ ಮೋಸಹೋಗದಿರಲಿ. ಪೌಷ್ಟಿಕಾಂಶಗಳಿಗೆ ಸಂಬಂಧಿಸಿದಂತೆ ಈ ಹಿಂದೆಯೇ (ಪಟ್ಟಿ ೨) ಕೊಡಲಾಗಿರುವ ಸರ್ಕಾರದ ಪ್ರಕಟನಾಪಟ್ಟಿಯಿಂದ ನಮ್ಮೆಲ್ಲರಿಗೂ ಸ್ಪಷ್ಟವಾಗುವ ವಿಷಯವೆಂದರೆ, ಶಾಕಾಹಾರದಿಂದ ಸಸಾರಜನಕವೂ ಸೇರಿದಂತೆ ನಮ್ಮ ದೇಹಕ್ಕೆ ಬೇಕಾದ ಎಲ್ಲಾ ಆಹಾರಾಂಶಗಳೂ ಅತಿ ಕಡಿಮೆ ವೆಚ್ಚದಲ್ಲಿ ಒದಗುತ್ತವೆ ಎಂಬುದು. ಹೀಗಿರುವಲ್ಲಿ ಮೇಲಿನ ರೀತಿಯ ಪ್ರಚಾರ ಕಾರ್ಯ ನಮ್ಮ ಅಜ್ಞಾನದ ಲಾಭಪಡೆಯುವ ದುರುದ್ದೇಶವೆಂಬುದನ್ನು ನಾವು ಮನಗಾಣಬೇಕು.

ಶಾಕಾಹಾರದ ಸಮೃದ್ಧತೆ ಹಾಗೂ ಪಾವಿತ್ರ್ಯತೆ ಮತ್ತು ಮಾಂಸಾಹಾರದ ಹೀನತೆಯ ಬಗ್ಗೆ ಪ್ರಸಿದ್ಧ ಗ್ರೀಕ್ ತತ್ವಜ್ಞಾನಿ ಪೈಥಾಗೊರಸನು ಹೇಳಿರುವ ಮಾತುಗಳು ನಮ್ಮ ಮನ ಮುಟ್ಟುವಂತಿವೆ:

"ಎಲೈ ಮಾನವರೇ ! ನಿಮ್ಮ ದೇಹಗಳನ್ನು ಪಾಪಪೂರಿತ ಆಹಾರದಿಂದ ತುಂಬುವದರ ಬಗ್ಗೆ ಎಚ್ಚರಿಕೆಯಿಂದಿರಿ !

ತಮ್ಮ ಭಾರದಿಂದ ಮರದ ಕೊಂಬೆಗಳನ್ನು ಬಾಗಿಸಿರುವ ಹಣ್ಣುಗಳ ಮತ್ತು ಬಳ್ಳಿಗಳ ಮೇಲಿರುವ ರಸಪೂರಿತ ದ್ರಾಕ್ಷಿಗಳೂ ವಿಪುಲವಾಗಿವೆ. ಬೇಯಿಸುವದರಿಂದ ರುಚಿ ಕರವಾಗಿಯೂ, ಮೃದುವಾಗಿಯೂ ಆಗುವಂತಹ ಸಿಹಿ ಯಾದ ಕಾಯಿಪಲ್ಲೆಗಳಿವೆ. ಅಲ್ಲದೆ ಶುದ್ಧವಾದ ಹಾಲು, ಜೇನುತುಪ್ಪ ಮತ್ತು ಓಮದ (Thyme) ಗಿಡದ ಸುಗಂಧ ಯುಕ್ತ ಹೂಗಳು ಮುಂತಾದವುಗಳಿಂದ ನೀವು ವಂಚಿತರಾ ಗಿಲ್ಲ. ಸಮೃದ್ಧಭೂಮಿಯು ನಿಮಗೆ ವಿಪುಲವಾದ ಆಹಾರ ವನ್ನು ಒದಗಿಸುತ್ತದೆಯಲ್ಲದೆ. ಕೊಲೆ ಮತ್ತು ರಕ್ತಪಾತ ಗಳಿಂದರಹಿತವಾದಂತಹ ಭೋಜನವನ್ನು ಒದಗಿಸುತ್ತವೆ."

ಜಗತ್ತಿನ ಆಹಾರ ಕೊರತೆಯನ್ನು ನೀಗಿಸುವ ಸೋಗು ಹಾಕಿಕೊಂಡು ಮಾಂಸಾಹಾರಿಯು ತನ್ನ ಲಾಲಸೆ ಮತ್ತು ಲೋಭಗಳನ್ನು ತೀರಿಸಿಕೊಳ್ಳುತ್ತಿದ್ದಾನೆ ಎಂಬುದನ್ನು ಸೆನೆಚ ರವರ ಮಾತುಗಳು ಹೆಚ್ಚು ಸ್ಪಷ್ಟಪಡಿಸುತ್ತವೆ: "ಒಂದು ಅಥವಾ ಎರಡು ಎಕರೆ ಹುಲ್ಲುಗಾವಲಿನಿಂದ ಒಂದು ಎತ್ತು ತೃಪ್ತಿಪಡು ತ್ತದೆ; ಅನೇಕ ಆನೆಗಳಿಗೆ ಒಂದು ಕಾಡು ಸಾಕಾಗುತ್ತದೆ. ಆದರೆ ಮನುಷ್ಯನು ಮಾತ್ರ ಇಡೀ ಭೂಮಿ ಮತ್ತು ಸಮುದ್ರಗಳ ಆಹಾರದ ಒಟ್ಟಲಿನಿಂದ ತನ್ನ ಹೊಟ್ಟೆ ಹೊರೆಯುತ್ತಾನೆ. ಜೋನುಗಳು, ಬಲೆಗಳು, ಮೀನು ಹಿಡಿಯುವ ಕೊಂಡಿಗಳು ಮುಂತಾದ ನಾನಾರೀತಿಯ ಸಾಧನಗಳಿಂದ ಅವನು ಪ್ರಾಣಿ ಗಳನ್ನು ಹಿಂಸಿಸುತ್ತಾನೆ. ತನಗೆ ಎಷ್ಟೇ ಶ್ರಮವಾದರೂ ಸರಿ ಇತರ ಪ್ರಾಣಿಗಳು ಶಾಂತಿಯಿಂದಿರಲು ಆತನು ಬಿಡುವುದಿಲ್ಲ."

ನಮ್ಮ ದೇಶದ ಆಹಾರ ಸಮಸ್ಯೆಯನ್ನು ಬಗೆಹರಿಸಲು ಗಾಂಧೀಜಿಯವರು ರೂಪಿಸಿದ ಪ್ರಸಿದ್ಧ "ಸ್ವಯಂಪ್ರೇರಿತ ಬಡತನ" (Voluntary poverty) ತತ್ತ್ವದ ಅಡಿಗಲ್ಲು ಶಾಕಾಹಾರ. ಶಾಕಾಹಾರವನ್ನು ಅನುಷ್ಠಾನಕ್ಕೆ ತರಲು ಅಸಮರ್ಥನಾಗುವ ವ್ಯಕ್ತಿ ಎಂದೂ ಸರಳ ಜೀವನವನ್ನು ನಡೆಸಲಾರ. ಅಂದಮೇಲೆ, ಶಾಕಾಹಾರವು ಸರಳ ಜೀವನದ ಮೊದಲ ಹೆಜ್ಜೆ ಎಂದಂತಾಯಿತು. ಈ ಹೆಜ್ಜೆಯು ನಿರ್ದಿಷ್ಟವೂ, ಸ್ಥೈರ್ಯಪೂರ್ಣವೂ ಆಗಿದ್ದರೆ ಮುಂದಿನ ಹೆಜ್ಜೆಗಳು ಅದನ್ನು ಸರಾಗವಾಗಿ ಹಿಂಬಾಲಿಸುವುದರಲ್ಲಿ ಅನುಮಾನವಿರದು. ವಿಶಾಲದೃಷ್ಟಿಯಿಂದ ಪರಿಶೀಲಿಸಿದಾಗ ಜಗತ್ತಿನ ಆಹಾರ ಸಮಸ್ಯೆಯು ಶಾಕಾಹಾರ ಪದ್ಧತಿಯಿಂದ ಪರಿಹಾರವಾಗುವುದರಲ್ಲಿ ಸಂಶಯ ಕಾಣದು. ಇದಕ್ಕೆ ಬದಲಾಗಿ ಮಾಂಸಾಹಾರ ಲಾಲಸೆಯಿಂದ ನಮ್ಮ ಜೀವನವನ್ನು ಜಟಿಲಗೊಳಿಸಿಕೊಂಡು ಕೃತಕ ಆಹಾರಾಭಾವವನ್ನು ಕಲ್ಪಿಸಿಕೊಳ್ಳುವುದು ಅವಿವೇಕವೆನಿಸುತ್ತದೆಯಲ್ಲದೆ ಬಡಪಾಯಿ ಹಾಗೂ ಅರಕ್ಷಿತ ಪ್ರಾಣಿಗಳಿಗೆ ಅತೀವ ಯಾತನೆಯನ್ನುಂಟು ಮಾಡಿದಂತಾಗುತ್ತದೆ, 'ಕಾವವನೇ ಕಣೆಗೊಂಡಂತಾಗುತ್ತದೆ', ತಾಯಿಯೇ ಮಗುವಿಗೆ ವಿಷವನ್ನೂಡಿಸಿದಂತಾಗುತ್ತದೆ.

ಮಾಂಸವನ್ನು ಪಡೆಯುವ ಕಾರ್ಯದಲ್ಲಿ ಆಗುವ ಮಾನವ ಶಕ್ತಿಯ ವ್ಯಯ ಮತ್ತು ಆ ಸಮಯದಲ್ಲಿ ಕಂಡುಬರುವ ಭಯಾನಕ ಹಾಗೂ ಭೀಭತ್ಸ ದೃಶ್ಯಗಳ ವಿಚಾರವನ್ನು ಪ್ರಸ್ತಾಪಿಸುತ್ತ ಲಹರ್‌ಸಿಂಹ ಭಾಟಿಯಾರವರು, ಅಂತಹ ಚಿತ್ರಹಿಂಸೆಯ

ದೃಶ್ಯವು ಜನಗಳ ಕಣ್ಮುಂದೆ ಬಂದು ನಿಲ್ಲುವಂತೆ ಚಿತ್ರಿಸುವ ಅಗತ್ಯವನ್ನು ಒತ್ತಿ ಹೇಳಿದ್ದಾರೆ. ಅದು ಎಷ್ಟು ಭೀಭತ್ಸ ರಸದಿಂದ ಕೂಡಿರಬೇಕೆಂದರೆ ಅದನ್ನು ನೋಡಿದರೆ ಕಡು ಮಾಂಸಾಹಾರಿಗಳೂ ಕೂಡ ಹೇಸುವಂತಿರಬೇಕು. ಈ ಪರಿಣಾಮವನ್ನುಂಟುಮಾಡಲು ಲಿಯೋ ಟಾಲ್‌ಸ್ಟಾಯ್‌ರವರು ತಮ್ಮ ಮಾರ್ಮಿಕ ಶೈಲಿಯಲ್ಲಿ ಬರೆದಿರುವ "ಕಟುಕರ ಮನೆ ವಿವರಣೆ"ಯು ಒಂದು ಸಾಕ್ಷ್ಯ ಚಿತ್ರವನ್ನು ತಯಾರಿಸಿ ಜನತೆಗೆ ತೋರಿಸಿ ಮಾಂಸಾಹಾರದ ಬಗ್ಗೆ ಹೇವರಿಕೆ ಹುಟ್ಟಿಸಬೇಕೆಂದು ಭಾಟಿಯಾ ಆಶಿಸುತ್ತಾರೆ. ಅಂತಹ ಚಿತ್ರದಲ್ಲಿ, ದೈತ್ಯಾಕಾರದ ವಧಾಯಂತ್ರಗಳು, ಮಾನವ ಮುಖವಾಡ ಧರಿಸಿದ ಕಟುಕರ ಕೈಗೆ ಸಿಲುಕಿರುವ ದುರ್ದೈವಿ ಪ್ರಾಣಿಗಳ ದೀನ ಹೀನ ಸ್ಥಿತಿ, ಯಂತ್ರಕ್ಕೆ ತಲೆಕೊಟ್ಟಾಗ ಆ ಅಸಹಾಯ ಪ್ರಾಣಿಗಳು ಅರಚುವಾಗ ಉಂಟಾಗುವ ಹೃದಯ ವಿದ್ರಾವಕ ಆಕ್ರಂದನ, ಅನಂತರ ಆಗುವ ಅಮಾನುಷ ಕೊಲೆ, ಬದುಕುವ ಆಸೆಯಿಂದಲೇ ಪ್ರಾಣವು ತೆರಳಲಾರದೆ ತೊಳಲುತ್ತಿರುವಾಗ, ಆ ದೇಹದಲ್ಲಾಗುವ ಮೈನಡುಗಿಸುವಂತಹ ಸೆಳೆತ, ಹೆದರಿಕೆಯನ್ನುಂಟುಮಾಡುವಂತಹ ರಕ್ತಪ್ರವಾಹ ಮತ್ತು ಮಾಂಸದ ಮುದ್ದೆಗಳು ಇವೇ ಮುಂತಾದ ಭೀಭತ್ಸ ದೃಶ್ಯಗಳನ್ನು ವಸ್ತುನಿಷ್ಠವಾಗಿ ಒಳಗೊಂಡಿರಬೇಕಾಗುತ್ತದೆ. ಅಲ್ಲದೆ, ಪ್ರಾಣಿವಧೆಯಂತಹ ಕೃತ್ಯಗಳು ಪಾಪಪೂರಿತವಾದವುಗಳು ಮತ್ತು ಅಮಾನುಷವಾದವುಗಳು ಎಂಬುದು ನೋಟಕರ ಮನಮುಟ್ಟುವಂತೆ ಪರಿಣಾಮಕಾರಿಯಾಗಿ ವಿವರಿಸುವ ವ್ಯಾಖ್ಯಾನವೂ ಇರಬೇಕಾಗುತ್ತದೆ. ಹೀಗಾದಲ್ಲಿ ಅಂತಹ

ದೃಶ್ಯಗಳನ್ನು ಕಣ್ಣಾರೆ ಕಂಡಾಗ, ಮಾಂಸಾಹಾರಿಗಳಾದವರೂ ಹೊಸದಾಗಿ ಮಾಂಸಾಹಾರದ ಸವಿನೋಡಲು ಬಯಸುವ ಅವಿವೇಕಿಗಳೂ. ಭಯ ಮತ್ತು ಜಿಗುಪ್ಸೆಗಳಿಂದ ಮಾಂಸಾಹಾರದಂತಹ ಹೇಯಕೃತ್ಯದಿಂದ ವಿಮುಖರಾಗುವ ಸಾಧ್ಯತೆ ಇಲ್ಲದಿಲ್ಲ.

ನೈತಿಕ ಹೊಣೆಗಾರಿಕೆ

ಜಗತ್ತಿನ ಸಸ್ಯ ಮತ್ತು ಪ್ರಾಣಿ ವರ್ಗಗಳ ನಡುವೆ ಸಹಜೀವನವಿರುವುದು ಪ್ರಕೃತಿಯ ನಿಯಮ. "ಪರಸ್ಪರೋಪಗ್ರಹೋ ಜೀವಾನಾಂ" ಎಂಬ ಮಾತಿನಲ್ಲಿ, ಇಡೀ ಜೀವಪ್ರಪಂಚದ ನಡುವಣ ಪ್ರಾಕೃತಿಕ ಸಂಬಂಧ ಅಭಿವ್ಯಕ್ತವಾಗಿದೆ. ತಮ್ಮ ಬದುಕಿನ ಹೋರಾಟದಲ್ಲಿ ಜೀವಿಗಳು ಆಹಾರಕ್ಕಾಗಿ ಇತರ ಜೀವಿಗಳಿಗೆ ಹಿಂಸೆಕೊಡುವುದು ಅನಿವಾರ್ಯವಾದರೂ, ಯಾವ ಜೀವವರ್ಗವು ಕೂಡ ಮನುಷ್ಯನಷ್ಟು ದೌರ್ಜನ್ಯ ಕೃತ್ಯವೆಸಗಲಾರದು. ಹಿಂದೆಯೇ ತಿಳಿಸಿದಂತೆ, ತನ್ನ ಇಂದ್ರಿಯ ಲಾಲಸೆಗಳ ತಾತ್ಕಾಲಿಕ ತೃಪ್ತಿಗಾಗಿ ಹಾಗೂ ತನ್ನ ನಶ್ವರವಾದ ವೈಭವ ವಿಲಾಸಗಳಿಗಾಗಿ, ತನ್ನಂತೆಯೇ ಹಸಿವು, ನೀರಡಿಕೆ, ನಿದ್ರೆ. ಭಯ, ಮೈಥುನ ಮುಂತಾದ ಅಗತ್ಯಗಳಿಂದ ಕೂಡಿ, ತಮ್ಮ ತಮ್ಮ ಮರಿಗಳ ಪೋಷಣೆಯಲ್ಲಿ ತೊಡಗಿರುವ ಪ್ರಾಣಿಗಳನ್ನು ಕೊಂದು ತಿಂದು ತೇಗುತ್ತಿರುವುದನ್ನು ಕಂಡಾಗ ಮಾನವೀಯ ಪ್ರಜ್ಞೆಯುಳ್ಳ ಯಾವ ವ್ಯಕ್ತಿಗಾದರೂ ಜಿಗುಪ್ಸೆ ಹುಟ್ಟಾಗದಿರದು.

ತನ್ನ ನಾಲಿಗೆಯ ಲಾಲಸೆ ಮತ್ತು ಹೊಟ್ಟೆಬಾಕತನಗಳನ್ನು ತೀರಿಸಿಕೊಳ್ಳಲು ಮಾಂಸವನ್ನು ಸೇವಿಸುವವನು ಆ ಮಾಂಸವನ್ನು ಪಡೆಯಲೋಸ್ಕರ ನಡೆದ ಕೊಲೆಗೆ ತಾನು ಬಾಧ್ಯನಲ್ಲವೆಂದು ಹೇಳಿದಾಗ ಹಾಸ್ಯಾಸ್ಪದವೆನಿಸುತ್ತದೆ. ಕೊಲೆಯ ನೈತಿಕ ಹೊಣೆಗಾರಿಕೆ ಆತನನ್ನು ಬಿಡದು. ಏಕೆಂದರೆ, ಯಾವದೇ ಕ್ರಿಯೆ ನಡೆದಾಗ, ಅದರ ಹಿನ್ನೆಲೆಯಲ್ಲಿರುವ ಆಶಯ ಮತ್ತು ಪ್ರೇರಣೆಗಳು ಬಹು ಮುಖ್ಯವಾದುವು. ಮಾಂಸಾಹಾರಿಯು ಸ್ವತಃ ತಾನು ಪ್ರಾಣಿಗಳನ್ನು ಕೊಲ್ಲದಿದ್ದರೂ, ಕೊಲೆಗೆ ಪ್ರೇರಣೆ ಕೊಡುತ್ತಾನೆ, ಪ್ರೋತ್ಸಾಹಿಸುತ್ತಾನೆ ಮತ್ತು ತನ್ನ ಅನುಮೋದನೆ ನೀಡುತ್ತಾನೆ. ಹೀಗೆ ಯಾವುದೇ ಕ್ರಿಯೆಯಲ್ಲಿ ಅಂತರ್ಗತವಾಗಿರುವ ಕೃತಕಾರಿತ ಮತ್ತು ಅನುಮತ ಪ್ರಕ್ರಿಯೆಗಳೆಲ್ಲ ಆ ಕ್ರಿಯೆಯ ಕಾರಣಗಳು ಎಂಬುದು ತಾರ್ಕಿಕವಾಗಿಯೂ, ಅನುಭವಿಕವಾಗಿಯೂ, ಸಿದ್ಧವಾಗುವ ಸತ್ಯ. ನ್ಯಾಯದ ದೃಷ್ಟಿಯಿಂದಲೂ ಇದಕ್ಕೆ ಮಹತ್ವವಿದೆ. ಉದಾಹರಣೆಗೆ ಯಾವುದಾದರೂ ಕೊಲೆ ಅಥವಾ ಕಳ್ಳತನಗಳ ವಿಚಾರಣೆ ನಡೆಯುವಾಗ, ಸಂಬಂಧಪಟ್ಟ ಕೃತ್ಯದ ಹಿನ್ನೆಲೆಯಲ್ಲಿರಬಹುದಾದ ಆಶಯ ಮತ್ತು ಪ್ರೇರಣೆಗಳನ್ನು ವಿಶ್ಲೇಷಿಸಲಾಗುತ್ತದೆ ಎಂಬುದನ್ನು ನಾವು ಇಲ್ಲಿ ನೆನೆಸಿಕೊಳ್ಳಬಹುದು. ಹೀಗಿರುವಲ್ಲಿ ನಿರಪರಾಧಿ ಹಾಗೂ ಅನಾಥ ಪ್ರಾಣಿಗಳ ಹಿಂಸೆಗೆ ಕಾರಣವಾದ ಮಾಂಸವನ್ನು ಭಕ್ಷಿಸುತ್ತಾ ಅವುಗಳ ಹಿಂಸೆಗೆ ತಾನು ಕಾರಣನಲ್ಲ ಎಂದು ಬೂಟಾಟಿಕೆ ಮಾತನಾಡುವ ವ್ಯಕ್ತಿ ವಂಚಕನೆಂದು ಹೇಳಬೇಕಾಗುತ್ತದೆ. ಅಂತಹವನು ಪ್ರಜ್ಞಾಪೂರ್ವಕವಾಗಿ

ಇಬ್ಬಂದಿತನವನ್ನು ಪಾಲಿಸುತ್ತಿರುತ್ತಾನೆ. ಇಂತಹ ಇಬ್ಬಂದಿತನದ ವ್ಯಕ್ತಿಗಳ ನಡೆನುಡಿಗಳ ವಿಪರ್ಯಾಸದ ಒಂದು ಚಿತ್ರವನ್ನು ಕವಿಯು ತನ್ನ ಮಾತುಗಳಲ್ಲಿ ಚಿತ್ರಿಸಿದ್ದಾನೆ:

He blamed and protested but joined inthe plan
He shared in the plunder, but pitied the man
The fact that the victim is a beast and not a man
Does not make their hypocracy any the less abominable
They could as well have shared the plunder and actually
Joined in the feast while blaming and protesting and pitying the beast*
—Cowper.

ಮಾಂಸಭಕ್ಷಣೆ ಮಾಡುತ್ತಾ, ಸತ್ತ ಪ್ರಾಣಿಯ ಬಗ್ಗೆ ಕೃತಕ ಕನಿಕರ ತೋರಿಸುವಂತಹ ನೀಚರ ಸೊಗಸಾದ ಚಿತ್ರವೊಂದನ್ನು ಜನ್ನನು ತನ್ನ ಯಶೋಧರ ಚರಿತೆಯಲ್ಲಿ ನಮ್ಮ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ. ಸಂಕಲ್ಪ ಹಿಂಸೆಯ ಶಾಪಕ್ಕೆ ಬಲಿಯಾಗಿ ಯಶೋಧರನು ತಾನು ಮಾಡಿದ ಪಾಪದ ಪ್ರಾಯಶ್ಚಿತ್ತಕ್ಕಾಗಿ ಜನ್ಮಜನ್ಮಗಳನ್ನೆತ್ತಿದ್ದಾಗ, ಒಂದು ಜನ್ಮದಲ್ಲಿ ಮೀನಾಗಿ ಜನಿಸಿರುತ್ತಾನೆ. ಮಗ ಯಶೋಮತಿಯು ತನ್ನ ತಂದೆಯ ಶ್ರಾದ್ಧದ ಊಟಕ್ಕಾಗಿ ಆ ಮೀನನ್ನು ಹಿಡಿದು ತರಿಸಿ ಜೇಯಿಸುತ್ತಿರುತ್ತಾನೆ. ಶ್ರಾದ್ಧದ ಊಟಕ್ಕೆ ಬಂದಿದ್ದ ಬ್ರಾಹ್ಮಣರು 'ಯಶೋಧರನು ಸತ್ತು ಸ್ವರ್ಗ ಸೇರಿದ್ದಾನೆ' ಎಂದು ಹೇಳಿ

Cowper, in'Animal Citizen'April–Sept 1971 p.12

ದಾಗ. ಗತಪ್ರಾಣದಿಂದಿದ್ದ ಆ ಮೀನು ಆ ಮಾತನ್ನು ಕೇಳಿ ಜಾತಿ ಸ್ಮರಣೆಯಿಂದ ಮಲಮಲ ಮರುಗುತ್ತದೆ.

ಮಾಂಸಾಹಾರ ಪ್ರಿಯರಲ್ಲಿ ಕೆಲವರು ಪ್ರಾಣಿಗಳ ಬಗ್ಗೆ ಹೊಣೆಗೇಡಿತನದಿಂದ ಲಘುವಾಗಿ ಮಾತನಾಡುವುದುಂಟು "ದೇವರು ಪ್ರಾಣಿಗಳನ್ನು ಮನುಷ್ಯನ ಸ್ವೇಚ್ಛಾರೀತಿಯ ಉಪಯೋಗಕ್ಕಾಗಿ ಹಾಗೂ ಪೌಷ್ಟಿಕತೆಗಾಗಿ ಕಳುಹಿಸಿದ್ದಾನೆ" ಎಂದು ಹೇಳುವವರಿಗೆ ಮೋನಿಕಾ ಹಚಿಂಗ್ಸ್ ಹಾಕುವ ಸವಾಲು: "ಹಾಗಾದರೆ ಮಾನವನಿಗಿಂತ ಶತಶತಮಾನಗಳ ಹಿಂದೆಯೇ ಪ್ರಾಣಿಗಳು ಜೀವಿಸುತ್ತಾ ಬಂದಿರುವುದು, ಅವುಗಳನ್ನು ತಿನ್ನಲು ಬಯಸಿ ಮುಂದೆ ಬರಲಿರುವ ಮಾನವನಿಗಾಗಿ ಕಾದಿರುವ ಸಂಕೇತವೇ?" ಇಂತಹ ಸವಾಲಿಗೂ ಯಾವುದಾದರೂ ಅನುಕೂಲ ಉತ್ತರವನ್ನು ಕಂಡುಕೊಳ್ಳುವ ಜನರಿದ್ದರೂ ಆಶ್ಚರ್ಯವಿಲ್ಲ ಏಕೆಂದರೆ. ಅಸಾಮಾನ್ಯ ಮನೋವಿಜ್ಞಾನದಲ್ಲಿ ಪ್ರತಿಪಾದಿಸಿರುವಂತೆ, ವ್ಯಕ್ತಿಯು ತನ್ನ ಇಷ್ಟಾನಿಷ್ಟಗಳಿಗೆ ಅನುಗುಣವಾಗಿ ನಡೆಸುವ ಕೃತ್ಯಕ್ಕೆ ಸಾಮಾನ್ಯವಾಗಿ ಒಂದಿಲ್ಲ ಒಂದು ಚತುರ ಕಾರಣವನ್ನು ಕೊಡುವ ಪ್ರವೃತ್ತಿ ಹೊಂದಿರುತ್ತಾನೆ.

"ಪ್ರಾಣಿಗಳು ತಿನ್ನುವುದಕ್ಕಲ್ಲದೆ ಮತ್ತೆ ಯಾವುದಕ್ಕೆ ಇವೆ ?" ಎಂಬ ಮಾಂಸಾಹಾರಿಗಳ ಪ್ರಶ್ನೆಗೆ ಡಾ. ಜಿ. ಎಸ್. ಅರುಂಡೇಲರು ತೋರಿಸುವ ತೀವ್ರ ಪ್ರತಿಕ್ರಿಯೆ : "ನೀವು ಏತಕ್ಕಾಗಿ ಇದ್ದೀರಿ ? ನಿಮ್ಮ ಕಿರಿಯ ಬಂಧುಗಳ ದುಃಖದಿಂದ ನೀವು ದಷ್ಟಪುಷ್ಟವಾಗಿ ಬೆಳೆಯಬೇಕೇ ? ಪ್ರಾಣಿಗಳಿಗಿಂತ ಮಾನವನ

ಜೀವನ ಹೆಚ್ಚು ಮಹತ್ವಪೂರ್ಣವಾದುದು ಎಂದು ನೀವು ನನಗೆ ಹೇಳಬಹುದು....ಕೆಲವು ವ್ಯಕ್ತಿಗಳ ಜೀವನ ಮಹತ್ವಪೂರ್ಣವಾಗಿರಬಹುದು. ಆದರೆ ಸಾಮಾನ್ಯರೆನಿಸಿದ ನಮ್ಮೆಲ್ಲರ ಬದುಕು ಇತರ ಕೆಳವರ್ಗಗಳ ದುರ್ಬಲ ಪ್ರಾಣಿಗಳ ಬದುಕಿಗಿಂತ ಹೆಚ್ಚಿನದೆಂಬುದು ನನಗೆ ತಿಳಿಯದು...."

"ಪ್ರಾಣಿಗಳನ್ನು ಕೊಂದು ತಿನ್ನುವುದರಲ್ಲಿ ತಮ್ಮ ನೈತಿಕ ಹೊಣೆಗಾರಿಕೆಯಿಲ್ಲವೆಂಬುದನ್ನು ಹೇಳಿಕೊಳ್ಳಲು, ಮಾಂಸಾಹಾರಿಗಳಲ್ಲಿ ಕೆಲವರು ಚತುರ ಕಾರಣಗಳನ್ನು ಕೊಡುವುದು ಸಾಮಾನ್ಯ. ಅಂತಹವರೂ ಕೂಡ ತಮ್ಮ ನೈತಿಕ ಹೊಣೆಯಿಂದ ಪಾರಾಗಲಾರರು. 'ಮಾಡಿದ್ದುಣ್ಣೋ ಮಹಾರಾಯಾ' ಎಂಬಂತೆ ಅವರು ತಮ್ಮ ಕೃತ್ಯಕ್ಕೆ ಇಂದಲ್ಲ ನಾಳೆ ಸಂಕಟಪಡಲೇಬೇಕಾಗುತ್ತದೆ. "ನಮ್ಮೊಡನೆ ಈ ಭೂಮಿಯನ್ನು ಹಂಚಿಕೊಂಡಿರುವ ನಮ್ಮ ಸಹ ಪ್ರಾಣಿಗಳನ್ನು ಭಕ್ಷಿಸಲು ಯೋಚಿಸುವುದೇ ಅಹಿತಕರವೆನಿಸುವಂತಹ ಕಾಲ ಬರಬಹುದು. ಹೇಗೆಂದರೆ, ಈಗ ನಮ್ಮೊಡನೆ ಜೀವಿಸುವ ಮನುಷ್ಯರನ್ನು ತಿನ್ನುವ ಯೋಚನೆ ಅಹಿತಕರವೆನಿಸುತ್ತಿರುವಂತೆ" ಎಂಬುದು ಮೋನಿಕಾ ಹಚ್ಚಿಂಗ್ಸ್ ನಂಬಿಕೆ. *

ಪ್ರಾಣಿಗಳ ಬಗ್ಗೆ ನಮ್ಮ ನೈತಿಕ ಹೊಣೆಯಿದೆ ಎಂಬುದನ್ನು ನಾವು ಮನಗಾಣಬೇಕಾದರೆ, ಭಾರತೀಯ ಪ್ರಾಣಿ

* Monica Hutchings: A Superior Species 'Animal Citizen' April–Sept. 1971, vol. VIII Nos. 3–4.

ಕಲ್ಯಾಣ ಸಭೆಯ ಅಧ್ಯಕ್ಷೆ ಶ್ರೀಮತಿ ರುಕ್ಮಿಣಿದೇವಿ ಅರುಂಡೇಲ್ ರವರ ಮಾತುಗಳನ್ನು ಸದಾ ನೆನಪಿಸಲ್ಪಿಡಬೇಕಾಗುತ್ತದೆ.

"ತಮಗೆ ದೊರೆತಿರುವ ಆಯುಷ್ಯ ಪರ್ಯಂತ ಮನುಷ್ಯನ ಜೊತೆ ಜೊತೆಗೇ ಈ ಪ್ರಪಂಚದಲ್ಲಿ ಜೀವಿಸುವ ಸಮಾನ ಹಕ್ಕನ್ನು ಎಲ್ಲಾ ಪ್ರಾಣಿಗಳೂ ಪಡೆದಿವೆ.

"....ಅದೇ ರೀತಿಯಲ್ಲಿ ಪ್ರೀತಿ ಮತ್ತು ಶತ್ರುಗಳ ಭಯ ಇವುಗಳನ್ನೂ ಅವು ಪಡೆದಿವೆ. ಹೀಗಿರುವಲ್ಲಿ ವಾಸ್ವಾನಿ ಯವರು ಹೇಳುವಂತೆ 'ಪ್ರಾಣಿಗಳೂ ಮನುಷ್ಯರೆ' ಎಂಬ ಮಾತನ್ನು ನಾವು ಮಾನ್ಯಮಾಡಬೇಕಾಗುತ್ತದೆ"*

ಮಾಂಸಾಹಾರ ಪ್ರಿಯರ ತಲೆಯಲ್ಲಿ ಸುಳಿಯುವ ಮತ್ತೊಂದು ಆಧಾರ ರಹಿತ ವಿಚಾರವೆಂದರೆ: 'ಪ್ರಾಣಿಗಳನ್ನು ಕೊಂದು ತಿನ್ನದಿದ್ದರೆ ಅವುಗಳ ಸಂಖ್ಯೆ ಅಧಿಕವಾಗಿ ಬೆಳೆದು, ಮಾನವನ ಅಸ್ತಿತ್ವಕ್ಕೆ ಧಕ್ಕೆಯುಂಟಾಗುತ್ತದೆ' ಎಂಬುದು ತರ್ಕಬದ್ಧ ವಿಚಾರವಲ್ಲ. ಪ್ರಕೃತಿಯಲ್ಲಿನ ವಸ್ತುಗಳ ನಡುವಣ ಸಮತೋಲನವು ನಿರಂತರವಾಗಿ ಮುಂದುವರಿಯುತ್ತದೆ. ಇದರ ಬಗ್ಗೆ ಮನುಷ್ಯನು ಅಷ್ಟಾಗಿ ಚಿಂತಿಸುವ ಅಗತ್ಯವಿಲ್ಲ.

ದಯಾಶೀಲರ ಹಾಗೂ ವಿಚಾರವಂತರ ಎದುರಿನಲ್ಲಿ, ಪ್ರಾಣಿಗಳ ಬಗ್ಗೆ ತಮ್ಮ ನೈತಿಕ ಹೊಣೆ ಏನೆಂಬುದನ್ನು ಒಪ್ಪಿ

---

* Smt. Rukmini Devi Arundale, Editorial 'Animal Citizen' April-Sept. 1971

ಕೊಂಡು ಕಾರ್ಯತಃ ತದ್ವಿರುದ್ಧವಾಗಿ ವರ್ತಿಸುವ ಜನರನ್ನು ಸಮಾಜಗೇಡಿಗಳೆಂದು ಪರಿಗಣಿಸಬೇಕಾದೀತು. ಇಂದು ವನ್ಯ ಮೃಗ ಸಂರಕ್ಷಣಾ ಮಹೋತ್ಸವ ಮುಂತಾದ ಕಾರ್ಯಗಳಲ್ಲಿ ಮುಂದಾಳುತನ ತೋರುತ್ತಿರುವ ಸಮಾಜದ ಧುರೀಣರಲ್ಲಿ ಕೆಲ ವರೂ, ಅಂತಹ ಸಂಸ್ಥೆಗಳಲ್ಲಿಯೂ ಕೆಲವು ಮಾಂಸಾಹಾರವನ್ನು ಪ್ರೋತ್ಸಾಹಿಸುತ್ತಿರುವುದು ಅತ್ಯಂತ ಹೀನಾಯ ಸಂಗತಿ.ಮಾಂಸಾ ಹಾರವು ಮಾನವನ ನೈತಿಕತೆಗೇ ಧಕ್ಕೆ ತರುತ್ತದೆ ಎಂಬುದು ಸರ್ವವೇದ್ಯ. ಮತ್ತೊಂದು ಪ್ರಾಣಿಯನ್ನು ಹಿಂಸಿಸುವುದಾಗಲೀ ಅಥವಾ ಅದನ್ನು ವಧಿಸುವುದಾಗಲೀ ಮಾನವನ ಉತ್ತಮ ಸ್ವಭಾವಕ್ಕೇ ವಿರುದ್ಧವಾದುದು. ಪಕ್ಷಿ ಅಥವಾ ಪ್ರಾಣಿಯನ್ನು ಕೊಲ್ಲುವಾಗ ಆ ಜೀವಿಯಲ್ಲಿ ತೋರಿಬರುವ ನಿಸ್ತೇಜವಾದ ಕಣ್ಣು ಗಳು ಮತ್ತು ರಕ್ತಸಿಕ್ತದೇಹ ಇವುಗಳು ನಿರ್ದಯಿ ಕೊಲೆಗಡುಕ ಹೃದಯವನ್ನು ನಾಟದಿದ್ದಾಗ,ಅಂತಹ ವ್ಯಕ್ತಿಯು ನರಘಾತುಕ ನಾಗಲೂ ಹೇಸುವದಿಲ್ಲವೆಂಬುದು ಸತ್ಯಸಂಗತಿ. ಇದಕ್ಕೆ ಸಂಬಂಧಿಸಿದಂತೆ ಡಾ. ಆನಿಬೆಸೆಂಟರು ಆಡಿರುವ ಮಾತುಗಳು ಹೆಚ್ಚು ಅರ್ಥಪೂರ್ಣವೆನಿಸುತ್ತವೆ.

> "ಅಂತಃಪ್ರಜ್ಞೆಯು ಇರಿತವನ್ನು ಸಂಪೂರ್ಣವಾಗಿ ಕಡೆ ಗಣಿಸಿ, ಮಾಂಸವನ್ನು ನಿರಂತರವಾಗಿ ಬಳಸಿದಾಗ, ಹೃದಯವು ಬಿರುಸಾಗುತ್ತದೆ, ಬರಡಾಗುತ್ತದೆ ಮತ್ತು ಅಂತಹ ವ್ಯಕ್ತಿಯಲ್ಲಿ ಕಾರುಣ್ಯಭಾವವು ಅಡಗಿ ಕೂರು ತ್ತದೆ. ಭಯ ಮತ್ತು ಭೀಕರತೆಗಳ ಪ್ರತೀಕಗಳೆನಿಸಿ ತನ್ನೆ ದುರು ನಿಂತಿರುವ ಮೂಕ ಮತ್ತು ಅನಾಥ ಪಶುಗಳ

ಮೇಲೆ, ಸ್ವಲ್ಪವೂ ಆತಂಕವಿಲ್ಲವೇ ಕಟುಕನು ತನ್ನ ಕತ್ತಿಯನ್ನು ಪ್ರಯೋಗಿಸುತ್ತಾನೆ. ಇದೇ ಕಾರಣಕ್ಕಾಗಿಯೇ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ಕೊಲೆ ವಿಚಾರಣಾ ನ್ಯಾಯಮಂಡಳಿಯಲ್ಲಿ ಸದಸ್ಯನಾಗಿರಲು ಕಟುಕನಿಗೆ ಹಕ್ಕಿಲ್ಲ. ಪ್ರಾಣಿವಧಾ ಕಾರ್ಯದಲ್ಲಿ ಸದಾ ನಿರತನಾಗಿರುವ ಆತನಿಗೆ ವಿಚಾರಣಾ ಸನ್ನಿವೇಶದಲ್ಲಿರಬೇಕಾದ ಭಾವನೆಗಳು ಮೊಂಡಾಗಿರುತ್ತವೆ. ಆದ್ದರಿಂದ ಆ ದೇಶದಾದ್ಯಂತ, ಕಟುಕ ವೃತ್ತಿಯಲ್ಲಿರುವ ಯಾವದೇ ವ್ಯಕ್ತಿಗೆ ಕೊಲ ವಿಚಾರಣಾ ನ್ಯಾಯಮಂಡಲಿಯಲ್ಲಿರಲು ಅವಕಾಶವಿಲ್ಲ....

"....ಚಿಕಾಗೋ ಅಂತಹ ನಗರಗಳಿಗೆ ಹೋಗಿ ಅಲ್ಲಿನ ಕಟುಕರ ಸಮಾಜವನ್ನು ಪರೀಕ್ಷಿಸಿದರೆ, ಬೇರೆ ಯಾವುದೇ ಸಮಾಜದಲ್ಲಿ ಕಂಡುಬರುವ ಹಿಂಸಾತ್ಮಕ ಅಪರಾಧಗಳ ಸಂಖ್ಯೆಗಿಂತ, ಅಧಿಕ ಸಂಖ್ಯೆಯು ಅಲ್ಲಿ ಕಂಡು ಬರುತ್ತದೆ ಎಂಬುದು ಸ್ಪಷ್ಟ ಮತ್ತು ನಿಶ್ಚಿತ....ನಾನು ಚಿಕಾಗೋನಲ್ಲಿ ಸಂಗ್ರಹಿಸಿದ ಮಾಹಿತಿಯ ಪ್ರಕಾರ ಚಾಕುವನ್ನು ಬಳಸುವುದರಲ್ಲಿ ಅಲ್ಲಿನ ಕಟುಕರಿಗೆ ಒಂದು ವಿಶಿಷ್ಟ ಕೈಚಳಕವಿದೆ. ಅದೆಂದರೆ, ಕೋಪಾವೇಶದಲ್ಲಿ, ಈ ಅನುಭವಿಕ ಕಟುಕರು ಕೊಡುವ ಹೊಡೆತ ಹುಸಿಯಿಲ್ಲದೆ ಪ್ರಾಣಘಾತುಕವಾಗಿರುತ್ತದೆ. ಏಕೆಂದರೆ, ಸಹಜವಾಗಿ ಅವರು ತಮ್ಮ ಹೊಡೆತದಲ್ಲಿ ವಿಶೇಷ ರೀತಿಯ ತಿರುವನ್ನು ಕೊಡುತ್ತಾರೆ. ಅವರು ತಮ್ಮ ದೈನಂದಿನ ಜೀವನದಲ್ಲಿ

ಪ್ರಾಣಿಗಳನ್ನು ಕೊಲ್ಲುವುದರ ಮೂಲಕ ಅಂತಹ ಕ್ರೌರ್ಯ ಚಳಕವನ್ನು ಅವರಲ್ಲಿ ಬೆಳೆಸಿಕೊಂಡಿರುತ್ತಾರೆ"*

ಮಾಂಸಲೋಭಿಗಳ ಪ್ರಹಾರಕ್ಕೆ ತುತ್ತಾದಾಗ ಪಶುಪಕ್ಷಿಗಳು ಎಂತಹ ಹೃದಯವಿದ್ರಾವಕ ನೋವಿನಿಂದ ನರಳುತ್ತವೆ ಎಂಬುದಕ್ಕೆ ಮಹರ್ಷಿ ವಾಲ್ಮೀಕಿಯವರು ಕಣ್ಣಾರೆ ಕಂಡ ಕ್ರೌಂಚಪಕ್ಷಿಯ ವಧೆ ಸೂಕ್ತ ನಿದರ್ಶನ. ಈ ಸನ್ನಿವೇಶವನ್ನು ರಾಷ್ಟ್ರಕವಿ ಕುವೆಂಪುರವರು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ :

....ಕಂಡು ನಲಿದುದು ಮನಂ ಮಿಥುನಮಂ
ದಂಪತಿ ಕ್ರೌಂಚಂಗಳಾ ನೋಡುತಿರೆ, ತೆಕ್ಕನೆಯೆ,
ಗಾಳಿವಟ್ಟೆಯೊಳಾಡುತಿದ್ದಾ ವಿಹಂಗಮಗಳಲಿ
ಗಂಡು ಕೊಂಚೆ ಒರಲ್ದು ದೊಪ್ಪನೆ ನೆಲಕ್ಕುರುಳ್ದು
ಪೊರಳ್ದುದು ಕಾರಿದತ್ತೆರ್ದೆಗೆ ಚುಚ್ಚಿರ್ದ ಸರಳ್
ನೆತ್ತರಂ, ಜೀರ್ಕೊಳವಿಯಂತೆವೋಲ್, ಹುದುಗಿರ್ದ
ಹೊದೆಯಿಂದೆ ಕಾರೊಡಲ ಬಿಲ್ಲವನುರದೆ ಚಿಮ್ಮಿ
ತುಡುಕಿದನದಂ ಮಾಂಸದೊಲವಿಂದೆ. ಕೊಂಚೆವೆಣ್
ಬಿಸುನೆತ್ತರೊಳ್ ನಾಂದು, ಪೊಳೆಮರಳ್ ಪುಡಿಯೊಳ್
ಪೊರಳ್ದು, ಬಿಯದನ ಕೈಗೆ ಸಿಲುಕಿದಿನಿಯನಾಣ್ಮನಂ
ಕಂಡು ಚೀರ್ದಾರ್ದೆರ್ದೆ ಚಕ್ರಗತಿಯಿಂ ಪಾರ್ದು,

* Dr. Anne Besant, World Vegetarian Congress, 1957, P. 68.

ಗಿರಿವನಾ ಚಿ ಚಿತ್ರಿತ ಮೆ ಚಿತ್ರಕರಿಸುವಂತೆ
ಕರಗಿತಂತೆಯೆ ಕರುಳ್ ಮುನಿಗೆ........'*

ಕವಿ ಹೇಳುವಂತೆ ಮಾಂಸದೊಲವಿಂದ ಮನುಷ್ಯನು ಮಾಡಬಹುದಾದ ಹೀನ ಕೃತ್ಯಗಳ ಬಗ್ಗೆ ವಿಚಾರ ಮಾಡಿದಾಗ, ಬೇಟೆಗಾರ, ಕಟುಕ ಅಥವಾ ಮೀನುಗಾರ ಮುಂತಾದವರು ತಮ್ಮ ಹೆಂಡಿರು ಮಕ್ಕಳ ಬಗ್ಗೆ ಕ್ರೂರಿಗಳಾಗಿ ವರ್ತಿಸುವದನ್ನು ಬಹುಶಃ ಯಾರೂ ತಪ್ಪಿಸಲಾರರು. ಹೀಗಿರುವಲ್ಲಿ ನಮ್ಮ ಮತ್ತು ಇತರ ಪ್ರಾಣಿಗಳ ಹಿತದೃಷ್ಟಿಯಿಂದ, ಇಂಗ್ಲೆಂಡಿನ ಕವಿ ಸಾರ್ವಭೌಮ ಪರ್ಸಿಹಿಲ್ ಹೇಳುವಂತೆ: "ಪ್ರಾಣಿಗಳನ್ನು ಮಾನವನ ಭಲ್ಲೆ, ಬಂದೂಕು, ಚಾಕು ಹಾಗೂ ದೈತ್ಯಾಕಾರದ ಯಂತ್ರಗಳಿಂದ ರಕ್ಷಿಸಲು ಅನುಕಂಪೆಯೇ ನಮ್ಮ ಮಹಾಮಂತ್ರವಾಗಬೇಕು. ಇಂತಹ ನೈತಿಕ ಯುದ್ಧದಲ್ಲಿ ಕರುಣೆಯೇ ರಣಗಹಳೆಯಾಗಬೇಕು" ಇದನ್ನುಳಿದು, ನಾವು ಕೇವಲ ಯುದ್ಧ ಬೇಡ ಶಾಂತಿ ಬೇಕು ಎಂದರೆ, ಅದು ಅರಣ್ಯರೋದನವಾದೀತು. ಇದರ ಬಗ್ಗೆ ಲಾರ್ಡ್ ಬರ್ನಾರ್ಡ್ ಷಾ ರವರು ಆಡಿರುವ ಮಾತು ಹೆಚ್ಚು ಔಚಿತ್ಯಪೂರ್ಣವೆನಿಸುತ್ತದೆ :

"ಎಲ್ಲಿಯ ವರೆಗೆ ಮನುಷ್ಯರು ಪ್ರಾಣಿಗಳನ್ನು ಕೊಂದು ಅವುಗಳ ಮಾಂಸವನ್ನು ಭಕ್ಷಿಸುತ್ತಾರೋ ಅಲ್ಲಿಯ ವರೆಗೆ ನಾವು ಯುದ್ಧ ಮಾಡಬೇಕಾಗುತ್ತದೆ. ಕೊಲ್ಲಲ್ಪಟ್ಟ

---

* ಕು.ವೆಂಪು. ಶ್ರೀ ರಾಮಾಯಣ ದರ್ಶನಂ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೦ ಪುಟ ೧೩-೧೪

ಪ್ರಾಣಿಗಳ ಜೀವಂತ ಸಮಾಧಿಗಳಾಗಿರುವ ನಾವು ಈ ಭೂಮಿಯ ಮೇಲೆ ಆದರ್ಶ ಸ್ಥಿತಿಗತಿಗಳನ್ನು ನಿರೀಕ್ಷಿಸಲು ಅದು ಹೇಗೆ ಸಾಧ್ಯ ! ಒಟ್ಟಿನಲ್ಲಿ ಆಹಾರ ಮತ್ತು ಆಡಂಬರಗಳ ನಿಮಿತ್ತವಾಗಿ ಪ್ರಾಣಿಗಳ ಮೇಲೆ ನಾವು ನಡೆಸುತ್ತಿರುವ ದೌರ್ಜನ್ಯ ಕೃತ್ಯಗಳನ್ನು ಇಡೀ ಪ್ರಾಣಿ ಪ್ರಪಂಚದ ಮೇಲೆ ನಾವು ನಡೆಸಿರುವ ಸಮರವೆಂದು ಹೇಳಬೇಕಾಗುತ್ತದೆ. ಈ ಸಮರ ನಿಲ್ಲುವ ವರೆಗೆ ಮನುಷ್ಯರಲ್ಲೇ ನಡೆಯುವ ಸಮರ ನಿಲ್ಲುವುದು ಅಸಾಧ್ಯ".

ವಿವೇಕಶೀಲನೆನಿಸಿದ ಮಾನವನಿಗೆ ಪ್ರಾಣಿಗಳ ಬಗ್ಗೆ ಅಪಾರ ನೈತಿಕ ಹೊಣೆಯಿರಬೇಕಾಗುತ್ತದೆ. ಹಾಗಿಲ್ಲದೆ, ಆತನು ಪ್ರಾಣಿಗಳ ಬಗ್ಗೆ ಕೃತಘ್ನನಾಗಿ ವರ್ತಿಸಿದಲ್ಲಿ ಹಾನಿ ಖಂಡಿತ. ಕೋಲ್‌ರಿಜ್ ಮಹಾಕವಿಯು, ತನ್ನ 'ಪುರಾತನ ನಾವಿಕ' ಎಂಬ ಉತ್ಕೃಷ್ಟ ಕಾವ್ಯದಲ್ಲಿ ಪ್ರಾಣಿದಯೆಯ ಮಹತ್ತ್ವವನ್ನು ಮನಮುಟ್ಟುವಂತೆ ಚಿತ್ರಿಸಿದ್ದಾನೆ :

He prayeth well who loveth well
Both man and bird and beast.

He prayeth best who loveth best
All things both great and small;
For the dear God who loveth us,
He made and loveth all.

ಮರೆಯಲಾಗದ ಮಾತುಗಳು

ಶಾಕಾಹಾರವು ಮಾನವನಿಗೆ ಸಹಜವಾದುದು. ಆದರಿಂದ ಆತನಲ್ಲಿ ಧೈರ್ಯ ಸ್ಥೈರ್ಯ, ಸಂಹಿಷ್ಣುತೆ, ಕಾರುಣ್ಯಭಾವ ಮುಂತಾದ ಸುಗುಣಗಳು ಕ್ರಮೇಣ ವೃದ್ಧಿಯಾಗುತ್ತವೆ ಯಲ್ಲದೆ ಆತನ ಚಿತ್ತಪ್ರವೃತ್ತಿಯೂ ಅದರ ಪ್ರಭಾವಕ್ಕೆ ಒಳಗಾಗುತ್ತದೆ ಎಂಬ ವಿಚಾರಗಳನ್ನು ಸಾಧಾರಗಳಿಂದ ಇಲ್ಲಿಯವರೆಗೆ ಚರ್ಚಿಸಿದ್ದಾಯಿತು. ಇಷ್ಟಲ್ಲದೆ ಆರ್ಥಿಕ ಹಾಗೂ ನೈತಿಕ ದೃಷ್ಟಿಕೋನಗಳಿಂದ ನೋಡಿದಾಗಲೂ ಶಾಕಾಹಾರ ಅತ್ಯುತ್ಕೃಷ್ಟವಾದುದು ಎಂಬ ಅಂಶವೂ ಸ್ಪಷ್ಟವಾಗಿದೆ. ಈ ವಿಚಾರಗಳಿಗೆ ಸಂಬಂಧಿಸಿದಂತೆ ಪ್ರಸಿದ್ಧ ಪುರುಷರು ಹೇಳಿರುವ ಮಾತುಗಳಲ್ಲಿ ಕೆಲವನ್ನು ಈಗ ನಾವು ಪ್ರಸ್ತಾಪಿಸಬಹುದು :

"ವಾನರರು ಮತ್ತು ಅವುಗಳಂತೆಯೇ ಇರುವ ನಾಲ್ಕು ಕಾಲುಗಳ ಸಸ್ತನಿ ವರ್ಗಕ್ಕೆ ಸೇರಿದ ಎಲ್ಲಾ ಪ್ರಾಣಿಗಳೂ ಹಣ್ಣುಗಳು, ದವಸಧಾನ್ಯ ಮತ್ತು ಇತರ ತಿರುಳುಳ್ಳ ತರಕಾರಿಗಳಿಂದ ತಮ್ಮ ಆಹಾರವನ್ನು ಪಡೆಯುತ್ತವೆ. ಈ ಪ್ರಾಣಿಗಳ ದೇಹ ರಚನೆ ಮತ್ತು ಮಾನವನ ದೇಹ ರಚನೆಗಳಲ್ಲಿ ಕಂಡುಬರುವ ನೇರ ಸಾಮ್ಯವು, ಮಾನವನಲ್ಲಿರುವ ಶಾಕಾಹಾರ ಸ್ವಭಾವವನ್ನು ಸ್ಪಷ್ಟವಾಗಿ ತೋರಿಸುತ್ತವೆ."

—ಡಾ. ರಿಚರ್ಡ್ ಓವೆನ್, F.R.C.S.

"ನಾನು ಈಗ ಆತ್ಮಪರಿಷ್ಕಾರದಲ್ಲಿ ತೊಡಗಿದ್ದೇನೆ. ಇನ್ನು ಮುಂದೆ ನಾನು ಮಾಂಸಾಹಾರವನ್ನು ಸೇವಿಸುವುದಿಲ್ಲ. ಈಗ ನಾನು ಅಕ್ಕಿಯ ಇಡ್ಲಿಗಳನ್ನು ತಿನ್ನಲು ತೊಡಗಿದ್ದೇನೆ".

—ಕಾಮ್ರೆಡ್ ಲೆನಿನ್

"ಪ್ರೀತಿಸುವ ಪ್ರತಿಯೊಂದು ಜೀವಿಗೂ, ಪ್ರೀತಿಯನ್ನು ಪಡೆಯುವ ಹಕ್ಕಿದೆ. ದುಃಖಪಡುತ್ತಿರುವ ಪ್ರತಿಯೊಂದು ಜೀವಿಯೂ ನಮ್ಮ ಸಹಾನುಭೂತಿಯನ್ನು ಅಪೇಕ್ಷಿಸಬಹುದು. ....ಮನುಷ್ಯನು ಮನುಷ್ಯನ ಬಗ್ಗೆ ತೋರಿಸುವ ಕ್ರೂರತೆ ಮತ್ತು ಪ್ರಾಣಿಗಳ ಬಗ್ಗೆ ತೋರಿಸುವ ಕ್ರೂರತೆಗಳ ನಡುವಣ ಅಂತರದ ಗುಣದಲ್ಲಿ ಭೇದವಿಲ್ಲ, ಮಟ್ಟದಲ್ಲಿ ಭೇದವಿದೆ. ನಮ್ಮ ಮೇಲಿರುವ ಪರಮಾತ್ಮನ ಆಜ್ಞಾನುಸಾರವಾಗಿ, ಕರ್ತವ್ಯ ಮತ್ತು ಅನುಕಂಪೆಗಳ ನಿಯಮದಲ್ಲಿ ನಾವು ಪ್ರಾಣಿಗಳನ್ನೂ ಸೇರಿಸುವಂತಾದರೆ, ಅದೇ ಸಮಯದಲ್ಲಿ ನಮ್ಮ ಸಹಜೀವಿ ಮಾನವರನ್ನು ಪೋಲಿತ್ತುವ ಕೆಲಸವನ್ನು ಮಾಡಿದಂತಾಗುತ್ತದೆ."

—ಲೆಮಾರ್ಟೀನ್

ಇತಿಹಾಸ ಪೂರ್ವದಿಂದಲೂ ನಾಯಿಗಳು ಮನುಷ್ಯನಿಗೆ ವರಪ್ರಸಾದವಾಗಿ ಬಂದಿವೆ. ಕುದುರೆ, ಹಸು, ಆಡು, ಕುರಿಮರಿ ಮತ್ತು ಇತರ ಅನೇಕ ರೀತಿಯ ಪ್ರಾಣಿಗಳು ಮನುಷ್ಯನಿಗೆ ಸೇವೆಸಲ್ಲಿಸಿವೆ. ಮತ್ತು ಆತನನ್ನು ಅಪಾಯ ಸನ್ನಿವೇಶಗಳಿಂದ ಪಾರುಮಾಡಲು ಮತ್ತೆ ಮತ್ತೆ ನೆರವು ನೀಡಿವೆ. ಇದಕ್ಕೆ ಪ್ರತಿ

ಫಲವಾಗಿ, ಮಾನವನು ಪ್ರಾಣಿಗಳ ಕೊಲೆಪಾತಕನಾಗಿದ್ದಾನೆ. ಎಂತಹ ವಿಶ್ವಾಸಘಾತುಕತನ! ಎಂತಹ ಅಮಾನುಷತೆ!"

— ಜೆ. ಪಿ. ವಾಸ್ವಾನಿ

"ಜೀವನದ ಬಗ್ಗೆ ಚಿಂತಿಸುತ್ತಿದ್ದಾಗ, ನನ್ನ ಸುತ್ತಲಿನ ಯಾವುದೇ ಜೀವಿಯಲ್ಲಿರುವ ಜೀವಿಸುವ ಇಚ್ಛೆಯು ನನ್ನಲ್ಲಿರುವ ಜೀವಿಸುವ ಇಚ್ಛೆಗೆ ಸರಿಸಮನಾಗಿ ನಿಂತಿರುವ ಒಂದು ನಿಗೂಢ ಮೌಲ್ಯ ಎಂಬುದಾಗಿ ಪರಿಗಣಿಸುವುದು ನನ್ನ ಕರ್ತವ್ಯವೆಂಬ ಆಳವಾದ ಪ್ರಜ್ಞೆ ನನಗಿದೆ. ಹೀಗೆ ಜೀವವನ್ನು ಸಂರಕ್ಷಿಸಲು ಮತ್ತು ಅದರ ಉದಾತ್ತ ಗುಣಗಳನ್ನು ಪೂರ್ಣ ರೀತಿಯಲ್ಲಿ ಬೆಳೆಸಲು ಇರುವ ಕಟ್ಟಳೆಯಲ್ಲಿ ಒಳ್ಳೆಯದೆಂದರೆ ಯಾವುದು? ಎಂಬ ಮೂಲ ವಿಚಾರ ಅಭಿವ್ಯಕ್ತವಾಗಿದೆ. ಹೀಗಿರುವಾಗ ಕೆಟ್ಟದ್ದೆಂದರೆ, ಜೀವದ ನಾಶನ, ಜೀವಘಾತ ಮತ್ತು ಅದರ ಬೆಳವಣಿಗೆಯನ್ನು ವಿಫಲಗೊಳಿಸುವ ಕಾರ್ಯವಾಗಿರುತ್ತದೆ."

—ಡಾ. ಆಲ್ಬರ್ಟ್ ಸ್ವೀಟ್ಸರ್

"ಭಾರತದಲ್ಲಿ ಮಾಂಸಭಕ್ಷಣೆ ಅಥವಾ ಪ್ರಾಣಿವಧೆಯ ಸುಳುಹನ್ನೂ ಕಾಣಲು ಸಾಧ್ಯವಿಲ್ಲ. ಚಂಡಾಲನೊಬ್ಬನನ್ನು ಬಿಟ್ಟು ಬೇರೆ ಯಾರೂ ಸತ್ತಪ್ರಾಣಿಯ ದೇಹವನ್ನು ಮುಟ್ಟುವುದಿಲ್ಲ ಅಥವಾ ಪ್ರಾಣಿಯನ್ನು ಕೊಲ್ಲುವುದಿಲ್ಲ. ಭಾರತದಲ್ಲಿ, ಎಲ್ಲಿಯೂ ಮದ್ಯದ ಅಂಗಡಿಯಾಗಲೀ, ಮಾಂಸದ ಅಂಗಡಿಯಾಗಲೀ ಕಂಡುಬರುವುದಿಲ್ಲ".

—ಫಾಹಿಯಾನ್

"ಆಂತರಿಕ ಹಾಗೂ ಬಾಹ್ಯ ಶಾಂತಿ ಸ್ಥಾಪನೆಗೆ ಶಾಕಾಹಾರವು ಮಾನವತೆಗೆ ಒಂದು ಭದ್ರವಾದ ಬುನಾದಿಯನ್ನು ಹಾಕಿಕೊಡಬಲ್ಲದು ಎಂದು ದೃಢವಾಗಿ ನಂಬುತ್ತೇನೆ. ಜಗತ್ತಿನ ಶಾಂತಿಯಾಗಲಿ ಅಥವಾ ಮತ್ತಾವ ರೀತಿಯ ಶಾಂತಿಯಾಗಲೀ ಮಾನವನ ಮನೋಭಾವವನ್ನು ಅವಲಂಬಿಸಿರುತ್ತದೆ. ಶಾಂತಿಗೆ ಬೇಕಾದ ಸಮರ್ಪಕ ಮನೋಭಾವವನ್ನು ಶಾಕಾಹಾರವು ಬೆಳೆಸಬಲ್ಲದು. ಲಾಲಸೆಗಳು, ದ್ವೇಷಭಾವಗಳು, ಕಡುಲೋಭ ಮತ್ತು ಕ್ರೋಧಗಳು. ಬಲಾತ್ಕಾರ ಹಾಗೂ ಹಿಂಸೆ ಇವುಗಳಿಂದ ಆವೃತವಾಗಿರುವ ಈ ಜಗತ್ತಿನಲ್ಲಿ ಶಾಕಾಹಾರವು ಒಂದು ಉತ್ತಮ ಜೀವನ ಮಾರ್ಗವನ್ನು ತೋರಿಸುತ್ತದೆ. ಅದನ್ನು ಸಾರ್ವತ್ರಿಕವಾಗಿ ಅನುಷ್ಠಾನಕ್ಕೆ ತಂದಲ್ಲಿ, ಉತ್ತಮ, ನ್ಯಾಯಬದ್ಧ ಹಾಗೂ ಹೆಚ್ಚು ಶಾಂತಿಯುತ ರಾಷ್ಟ್ರ ಸಮುದಾಯವೊಂದನ್ನು ರೂಪಿಸಲು ಸಾಧ್ಯವಾಗುತ್ತದೆ."

— ಯು ನು (ಬರ್ಮಾದ ಮಾಜಿ ಪ್ರಧಾನಿ)

"ಆಹಾರದ ಬಗ್ಗೆ ಅಗತ್ಯವಾದ ಆಲೋಚನೆ ಮತ್ತು ಪರಿಶೀಲನೆಯನ್ನು ನಾವು ಮಾಡಿದ್ದೇವೆಯೋ! ಎಂದು ಕೆಲವು ವೇಳೆ ನಾನು ಆಶ್ಚರ್ಯಪಟ್ಟಿದ್ದೇನೆ 'ಬದುಕಲು ನಾವು ತಿನ್ನುತ್ತೇವೆ, ತಿನ್ನಲು ಬದುಕುವುದಿಲ್ಲ' ಎಂಬ ಗಾದೆ ಪ್ರಚಲಿತವಾಗಿದ್ದರೂ. ನಮ್ಮ ಆಹಾರ ಮತ್ತು ಆಹಾರ ಸೇವನೆಯ ಅಭ್ಯಾಸಗಳು ನಮ್ಮ ಪ್ರತ್ಯಾಪರಣ ಮತ್ತು ಜೀವನಗಳ ಬಗ್ಗೆ ನಾವು ಬೆಳೆಸಿಕೊಳ್ಳುವ ಸಾಮಾನ್ಯದೃಷ್ಟಿಯ ಮೇಲೆ ಬೀರುವ ಪ್ರಮಾಣ ಅಲ್ಪ ಪ್ರಮಾಣದ್ದಲ್ಲ. ಮಾನವ ಜೀವಿಗಳಿಗೆ ಅತ್ಯಂತ ಆಹ್ಲಾದ

ಕರವೂ, ಸ್ವಾಭಾವಿಕವೂ ಆದ ಆಹಾರವೆಂದರೆ, ಕಾಯಿಪಲ್ಲೆಗಳು, ಹಣ್ಣುಹಂಪಲುಗಳು. ಮತ್ತು ಇತರ ಕೃಷಿಜನ್ಯ ಪದಾರ್ಥಗಳು ಎಂದು ನಂಬುವವರಲ್ಲಿ ನಾನೂ ಒಬ್ಬ ಸರಳ ಜೀವನ ಮತ್ತು ಗಹನ ಚಿಂತನೆಗಳಿಗೆ, ಮಾಂಸಾಹಾರಕ್ಕಿಂತ ಸಸ್ಯಾಹಾರವು ಹೆಚ್ಚು ಅನುಕೂಲಕರವಾದುದು"

—ಡಾ|| ರಾಜೇಂದ್ರಪ್ರಸಾದ್

ಜಾರ್ಜ್ ಬರ್ನಾರ್ಡ್ ಷಾರವರ ವಿಶಿಷ್ಟ ಉಯಿಲು

"ನನ್ನ ಸ್ಮಶಾನಯಾತ್ರೆ ಹೇಗೆ ನಡೆಯಬೇಕೆಂಬುದನ್ನು ನಾನು ನನ್ನ ಉಯಿಲಿನಲ್ಲಿ ಸೂಚಿಸಿದ್ದೇನೆ. ಆ ಯಾತ್ರೆಯಲ್ಲಿ, ದುಃಖಸೂಚಕ ವಾಹನಗಳು ಇರಬೇಕಾಗಿಲ್ಲ. ಆದರೆ ದನ ಮತ್ತು ಕುರಿಗಳ ಮಂದೆಗಳು, ಕೋಳಿಗಳ ಗುಂಪು ಮತ್ತು ಪುಟ್ಟ ಪುಟ್ಟ ಮೀನುಗಳಿಂದ ತುಂಬಿ ಚಲಿಸುತ್ತಿರುವ ಒಂದು ಮೀನಿನ ತೊಟ್ಟಿ (ಮೀನ್ಗೊಳ) ಇವುಗಳು ಆ ಯಾತ್ರೆಯಲ್ಲಿ ಪಾಲ್ಗೊಂಡಿರಬೇಕು. ತನ್ನ ಸಹಜೀವಿಗಳನ್ನು ತಿನ್ನುವುದಕ್ಕೆ ಬದಲಾಗಿ, ತಾನೇ ಪ್ರಾಣತ್ಯಾಗ ಮಾಡಿದ ವ್ಯಕ್ತಿಯ ಗೌರವಾರ್ಥವಾಗಿ ಆ ಪ್ರಾಣಿಗಳೆಲ್ಲಾ ಬಿಳಿಯ ಬಟ್ಟೆಗಳನ್ನು ಧರಿಸಿರಬೇಕು...."

—Nagpur Times

ಅನುಕಂಪೆಯ ಬುಗ್ಗೆಯಂತಿದ್ದ ಬರ್ನಾರ್ಡ್‌ಷಾರವರ ಈ ಆಶಯಕ್ಕೆ ಸರಿಹೋಲುವ ಆಶಯ ಮೂರ್ತರೂಪ ತಳೆದದ್ದು, ಮಹಾ ಮಾನವೀಯ ಗುಣಗಳಿಂದ ಕೂಡಿ, ಕರಾಳ ಕ್ರೂರತೆಯ ದಾರುಣ ಯಾತನೆಗೆ ಒಳಗಾಗಿದ್ದ ಮನೋರೋಗಿಗಳ ಸಂಕೋಲೆಗಳನ್ನು ಕಳಚಿ ಅವರಿಗೆ ಮಾನವೀಯ ಔಷಧೋಪಚಾರದ

ಅವಕಾಶವನ್ನು ಒದಗಿಸಿಕೊಟ್ಟ ಫ್ರಾನ್ಸಿನ ಮನೋವೈದ್ಯ ಡಾ|| ಫಿಲಿಪ್ ಪೀನೆಲನ ಸ್ಮಶಾನ ಯಾತ್ರೆಯನ್ನು ನೆನಪಿಗೆ ತರುತ್ತದೆ. ಆತನ ಸ್ಮಶಾನ ಯಾತ್ರೆಯಲ್ಲಿ "ಫ್ರಾನ್ಸಿನ ಅತ್ಯಂತ ಪ್ರತಿಭಾವಂತ ವಿಜ್ಞಾನಿಗಳು ಮತ್ತು ಮನೋವೈದ್ಯರುಗಳು ಮಾತ್ರವಲ್ಲದೆ ಪೂಜ್ಯಭಾವನೆಯಿಂದ ಕೂಡಿದ್ದ ಆತನ ವಿದ್ಯಾರ್ಥಿಗಳೂ ಸೇರಿದ್ದುದು ಆಶ್ಚರ್ಯದ ಸಂಗತಿಯಲ್ಲ. ಆದರೆ ಅಸ್ತವ್ಯಸ್ತವಾದ ಉಡುಪುಗಳನ್ನು ಧರಿಸಿದ್ದ ಸ್ತ್ರೀಪುರುಷರಿಂದ ಆ ಮೆರವಣಿಗೆ ತುಂಬಿ ಹೋಗಿತ್ತು! ಅವರೆಲ್ಲಾ ಮೊದಲು ಬೈಸೇಟರ್ ಮತ್ತು ಸಾಲ್ ಪೇಟ್ರಿಯರ್ ಮಾನಸಿಕ-ಆಸ್ಪತ್ರೆಗಳಲ್ಲಿದ್ದವರು. ಕೆಲವರಂತೂ ಪಾರ್ಶ್ವವಾಯುವಿನಿಂದ ತಮ್ಮ ಕಾಲುಗಳನ್ನ ಕಳೆದುಕೊಂಡಿದ್ದರೂ ಕೂಡ, ಅನುಕಂಪೆದೋರಿ ತಮ್ಮನ್ನು ಮಾನವೀಯ ದೃಷ್ಟಿಯಿಂದ ಕಂಡು ಉಪಚರಿಸಿದ ಮಹಾಪುರುಷ ಪೀನೆಲನ ಶವದ ಹಿಂದೆ ತೆವಳಿಕೊಂಡೇ ಸಾಗುತ್ತಿದ್ದರು. ಅನುಕಂಪೆಗೆ ದೊರೆತ ಹೃದಯಸ್ಪರ್ಶಿ ಪ್ರತಿಕ್ರಿಯೆ! *

ವಿವಿಧ ಧರ್ಮಗಳಲ್ಲಿ ಶಾಕಾಹಾರ

ಶಾಕಾಹಾರದ ಹಿರಿಮೆಯ ಬಗ್ಗೆ ಸಾಮಾನ್ಯವಾಗಿ ಎಲ್ಲ ಮಾನವೀಯ ಧರ್ಮಗಳ ಪ್ರವರ್ತಕರೂ ನಿಖರ ನಂಬಿಕೆ ಹೊಂದಿ

---

* ಮಾನವೀಯ ಗುಣಗಣ ಫಿಲಿಪ್ ಪೀನೆಲನ, ಮನಸ್ಪರ್ಶಿ ಜೀವನದ ವಿವರಗಳಿಗೆ ನೋಡಿ—ಎ. ಎಸ್. ಧರಣೇಂದ್ರಯ್ಯ (ಅನು) ಮನೋವಿಶ್ಲೇಷಣೆ ನಡೆದು ಬಂದ ದಾರಿ, ಕನ್ನಡ ಅಧ್ಯಯನಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೭೦.

ದ್ದರು ಎಂಬುದು ಗಾಂಧೀಜಿಯವರ ಅಭಿಮತವಾಗಿದ್ದಿತು. ಇದಕ್ಕೆ ಸಂಬಂಧಿಸಿದಂತೆ ಅವರಾಡಿದ ಮಾತು: "ಪ್ರತಿಯೊಂದು ದೃಷ್ಟಿಕೋನದಿಂದನೋಡಿದಾಗಲೂಮಾಸಾಹಾರಕ್ಕಿಂತ ಶಾಕಾಹಾರವು ಬಹು ಉತ್ಕೃಷ್ಟವಾದುದೆಂಬ ಅಂಶ ಸ್ಪಷ್ಟವಾಗುತ್ತದೆ. ಆಧ್ಯಾತ್ಮವಾದಿಗಳ ಅಭಿಮತ ಮತ್ತು ಸಾಮಾನ್ಯವಾಗಿ ಪ್ರೊಟೆಸ್ಟೆಂಟ್ ಧರ್ಮಪ್ರವರ್ತಕರನ್ನುಳಿದು. ಇತರ ಎಲ್ಲಾ ಧರ್ಮಗಳಲ್ಲಿ, ಧರ್ಮಬೋಧಕರ ಅನುಷ್ಠಾನ ಇವುಗಳು, ಮಾನವನ ಆಧ್ಯಾತ್ಮ ಶಕ್ತಿಗೆ ಮಾಂಸಾಹಾರದಷ್ಟು ಅಪಾಯಕಾರಿಯಾದುದು ಮತ್ತೊಂದಿಲ್ಲವೆಂಬುದನ್ನು ತೋರಿಸುತ್ತವೆ ...."

ಕ್ರೈಸ್ತಧರ್ಮ:— "ಏಸುಕ್ರಿಸ್ತ ಮತ್ತು ಆತನ ಅಂದಿನ ಅನುಯಾಯಿಗಳು ಮಾಂಸಭಕ್ಷಣೆ ಮಾಡುತ್ತಿದ್ದರು ಎಂಬುದಕ್ಕೆ ಹೊಸ ಒಡಂಬಡಿಕೆಯಲ್ಲಿ ಯಾವ ಸಾಕ್ಷ್ಯಾಧಾರವೂ ಇಲ್ಲವೆಂಬುದು ಬಹು ಮಹತ್ವಪೂರ್ಣ ಅಂಶ. ಆಧ್ಯಾತ್ಮಿಕ ಜೀವನಕ್ಕೆ ಶಾಕಾಹಾರವು ಅತ್ಯಗತ್ಯವೆಂದು ಅಂದು ಪರಿಗಣಿಸಲಾಗಿದ್ದಿತು. ಹಳೆಯ ಒಡಂಬಡಿಕೆ ಪ್ರವಾದಿಗಳಲ್ಲಿ ಅತ್ಯಂತ ಶ್ರೇಷ್ಠರೆನಿಸಿದ್ದವರು ರಕ್ತಪಾತದ ವಿರುದ್ಧ ಪ್ರತಿಭಟನೆ ತೋರಿಸಿದ್ದುದು ಈ ಮಾತುಗಳಿಂದ ವ್ಯಕ್ತವಾಗುತ್ತದೆ.

"ಕರುಣೆಯನ್ನು ನಾನು ಇಚ್ಛಿಸುತ್ತೇನೇ ಹೊರತು ಬಲಿಯನ್ನಲ್ಲ. ಅಂತೆಯೇ ಜೆಂದ ಅರ್ಚನೆಗಳಿಗಿಂತ ಹೆಚ್ಚಾಗಿ ನನಗೆ ಬೇಕಾದ್ದು ದೇವರ ಜ್ಞಾನ".

—ರೆವರೆಂಡ್ ಜಿ. ನೆವಿನ್ ಡ್ರಿಂಕ್‌ವಾಟರ್

ಸೇಂಟ್ ಪಾಲ್, ಸೇಂಟ್ ಪೀಟರ್, ಸೇಂಟ್ ಮ್ಯಾಥ್ಯೂ ಮುಂತಾದವರು ಶಾಕಾಹಾರಿಗಳಾಗಿದ್ದರು. ಸೇಂಟ್ ಅಗಸ್ಟೈನ್ ಶಾಕಾಹಾರವನ್ನು ಪ್ರೋತ್ಸಾಹಿಸಿದರು. ಇಂದೂ ಕೂಡ ಪೂರ್ವ ಮತ್ತು ಪಶ್ಚಿಮ ಸಿರಿಯನ್ನರ (ನೆಸ್ಟೋರಿಯನ್ನರು ಮತ್ತು ಯಾಕೋಬಿಯನ್ನರು) ಧರ್ಮಗುರುಗಳಿಗೆ ಮಾಂಸಹಾರದ ಬಹಿಷ್ಕಾರವಿದೆ. ಅಲ್ಲದೆ ನ್ಯೂ ಟೆಸ್ಟಮೆಂಟಿನಲ್ಲಿ ಸೇಂಟ್ ಲ್ಯೂಕಾಸ್ ದೇವರ ಆಜ್ಞೆಯನ್ನು ಹೀಗೆ ಹೇಳಿದ್ದಾನೆ: "ನೋಡಿ, ನಾನು ಪೃಥ್ವಿಯ ಮೇಲೆ ಎಲ್ಲ ತರದ ಗಿಡಮೂಲಿಕೆಗಳನ್ನೂ, ಅವುಗಳ ಬೀಜಗಳನ್ನು ಹಾಕಿದ್ದೇನೆ ಮತ್ತು ಜೊತೆಯಲ್ಲಿ ನಾನಾ ತರದ ಫಲಗಳಿಂದ ತುಂಬಿರುವ ಗಿಡಮರಗಳು ಹಾಗೂ ಅವುಗಳ ಬೀಜಗಳನ್ನೂ ಕೊಟ್ಟಿದ್ದೇನೆ. ಈ ಎಲ್ಲಾ ಶಾಕಾಹಾರ ಪದಾರ್ಥ ಗಳನ್ನು ತಿನ್ನಿರಿ."

ಇಸ್ಲಾಂ ಧರ್ಮ:— "ಯಾವುದೇ ತರದ ಮಾಂಸ ಮತ್ತು ರಕ್ತ ಪರಮಾತ್ಮನಿಗೆ ಸಲ್ಲುವುದಿಲ್ಲ. ಆದರೆ ನೀವು ಏನಾದರೂ ದಯಾಭಾವವನು ಪಾಲಿಸಿದರೆ ಅದು ಅಲ್ಲಿ ಮುಟ್ಟುತ್ತದೆ......

"....ಮಾನವನು ತನ್ನ ಭೋಜನದ ಮೇಲೆ ಧ್ಯಾನವನ್ನಿಡ ಬೇಕು. ನಾವು ಬಹಳ ಮಳೆಗರೆದೆವು. ಧಾನ್ಯ. ದ್ರಾಕ್ಷಿ, ಔಷಧಿ, ಖರ್ಜೂರ ಮೊದಲಾದವುಗಳನ್ನು ಸೃಷ್ಟಿಸಿದೆವು. ಫಲಭರಿತ ಮರಗಳು ಮತ್ತು ವನಸ್ಪತಿಗಳುಳ್ಳ ತೋಟಗಳನ್ನೂ ಕೊಟ್ಟ

ದ್ದೇವೆ ಏಕೆಂದರೆ, ನಿಮ್ಮ ಮತ್ತು ನಿಮ್ಮ ಪಶುಗಳ ಉಪಯೋಗಕ್ಕಾಗಿ''.

—ಕುರಾನ್ ಷರೀಫ್, ಸರಾಹಜ್‌ಕುರ್ ೫, ಆಯತ೩೪

ಸಿಕ್ ಧರ್ಮ:— ಮಾಂಸಾಹಾರಿಗಳಲ್ಲಿ ಅಂತರ್ಗತವಾಗಿದ್ದ ಪ್ರಾಣಿದಯಾಭಾವವನ್ನು ಹೊರಹೊಮ್ಮಿಸಲು ಗುರು ನಾನಕರು ಮಾಡಿದ ಉಪದೇಶದ ಸಾರಾಂಶ: "ನಾವು ನಿಮ್ಮಲ್ಲಿ ಎಂದೂ ಆಹಾರ ತೆಗೆದುಕೊಳ್ಳಲಾರೆವು. ಏಕೆಂದರೆ ನೀವು ಪ್ರಾಣಿಗಳಿಗೆ ದುಃಖ ಕೊಡುತ್ತೀರಿ. ಮೊದಲು ನೀವು ಮಾಂಸ ಭಕ್ಷಣೆಯನ್ನು ತ್ಯಾಗಮಾಡಿ. ಮಾಂಸಾಹಾರದಿಂದ ನಿಮ್ಮ ಜೀವನವು ಹದಗೆಡುತ್ತದೆ. ದುಃಖದಾಯಿಯ ತಾಮಸ ವೃತ್ತಿಯನ್ನು ಬಿಟ್ಟು ಸುಖದಾಯಿ ಪ್ರಭುಶಕ್ತಿಯಲ್ಲಿ ಲೀನವಾಗಿ" ಎಂಬ ಉಪದೇಶದಿಂದ ಪ್ರಭಾವಿತರಾಗಿ, ಅನೇಕರು ಪ್ರಾಣಿವಧೆಯನ್ನು ತ್ಯಾಗ ಮಾಡಿ ಶಾಕಾಹಾರಿಗಳಾದರು.

—ನಾನಕ ಪ್ರಕಾಶ, ಪೂರ್ವಾರ್ಧ ಅಧ್ಯಾಯ—೫೫

ಪಾರಸೀ ಧರ್ಮ:—"ಯಾವನು ಯಾವುದೇ ಪಶುವನ್ನು ಕೊಲ್ಲುವನೋ ಅವನನ್ನು ಪರಮಾತ್ಮನನ್ನು ಸ್ವೀಕರಿಸನು..... ಎಲೈ ಪವಿತ್ರ ಮಾನವನೇ ಪೃಥ್ವಿಯ ಮುಖವನ್ನು ರಕ್ತ ಮತ್ತು ಹೊಲಸು ಮಾಂಸಗಳಿಂದ ಪಾರುಮಾಡಿ ಪವಿತ್ರವನ್ನಾಗಿಸು ಇದೇ ಪರಮಾತ್ಮನ ಆಜ್ಞೆಯಾಗಿದೆ." ಎಂಬ ಮಾತುಗಳು ಈ ಧರ್ಮದ ಧರ್ಮಗ್ರಂಥದಲ್ಲಿ ಪ್ರತಿಪಾದಿತವಾಗಿವೆ. ಡೆಸಾಟಿಕ್ ಎಂಬ ಗ್ರಂಥದಲ್ಲಿ ಬರುವಒಂದು ಕುತೂಹಲಕಾರಕ ಕಥೆ ಹೀಗಿದೆ: ಮೃಗಗಳಾದ ನಾವು ಹೆಚ್ಚು ಮುಗ್ಧರಾಗಿದ್ದೇವೆ. ಆದರೆ ಮಾನವನ ನಿರ್ದಯ ಹೃದಯ ವರ್ತನೆಯಿಂದ ನಾವು

ಕ್ರೂರತನವನ್ನು ಕಲಿತೆವು. ನಮ್ಮೊಡನೆಯೇ ಕಾಡುಗಳಲ್ಲಿ ವಾಸಿಸುವ ಋಷಿಗಳನ್ನು ನಾವು ಹಿಂಸಿಸುವುದಿಲ್ಲ. ನಾವು ಮಾನವರ ಶತ್ರುಗಳಾಗಲು ಕಲಿಯುವ ವರೆಗೂ ನಮ್ಮನ್ನು ಓಡಿಯಾಡಿಸಿ ಹಿಂಸಿಸಲಾಗುತ್ತಿದ್ದಿತು."

ವೈದಿಕ ಧರ್ಮ:—ಮಹಾಭಾರತದ ಅನುಶಾಸನ ಪರ್ವ ಅಧ್ಯಾಯ ೧೧೬೧ ರಲ್ಲಿ ಶಾಕಾಹಾರಕ್ಕೆ ಸಂಬಂಧಿಸಿದ ವಿಚಾರದಿಂದ ಆಯ್ದು ಕೆಲವು ಮಾತುಗಳು ! "..... ಪ್ರಾಚೀನ ಋಷಿಗಳು ಹೇಳುವ ಭೋಜನದಲ್ಲಿ ಅಕ್ಕಿ ಜವೆಗೋದಿ, ಹೆಸರು, ಉದ್ದು, ತುಪ್ಪ, ಎಣ್ಣೆ, ಹಾಲು, ಸಕ್ಕರೆ, ಕಲ್ಲುಸಕ್ಕರೆ ಮೊದಲಾದವುಗಳನ್ನು ತೆಗೆದುಕೊಳ್ಳುವುದು ಯೋಗ್ಯವಾಗಿವೆ.

ಯಾವ ಜನರು ನಾನಾತರದ ಅಮೃತದಿಂದ ತುಂಬಿರುವ ಶಾಕಾಹಾರದ ಉತ್ತಮ ಪದಾರ್ಥಗಳನ್ನು ಬಿಟ್ಟು ಮಾಂಸ ಮೊದಲಾದ ಘೃಣಿತಪದಾರ್ಥಗಳನ್ನು ತಿನ್ನುತ್ತಾರೆಯೋ ಅವರು ನಿಜವಾಗಿಯೂ ರಾಕ್ಷಸರಂತೆ ಕಾಣುತ್ತಾರೆ..... ಯಾವನು ಬೇರೆಯವರ ಮಾಂಸದಿಂದ ತನ್ನ ಮಾಂಸವನ್ನು ಬೆಳೆಸಲು ಬಯಸುತ್ತಾನೆಯೋ ಆ ನಿರ್ದಯಿಗಿಂತ ಕ್ಷುದ್ರ ವ್ಯಕ್ತಿ ಮತ್ತಾರೂ ಇಲ್ಲ."

ಮಾಂಸಾಹಾರದಂತಹ ಅಭಕ್ಷ್ಯ ಭಕ್ಷಣಕ್ಕೆ ಮನುಸ್ಮೃತಿಯಲ್ಲಿ ನಾನಾರೀತಿಯ ಪ್ರಾಯಶ್ಚಿತ್ತಗಳನ್ನು ಹೇಳಿದೆ. ಮಾಂಸಾಹಾರವು ತ್ಯಾಜ್ಯವಾದುದೆಂಬುದಕ್ಕೆ ವೈದಿಕ ಧರ್ಮದಲ್ಲಿ ಆಧಾರಗಳಿಗೆ ಕಡಿಮೆಯಿಲ್ಲ.

ಬೌದ್ಧ ಧರ್ಮ:—ಲಂಕಾವತಾರ ಸೂತ್ರದಲ್ಲಿ ಮಹಾತ್ಮಾ ಬುದ್ಧನು ಹೇಳಿರುವ ಮಾತುಗಳು: "ಮಾಂಸವು ದುರ್ಗಂಧ ಮಯವಾಗಿದೆ. ಮ್ಲೇಚ್ಛರು ಇದನ್ನು ಸೇವಿಸುತ್ತಾರೆ. ಆದರೆ ಆರ್ಯಪುರುಷರು ಮಾಂಸ ರಕ್ತಪೂರಿತ ಆಹಾರವನ್ನು ಸೇರಿಸುವುದಿಲ್ಲ. ಏಕೆಂದರೆ ಅದು ಘೃಣಾಸ್ಪದವಾಗಿದ್ದು ಅಭಕ್ಷ್ಯವೆನಿಸುತ್ತದೆ."

ವೀರಶೈವ ಧರ್ಮ:—"ದಯೆಯಿಲ್ಲದ ಧರ್ಮವಾವುದಯ್ಯಾ? ದಯೆಯೇ ಬೇಕು. ಸಕಲ ಜೀವಿಗಳಲ್ಲಿ, ದಯೆಯೇ ಧರ್ಮದ ಮೂಲವಯ್ಯಾ" ಎಂದು ಸಾರಿದ ಯುಗಪುರುಷ ಬಸವಣ್ಣನವರ ಮಾತಿನಲ್ಲಿಯೂ ಮತ್ತು "ಕೊಲುವ ಧರ್ಮವನೊಯ್ದು ಒಲೆಯೊಳಗೆ ಇಕ್ಕುವಾ! ಕೊಲಲಾಗದೆಂಬ ಜೈನನಾ ಮತವೆನ್ನ ತಲೆಯ ಮೇಲಿರಲಿ" ಎಂಬ ಸರ್ವಜ್ಞ ವಚನದಲ್ಲಿಯೂ ಶಾಕಾಹಾರಕ್ಕೆ ಭದ್ರ ಬುನಾದಿ ಇರುವುದು ಕಂಡು ಬರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಮಹಿಮಾನ್ವಿತೆ ಅಕ್ಕ ಮಹಾದೇವಿಯು ಆಡಿದ ಮಾತುಗಳು ಆಣಿಮುತ್ತುಗಳಂತಿವೆ.

ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ.
ಹಲವು ಪ್ರಾಣಿಯ ಕೊಂದು. ನಲಿನಲಿದಾಡುವ
ತನ್ನ ಮನೆಯಲ್ಲೊಂದು ಶಿಶು ಸತ್ತಡೆ
ಅದಕ್ಕೆ ಮರುಗುವಂತೆ ಅವಕೇಕೆ ಮರುಗನು?
ಜಾಲಗಾರನ ದುಃಖ ಜನಕ್ಕೆಲ್ಲ ನಗೆಗೆಡೆ
ಇದು ಕಾರಣ ಚನ್ನಮಲ್ಲಿಕಾರ್ಜುನಯ್ಯನ
ಭಕ್ತರಾಗಿರ್ದು ಜೀವ ಹಿಂಸೆಯ ಮಾಡುವ
ಮಾದಿಗರನೇನೆಂಬೆನಯ್ಯಾ!

ಜೈನಧರ್ಮ ಮತ್ತು ಶಾಕಾಹಾರ

ಜೀವದಯೆಯ ಮಹತ್ವವನ್ನೂ, ಜೀವಿಗಳಲ್ಲಿ ದಯೆ ತೋರುವಲ್ಲಿ ಪ್ರಮುಖ ಹೆಜ್ಜೆ ಶಾಕಾಹಾರವೆಂಬುದನ್ನೂ ಜಗತ್ತಿನ ಮಹಾಧರ್ಮಗಳೆಲ್ಲಾ ಒಂದಿಲ್ಲ ಒಂದು ರೀತಿಯಲ್ಲಿ ಪ್ರತಿಪಾದಿಸಿರುವುದನ್ನು ಸ್ಥೂಲರೂಪದಲ್ಲಿ ನೋಡಿದೆವು. ಅಹಿಂಸೆಯೇ ಧರ್ಮದ ಜೀವಾಳವೆಂದು ಸ್ಪಷ್ಟವಾಗಿ ಪ್ರತಿಪಾದಿಸಿರುವ ಜೈನಧರ್ಮವು ಶಾಕಾಹಾರಕ್ಕೆ ಬಹಳ ಮಹತ್ವ ಕೊಟ್ಟಿರುವುದು ಕಂಡು ಬರುತ್ತದೆ. ಜೀವಿಯು ತನ್ನ ಪರಮಪುರುಷಾರ್ಥವಾದ ಮೋಕ್ಷವನ್ನು ಪಡೆಯಲು ಇರುವ ಮಾರ್ಗ ಸಮ್ಯಗ್ದರ್ಶನ, ಸಮ್ಯಗ್ ಜ್ಞಾನ ಮತ್ತು ಸಮ್ಯಗ್ ಚಾರಿತ್ರ ಸ್ವರೂಪಿಯಾಗಿದೆಯಲ್ಲದೆ, ಅಹಿಂಸೆಯೇ ಸಮ್ಯಗ್ ಚಾರಿತ್ರದ ಜೀವಾಳವಾಗಿದೆ. ಈ ಕಾರಣದಿಂದಲೇ "ಅಹಿಂಸಾ ಪರಮೋ ಧರ್ಮಃ"; "ಜೀವ ದಯೆಯೇ ಪರಮಧರ್ಮ"; "ಸರ್ವಜೀವ ರಹಿತ. ಸರ್ವತತ್ತ್ವದ ಮೊತ್ತ" ಎಂಬ ನಾನಾ ಪದಪುಂಜಗಳು ಪ್ರಚಲಿತವಾಗಿರುವುದು.

ಜೈನಧರ್ಮ ಪ್ರವರ್ತನೆ ಮಾಡಿದ ವರ್ತಮಾನ ಕಾಲದ ತೀರ್ಥಂಕರರಲ್ಲಿ ಕೊನೆಯವರಾದ ಮಹಾವೀರರು ದಯೆಯ ಅಗತ್ಯ ಮತ್ತು ಅನುಷ್ಠಾನಗಳ ಬಗ್ಗೆ ಅನೇಕ ಅಮೃತ ಬಿಂದುಗಳನ್ನು ನಮಗಿತ್ತಿದ್ದಾರೆ :

"ಸಕಲ ಜೀವಿಗಳೂ ಜೀವಿಸಲು ಇಚ್ಛಿಸುತ್ತವೆ; ಯಾವ ಜೀವಿಯೂ ಸಾಯಲು ಇಚ್ಛಿಸುವುದಿಲ್ಲ. ಆದ್ದರಿಂದ ಯಾರನ್ನೂ ಯಾವ ಬಗೆಯಲ್ಲಿಯೂ ಹಿಂಸಿಸಲಾಗದು; ಎಲ್ಲಾ ಜೀವಿಗಳ ವಿಚಾರದಲ್ಲಿಯೂ ಸಮತಾಭಾವವಿರುವುದೇ ಅಹಿಂಸೆ...."

"ನೀವು ಅಭಯವನ್ನು ಬಯಸುವಂತೆಯೇ, ಇತರ ಪ್ರಾಣಿಗಳಿಗೂ ನೀವು ಅಭಯವನ್ನುಂಟುಮಾಡಬೇಕು. ಅನಿತ್ಯ ವಾದ ಜೀವಲೋಕದಲ್ಲಿ ಹಿಂಸೆಯನ್ನು ಮಾಡುವುದೇಕೆ ?"

"ಯಾವ ಜೀವಿಯನ್ನೂ ಕೊಲ್ಲಲಿಚ್ಛಿಸಬಾರದು, ಬೇರೆ ಯವರಿಗೆ ಕಷ್ಟಕೊಡಬಾರದು".

"ಎಲ್ಲಾ ಪ್ರಾಣಿಗಳ ವಿಚಾರದಲ್ಲಿಯೂ ಮೈತ್ರಿಭಾವ ವನ್ನು ಬೆಳಸಿಕೊಳ್ಳಬೇಕು".

"ಇದೇ ಧ್ರುವವಾದ, ನಿತ್ಯವಾದ ಶಾಸ್ವತವಾದ ಧರ್ಮ"*.

ಅಹಿಂಸೆಯೇ ಏಕೆ ಪರಮ ಧರ್ಮವೆನಿಸುತ್ತದೆ ಎಂಬು ದನ್ನು ಮೇಲಿನ ನುಡಿಮುತ್ತುಗಳು ಸ್ಪಷ್ಟಪಡಿಸುತ್ತವೆ. ಸಕಲ ಜೀವಿಗಳಿಗೂ ಲೇಸನೆಸಗುವುದೇ ಧರ್ಮವೆಂದು ಸಾರಿದ ಬಸವಣ್ಣ ನವರ ಮಾತನ್ನೂ ಇಲ್ಲಿ ನೆನಸಿಕೊಳ್ಳಬಹುದು.

ಜೀವಿಸುವ ಹಕ್ಕು ಎಲ್ಲಾ ಜೀವಿಗಳಿಗೂ ಇರುವಾಗ ಮಾನವನು ತನ್ನ ಸ್ವಾರ್ಥಕ್ಕಾಗಿ ಇತರ ಜೀವಿಗಳನ್ನು ಹಿಂಸಿಸು ವುದು ಅಧರ್ಮ. ಆದರೆ ಸರ್ವಜೀವಿಗಳ ಹಿತವನ್ನು ಬಯಸು

---

* ಎಸ್. ಕೆ. ರಾಮಚಂದ್ರರಾವ್, ವರ್ಧಮಾನ ಮಹಾವೀರ

ವುದು ಸುಲಭ ಸಾಧ್ಯ ಕೆಲಸವಲ್ಲ. ಆದಕ್ಕೆ ವಸ್ತುಸ್ಥಿತಿಯ ಬಗ್ಗೆ ಸರಿಯಾದ ನಂಬಿಕೆ, ಜ್ಞಾನ ಮತ್ತು ಅನುಷ್ಠಾನಗಳ ಅಗತ್ಯವಿದೆ. ಆದ್ದರಿಂದ ಅಹಿಂಸೆಯನ್ನು ನಾವು ಪಾಲಿಸಬೇಕಾದರೆ. ಹಿಂಸೆಯ ಸ್ವರೂಪ ಮತ್ತು ಅದರ ಭೀಕರ ಪರಿಣಾಮಗಳ ಬಗ್ಗೆ ವಿಶದವಾಗಿ ತಿಳಿಯುವ ಅಗತ್ಯವಿದೆ.

ಜೈನಾಚಾರ್ಯರು ಕೊಟ್ಟಿರುವ ಹಿಂಸೆಯ ವ್ಯಾಖ್ಯೆ :

"ಪ್ರಮತ್ತ ಯೋಗಾತ್ ಪ್ರಾಣವ್ಯಪರೋಷಣಂ ಹಿಂಸಾ"

ಕ್ರೋಧ, ಮಾನ ಮಾಯ ಲೋಭಗಳಂತಹ ಪ್ರಮಾದಗಳಿಂದ ಉಂಟಾದ ಮನ, ವಚನ ಮತ್ತು ಕಾಯ ಕ್ರಿಯೆಗಳಿಂದ ಸ್ವಪರ ಪ್ರಾಣಗಳನ್ನು ಅಪಹರಿಸುವುದು 'ಹಿಂಸೆ' ಎನಿಸುತ್ತದೆ. ಒಂದು ಜೀವಿಯಲ್ಲಿ ಹೆಚ್ಚೆಂದರೆ ಹತ್ತು ಪ್ರಾಣಗಳಿರುತ್ತವೆ-ಪಂಚೇಂದ್ರಿಯಗಳು. ಮನೋಯೋಗ ವಚನಯೋಗ, ಕಾಯಯೋಗ, ಉಚ್ಛ್ವಾಸ- ನಿಶ್ವಾಸ ಮತ್ತು ಆಯುಸ್ಸು- ಈ ಪ್ರಾಣಗಳಲ್ಲಿ ಒಂದನ್ನಾಗಲೀ ಅಥವಾ ಒಂದಕ್ಕಿಂತ ಹೆಚ್ಚು ಪ್ರಾಣಗಳನ್ನಾಗಲೀ ಕೃತಕಾರಿತ ಅಥವಾ ಅನುಮತಗಳಿಂದ ನಾಶಮಾಡುವುದು ಹಿಂಸೆ ಎನಿಸುತ್ತದೆ. ಕರ್ಮ ಸಿದ್ಧಾಂತದ ಪ್ರಕಾರ ಹಿಂಸೆಯಿಂದ ಪಾಪ ಸಂಗ್ರಹವಾಗಿ ಕಾಲಾಂತರದಲ್ಲಿ ಫಲಕೊಡುತ್ತದೆ. ಕೊಲೆಯೆಂಬುದು ಎಷ್ಟು ಹೇಯವಾದುದೆಂಬುದು ನಯಸೇನರ ಮಾತುಗಳಲ್ಲಿ ಸ್ಪಷ್ಟವಾಗಿದೆ:

ಕೊಲೆಯೆಂಬೀ ನುಡಿಗೆ ಮಹಾ
ಕಲಿಯುಂ ಮೊದಲಾಗೆ ನಾಡೆ ಬೆರ್ಚುವೆನೆಂದಂ

ದೆಲೆಗಳ ಬಗೆವೊಡೆ ಜಗದೊಳ್
ಕೊಲೆಯಿಂದಂ ಬಿಟ್ಟು ಪಾತಕಂ ಪೆರತುಂಟೆ*

ಕೊಲೆಯಿಂದ ಭೀಕರವಾದ ಪಾಪ ಮತ್ತೊಂದಿಲ್ಲ. 'ಮಾಡಿದ್ದುಣ್ಣೋ ಮಹಾರಾಯ' ಎಂಬ ನಾಣ್ಣುಡಿಯಂತೆ ಹಿಂಸೆಯ ಪ್ರತಿಫಲವನ್ನು ಅನುಭವಿಸಲೇಬೇಕು. ಅಲ್ಲದೆ 'ಅವಶ್ಯ ಮನುಭೋಕ್ತವ್ಯಂ ಕೃತಂಕರ್ಮ ಶುಭಾಶುಭಂ' ಎಂಬಂತೆ ನಾವು ಮಾಡುವ ಒಳ್ಳೆಯ ಮತ್ತು ಕೆಟ್ಟ ಕ್ರಿಯೆಗಳಿಗೆ ಅನುಗುಣವಾದ ಸುಖ ದುಃಖಗಳನ್ನು ಅನುಭವಿಸಲೇ ಬೇಕೆಂಬುದು ಕರ್ಮಸಿದ್ಧಾಂತ. ಹೀಗಿರುವುದರಿಂದ ನಾವು ನಮ್ಮ ಆಚಾರ ವಿಚಾರಗಳಲ್ಲಿ ಬಹು ಎಚ್ಚರಿಕೆಯಿಂದ ಪ್ರವರ್ತಿಸಬೇಕಾಗುತ್ತದೆ.

ನಮ್ಮ ವೈಮನ ಮಾತುಗಳ ಪ್ರಕ್ರಿಯೆಗಳು ನಾವು ಸೇವಿಸುವ ಆಹಾರವನ್ನೂ ಸಾಕಷ್ಟು ಅವಲಂಬಿಸಿರುತ್ತವೆ ಎಂಬ ವಿಚಾರವನ್ನು ಹಿಂದೆಯೇ ಪ್ರಸ್ತಾಪಿಸಲಾಗಿದೆ. ಆದ್ದರಿಂದ ನಾವು ಸೇವಿಸುವ ಆಹಾರವು ಶುದ್ಧವೂ, ಅತ್ಯಲ್ಪ ಮಟ್ಟದ ಹಿಂಸೆಯಿಂದ ಕೂಡಿದುದೂ ಆಗಿರಬೇಕಾಗುತ್ತದೆ. ಶಾಕಾಹಾರದ ದೆಸೆಯಿಂದಲೂ ಹಿಂಸೆಯಾಗುತ್ತದೆಂಬುದನ್ನು ಪ್ರತಿಪಾದಿಸಿದವರಲ್ಲಿ ಜೈನಾಚಾರ್ಯರೇ ಮೊದಲಿನವರು ಎಂದು ಹೇಳಿದರೆ ಬಹುಶಃ ತಪ್ಪಾಗದು. ಆದರೂ ಪರಮಾರ್ಥ ಸಾಧನೆಗೆ ಬೇಕಾದ ಧರ್ಮಾಚರಣೆಗೆ ನೆರವಾಗುವ ದೇಹವನ್ನು ಬೆಳೆಸಿ ಉಳಿಸಿಕೊಂಡು ಬರುವ ಸಲುವಾಗಿ, ನಿಯಮಿತ ಆಹಾರ ಸೇವನೆ ಅನಿವಾರ್ಯ.

---

* ನಯಸೇನನ ಧರ್ಮಾಮೃತ, ಪುಟ ೩೧೧

ಆಹಾರ ಸೇವನೆ ಅನಿವಾರ್ಯವೆಂದಮೇಲೆ, ತೀವ್ರತರ ಹಿಂಸೆಯಿಂದ ವಿಮುಖರಾಗುವ ಸಲುವಾಗಿ ಮಾಡುವ ಮಾಂಸಾಹಾರ ತ್ಯಾಗ ಮೊದಲ ಹೆಜ್ಜೆ. ಏಕೆಂದರೆ, ಶಾಕಾಹಾರದಿಂದ ಏಕೇಂದ್ರಿಯ ಜೀವಿಗಳಿಗೆ ಹಿಂಸೆಯಾದರೆ. ಮಾಂಸಾಹಾರದಿಂದ ಪ್ರಮುಖವಾಗಿ ಪಂಚೇಂದ್ರಿಯ ಜೀವಿಗಳ ಕೊಲೆಯಾಗುತ್ತದೆ. ಅಲ್ಲದೆ ಹಿಂಸೆಯ ತೀವ್ರತೆಯಲ್ಲಿಯೂ. ಹಿಂದೆಯೇ ಹೇಳಿರುವಂತೆ, ಶಾಕಾಹಾರ ಮತ್ತು ಮಾಂಸಾಹಾರಗಳ ನಡುವೆ ಬಿಂದು ಮತ್ತು ಸಿಂಧುಗಳ ಅಂತರವಿದೆ. ಆದ್ದರಿಂದ ಮಾಂಸಭಕ್ಷಣೆಯಿಂದ ಉಂಟಾಗುವ ತೀವ್ರತರ ಹಿಂಸೆಯಿಂದ ಹಿಂಸಕನಿಗೆ ಕಟ್ಟುವ ಪಾಪದ ತೀವ್ರತೆಯೂ ಅಪಾರ. ಆ ಪಾಪದ ಫಲವನ್ನು ಆತನು ಇಹಪರಗಳಲ್ಲಿ ಅನುಭವಿಸಲೇಬೇಕಾಗುತ್ತದೆ. ಇದಕ್ಕೆ ಪೌರಾಣಿಕ ನಿದರ್ಶನ ಯಶೋಧರನ ಜನ್ಮಾಂತರ ಪರಿಭ್ರಮಣೆ. ಎಣ್ದೆಸೆಯನಡರ್ದ ಕೀರ್ತಿ ಪ್ರಸರವಿದ್ದ ಯಶೋಧರನು ತಾಯ ಮೇಲಿನ ಮೋಹದಿಂದ ಸಂಕಲ್ಪಪೂರ್ವಕವಾಗಿ ಹಿಟ್ಟಿನ ಕೋಳಿಯೊಂದನ್ನು ಬಲಿಕೊಟ್ಟ ಫಲವಾಗಿ. ಏಳು ಜನ್ಮಗಳಲ್ಲಿ ಪರಿತಪಿಸಬೇಕಾಗುತ್ತದೆ. ಹಿಂಸೆಯ ಪಾಪವನ್ನು ಅನುಭವಿಸಲೇಬೇಕೆಂಬುದಕ್ಕೆ ಮತ್ತೊಂದು ಕರುಣಾಜನಕ ನಿದರ್ಶನವೆಂದರೆ ಕೋಲ್‌ರಿಜ್ ಮಹಾಕವಿಯ ಪುರಾತನ ನಾವಿಕನ ಕಷ್ಟಪರಂಪರೆ. ದಿಕ್ಕುಗಾಣದ ಸಮಯದಲ್ಲಿ ದಾರಿ ತೋರಿದ ಅಲಬಾಟ್ರಸ್ ಪಕ್ಷಿಯನ್ನೇ ಕೃತಘ್ನತೆಯಿಂದ ಕೊಂದುತಿಂದ ಆ ನಾವಿಕನು ಅನತಿ ಸಮಯದಲ್ಲೇ ತಾನು ಮಾಡಿದ ಹಿಂಸೆಯ ಪ್ರತಿಫಲವನ್ನು ಅತಿದಾರುಣವಾದ ದುಃಖದ ಮೂಲಕ ಅನುಭವಿಸಬೇಕಾಗುತ್ತದೆ.

ಅಹಿಂಸಾ ಧರ್ಮಪಾಲಕನು ಸರ್ವಜೀವಿಗಳಲ್ಲಿಯೂ ಸಮತಾಭಾವವನ್ನು ಹೊಂದಿದ್ದು ಆಹಾರಕ್ಕಾಗಿ ತಾನು ಮಾಡುತ್ತಿರುವ ಅತ್ಯಂತ ಕನಿಷ್ಠ ರೀತಿಯ ಹಿಂಸೆಯಿಂದಲೂ ವಿಮುಕ್ತನಾಗುವುದಕ್ಕೆ ಶ್ರಮಿಸಬೇಕಾಗುತ್ತದೆ. ಜೈನಧರ್ಮದಲ್ಲಿ ಪ್ರತಿಪಾದಿತವಾಗಿರುವ ಗೃಹಸ್ಥನ ಷಟ್‌ಕರ್ಮಗಳೆಲ್ಲಾ ಹಿಂಸೆಯ ತೀವ್ರತೆಯನ್ನು ಕ್ರಮೇಣ ಕಡಿಮೆ ಮಾಡುವ ಉದ್ದೇಶದಿಂದ ಕೂಡಿವೆ ಎಂಬುದು ಗಮನಾರ್ಹ ಅಂಶ. ಈ ಷಟ್‌ಕರ್ಮಗಳನ್ನು ಪಾಲಿಸುವಲ್ಲಿ ಗೃಹಸ್ಥನು ತನ್ನ ಆಹಾರದ ಬಗ್ಗೆ ಹೆಚ್ಚು ಎಚ್ಚರಿಕೆಯಿಂದಿರಬೇಕಾಗುತ್ತದೆ ಅದಕ್ಕಾಗಿ ಆತನು ಮೂಲತಃ ಮದ್ಯಮಾಂಸ ಮಧು ಮತ್ತು ಪಂಚಕ್ಷೀರ ಫಲಗಳ ತ್ಯಾಗವನ್ನು ಆಜೀವ ಪರ್ಯಂತ ಮಾಡಬೇಕಾಗುತ್ತದೆ. ಅಲ್ಲದೆ ತನ್ನಲ್ಲಿ ಸುಗುಣಗಳ ವೃದ್ಧಿಯಾದಂತೆಲ್ಲಾ ಕ್ರಮೇಣ ಶಾಕಾಹಾರದಲ್ಲಿಯೂ ಸಂಯಮವನ್ನು ಪಾಲಿಸಿಕೊಂಡು ಬಂದು, ರಾತ್ರಿ ಭೋಜನಾದಿಗಳನ್ನು ತ್ಯಜಿಸಿ, ಮರಣ ಕಾಲದಲ್ಲಿ ಸಾಧ್ಯವಾದರೆ ಸ್ವ ಇಚ್ಛೆಯಿಂದ ಅನ್ನ ನೀರುಗಳನ್ನು ಬಿಟ್ಟು ಸಮಾಧಿ ಮರಣವನ್ನು ಸಾಧಿಸಬೇಕಾಗುತ್ತದೆ. ಇನ್ನು ಆಹಾರದ ಬಗ್ಗೆ ಮಹಾಮುನಿಗಳ ಚಾರಿತ್ರವಂತೂ ವಿಶೇಷ ಸಂಯಮ ಪೂರ್ಣವಾಗಿರುತ್ತದೆ. ಅನಶನ. ಅವಮೌದರ್ಯ ಮತ್ತು ವೃತ್ತಿಪರಿಸಂಖ್ಯಾನಗಳೆಂಬ ಬಾಹ್ಯತಪಗಳು ನೇರವಾಗಿ ಆಹಾರಪಾನೀಯ ಸಂಯಮಕ್ಕೆ ಸಂಬಂಧಿಸಿವೆ. ಒಟ್ಟಿನಲ್ಲಿ ಹೇಳುವುದಾದರೆ. ಗೃಹಸ್ಥ ಮತ್ತು ಮುನಿಗಳ ಆಹಾರವು ಸಾಪೇಕ್ಷವಾಗಿ ಶುಚಿಯಾದ ಸಂಯಮ ಪೂರ್ವಕವಾದ ಶಾಕಾಹಾರವಾಗಿರಬೇಕಾ

ಗುತ್ತದೆ. ಅಲ್ಲದೆ ಸಲ್ಲೇಖನ ವ್ರತದ ಮೂಲಕ ಸಮಾಧಿ ಮರಣವನ್ನಪ್ಪುವುದರ ಹಿನ್ನೆಲೆಯಲ್ಲಿರುವ ತತ್ತ್ವ ಹಿಂಸೆಯಿಂದ ನಿವೃತ್ತಿ ಹೊಂದುವುದೇ ಆಗಿದೆ.

ಅಹಿಂಸೆ ಪಾಲನೆಯ ಸಲುವಾಗಿ ಆಹಾರ ಪಾನೀಯಗಳಲ್ಲಿ ಸಂಯಮದಿಂದ ವರ್ತಿಸುವ ಸ್ವಧರ್ಮ ನಿಷ್ಠೆಯಿಂದಿರುವುದರ ಜೊತೆಗೆ. ತನ್ನಲ್ಲಿಯೇ ಅಂತರ್ಗತವಾಗಿರುವ ಭೀಕರ ಮಾನಸಿಕ ಸಂಕೋಲೆಗಳ ಜಟಿಲ ಜಾಲದಿಂದ ಬಿಡುಗಡೆಗಾಗಿ ಪ್ರಯತ್ನಿಸಲೂ ಸಮರ್ಥನಾಗುತ್ತಾನೆ. ಜೈನಾಚಾರ್ಯರ ಮತದಂತೆ, ಅಂತಹ ಸದ್ಧರ್ಮನಿಷ್ಠ ವ್ಯಕ್ತಿಯು ಆತ್ಮಸಂಯಮ ಮತ್ತು ಜೀವಾನುಕಂಪ ಭಾವನೆಗಳಲ್ಲಿ ನಿರಂತರ ಪ್ರಗತಿ ಹೊಂದುತ್ತಿರುತ್ತಾನೆ. ಆಚಾರ್ಯ ಶ್ರೀ ಅಮಿತಗತಿಯವರ ಶುಭ ಭಾವನೆಗಳಾದ:

ಸತ್ವೇಷು ಮೈತ್ರೀಂ ಗುಣಿಷು ಪ್ರಮೋದಂ
ಕ್ಲಿಷ್ಟೇಷು ಜೀವೇಷು ಕೃಪಾಪರತ್ವಂ
ಮಾಧ್ಯಸ್ಥಭಾವಂ ವಿಪರೀತ ವೃತ್ತೌ
ಸದಾ ಮಮಾತ್ಮಾ ವಿಧಧಾತು ದೇವ *

ಸಕಲ ಜೀವಿಗಳಲ್ಲಿ ಮೈತ್ರಿಭಾವ. ಗುಣವಂತರಲ್ಲಿ ಪ್ರೀತಿ, ದುಃಖಪಡುತ್ತಿರುವ ಜೀವಿಗಳಲ್ಲಿ ದಯಾಭಾವ ಮತ್ತು ವಿಪರೀತ ವ್ಯಾಪಾರಗಳುಳ್ಳ ಜನರಲ್ಲಿ ಸಹನಾಭಾವ– ಈ ಶುಭ ಭಾವನೆಗಳು ನಮ್ಮಲ್ಲಿ ಸದಾ ತುಂಬಿರುವಂತಾಗಬೇಕು. ಇದ

* ಶ್ರೀ ಅಮಿತಗತ್ಯಾಚಾರ್ಯರು, ಸಾಮಾಯಿಕ ಪಾಠ ಪದ್ಯ ೧

ರಿಂದ ವ್ಯಕ್ತಿಯಲ್ಲಿ ಸಮತಾಭಾವವು ಕ್ರಮೇಣ ವಿಕಾಸ ಹೊಂದು ವುದರಿಂದ ಪರಮ ಪುರುಷಾರ್ಥ ಸಾಧನೆಗೆ ಭದ್ರ ಬುನಾದಿ ರೂಪ ಗೊಳ್ಳುತ್ತದೆ.

ಪರಿಸಮಾಪ್ತಿ

ಜಗತ್ತಿನಲ್ಲಿ ಇಂದು ಆಹಾರ ವಿಹಾರಗಳ ಹೆಸರಿನಲ್ಲಿ ಆಗು ತ್ತಿರುವ ಮೂಕಪಶುಗಳ ಬಲಿಗೆ ಮಾನವನ ನಾಲಿಗೆಯ ಲಾಲಸೆ ಮತ್ತು ಹಿಂಸಾನಂದಿ (Sadism) ಪ್ರವೃತ್ತಿಗಳೇ ಕಾರಣ. ಮಾಂಸಾಹಾರವನ್ನು ಸಮರ್ಥಿಸಲೆಂದು ಕೆಲವರು ಮುಂದಿ ಡುವ ವಾದಗಳು ಸ್ವಾರ್ಥಪ್ರೇರಿತವೂ ಅತಾರ್ಕಿಕವೂ ಮತ್ತು ಆಧಾರರಹಿತವೂ ಆಗಿವೆ ಎಂಬುದಕ್ಕೆ ಅನೇಕ ಪ್ರಬಲ ಸಾಕ್ಷ್ಯಾ ಧಾರಗಳಿರುವುದನ್ನು ನಾವು ಪರಿಶೀಲಿಸಿದ್ದೇವೆ. ಆದರೆ ವಿಚಾ ರದ ಹಿರಿಮೆ ಆಚಾರದಲ್ಲಿ ಮೈಗೂಡಿ ಬಂದಾಗ ಮಾತ್ರ ಅದರ ಮಹತ್ವ ಉಳಿಯುತ್ತದೆ. ಅಂದಮೇಲೆ ಶಾಕಾಹಾರ ತತ್ತ್ವ ಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಮೊದಲ ಹೆಜ್ಜೆ ನಮ್ಮ ಮನೋಭಾವದಲ್ಲಿ ಆಗಬೇಕಾದ ಪರಿವರ್ತನೆ. ಸಕಲಜೀವಿಗಳಿಗೂ ಜೀವಿಸುವ ಹಕ್ಕಿದೆ ಎಂಬ ಸತ್ಯ ನಮ್ಮ ಚಿತ್ತಭೂಮಿಕೆಯಲ್ಲಿ ನೆಲೆ ನಿಂತಾಗ ಮಾತ್ರ ಸಹಜವಾಗಿ ನಮ್ಮ ಮನ ಶಾಕಾಹಾರದತ್ತ ಹರಿಯಬಲ್ಲದು. ಜನತೆಯ ಮನೋಭಾವದಲ್ಲಿ ಮಹತ್ವ ಪೂರ್ಣ ಬದಲಾವಣೆ ತರುವ ಸಲುವಾಗಿ ವಿಚಾರವಂತರೂ, ಆಚಾರಶೀಲರೂ ನಿರಂತರ ಪರಿಶ್ರಮಪಡಬೇಕಾಗುತ್ತದೆ.

ಈಗಾಗಲೇ ಅನೇಕ ವ್ಯಕ್ತಿಗಳೂ, ಸಂಘ ಸಂಸ್ಥೆಗಳೂ ಜಗತ್ತಿನಾದ್ಯಂತ ಶಾಕಾಹಾರ ಆಂದೋಲನವನ್ನು ನಡೆಸುತ್ತಿರುವುದು ಭರವಸೆಯ ಸಂಕೇತ. ಅಂತಹ ಸಂಘ ಸಂಸ್ಥೆಗಳಲ್ಲಿ ಪ್ರಮುಖವಾದವುಗಳು, ಅಮೇರಿಕಾ ಸಂಯುಕ್ತ ಸಂಸ್ಥಾನ ಮತ್ತು ಬ್ರಿಟನ್‌ಗಳಲ್ಲಿರುವ ವೇಗನ್ ಸೊಸೈಟಿಗಳು, ವಿಶ್ವ ಜೈನ್ ಮಿಷನ್. ಭಾರತೀಯ ಪ್ರಾಣಿ ಕಲ್ಯಾಣ ಮಂಡಳಿ ಮತ್ತು ವಿವಿಧ ಶಾಕಾಹಾರ ಸಂಸ್ಥೆಗಳು. ಈ ಎಲ್ಲಾ ಸಂಘ ಸಂಸ್ಥೆಗಳ ಕಾರ್ಯ ಅತ್ಯಂತ ಹೆಚ್ಚು ಸುವ್ಯವಸ್ಥಿತ ರೀತಿಯಿಂದ ಆಗಬೇಕಾಗಿದೆ. ಅಜ್ಞಾನ ಮತ್ತು ಅಳಿಯಾಸೆಗಳಿಂದ ಮಾಂಸಾಹಾರಕ್ಕೆ ವಶರಾಗುವ ಜನರಿಗೆ ಶಾಕಾಹಾರದ ಉತ್ಕೃಷ್ಟ ಗುಣಗಳನ್ನು ಸಪ್ರಮಾಣಗಳಿಂದ ತಿಳಿಸಿಕೊಡುವದನ್ನೂ ಮತ್ತು ಅವರಲ್ಲಿ ಉಚ್ಚ ಮಾನವೀಯ ಮೌಲ್ಯ ಪ್ರಜ್ಞೆಯನ್ನು ಬೆಳೆಸುವುದನ್ನೂ ಇಂತಹ ಸಂಸ್ಥೆಗಳು ತ್ವರಿತ ಗತಿಯಿಂದ ಸಾಧಿಸಬೇಕಾಗಿದೆ.

ವಿಶ್ವಶಾಂತಿ ಸ್ಥಾಪನೆಗೂ ಶಾಕಾಹಾರದ ಅನುಷ್ಠಾನವು ಮೊದಲಹೆಜ್ಜೆಯಾಗಬಲ್ಲದು ಎಂಬ ಅರಿವೂ ಜನತೆಯಲ್ಲಿಮೂಡುವಂತಾಗಬೇಕು. ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಒರೆನೊ ವಿಶ್ವವಿದ್ಯಾಲಯಗಳಲ್ಲಿ ನಡೆದ ೨೩ ನೆಯ ವಿಶ್ವ ಶಾಕಾಹಾರ ಸಮ್ಮೇಳನದಲ್ಲಿ ಭಾಗವಹಿಸಿದ ಆಚಾರ್ಯ ದೇವೇಂದ್ರಕೀರ್ತಿ ಭಟ್ಟಾರಕರು ವಿಶ್ವಶಾಂತಿಗೆ ಶಾಕಾಹಾರವು ಭದ್ರಬುನಾದಿ

ಎಂಬ ಸತ್ಯವನ್ನು ಸಾಧಾರಗಳಿಂದ ಪ್ರತಿಪಾದಿಸಿದ್ದಾರೆ. * ಇಂಗ್ಲ ಮಹಾಕವಿ ಪಿ. ಬಿ ಷೆಲ್ಲಿಯು ಕಳಕಳಿಯಿಂದ ಆಡಿದ "ಮಾನವತೆಯ ಕಲ್ಯಾಣದಲ್ಲಿ ಆಸಕ್ತಿಯುಳ್ಳ ಹಾಗೂ ಸತ್ಯ ಪ್ರಿಯರಾದ ಎಲ್ಲ ಜನರೂ ನಿಷ್ಪಕ್ಷಪಾತದಿಂದ ಶಾಕಾಹಾರ ಸಿದ್ಧಾಂತಗಳನ್ನು ಪರಿಶೀಲಿಸಬೇಕೆಂದು ಮಾನವ ಕುಲದ ಶ್ರೇಯಸ್ಸಿಗಾಗಿ ನನ್ನಲ್ಲಿರುವ ಸದಾಶಯದಲ್ಲೇ ಅಂತರ್ಗತವಾಗಿರುವ ಪೂರ್ಣ ಪ್ರಾಮಾಣಿಕತೆಯಿಂದ ನಾನು ಕೋರುತ್ತೇನೆ" ಎಂಬ ನುಡಿಮುತ್ತುಗಳು ನಮ್ಮೆಲ್ಲರ ಹೃದಯಗಳ ಅಂತರಾಳದಲ್ಲಿರುವ ಅನುಕಂಪೆ ಭಾವನೆಯನ್ನು ಜಾಗೃತಗೊಳಿಸುವಂತಾಗಬೇಕು. ಇದರಿಂದಾಗಿ ಯಾವುದಾದರೂ ಜೀವಿಯ ಕಗ್ಗೊಲೆಯನ್ನು ಕಂಡಾಗ ನಮ್ಮಲ್ಲಿ ಸಂತಾಪ ಮೂಡುವಂತಾಗಿ ಕ್ರಮೇಣ ಅಹಿಂಸಾ ಪ್ರವೃತ್ತಿಯು ಬೆಳೆಯುವುದರಲ್ಲಿ ಅನುಮಾನವಿಲ್ಲ. ಇದಕ್ಕೆ ಶಾಕಾಹಾರ ಅತ್ಯುತ್ತಮ ಸಾಧನ. ಅದರಿಂದ ಅಹಿಂಸೆ ಮತ್ತು ಸಮತಾಭಾವಗಳು ನಮ್ಮಲ್ಲಿ ಸ್ವಲ್ಪಸ್ವಲ್ಪವಾಗಿ ಪ್ರಕಟವಾಗತೊಡಗುತ್ತವೆ ಮತ್ತು ತನ್ಮೂಲಕ ಸ್ವಪರ ಹಿತ ಸಾಧ್ಯವಾಗುತ್ತದೆ ವಿಶ್ವಶಾಂತಿಗೆ ನಾಂದಿಯಾಗುತ್ತದೆ. ಹಾಗೂ ವ್ಯಕ್ತಿಯ ಪರಮ ಪುರುಷಾರ್ಥ ಸಾಧನೆಗೆ ಭದ್ರವಾದ ನೆಲೆಗಟ್ಟಾಗುತ್ತದೆ.

---

* ಸ್ವಸ್ತಿ ಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಸ್ವಾಮೀಜಿ Vegetarianism and Universal Peace. Speech delivered at the 23rd World Vegeterian Congress, University of Maine at Orono, U. S. A.

ಪರಾಮರ್ಶನ ಪುಸ್ತಕ ಮತ್ತು ಲೇಖನಗಳು

ಅಮಿತಗತ್ಯಾಚಾರ್ಯ,	ಸಾಮಾಯಿಕ ಪಾಠ
ಆಶಾಧರಸೂರಿ,	ಸಾಗಾರ ಧರ್ಮಾಮೃತ
'ಆಹಾರ ವಿಜ್ಞಾನ,'	ಕೇಂದ್ರ ಆಹಾರ ಸಂಶೋಧನಾಲಯ ಮೈಸೂರು ೧೯೬೫. ಸಂ.೨೮; ಸಂ.೨.
ಕುವೆಂಪು	ಶ್ರೀರಾಮಾಯಣ ದರ್ಶನಂ ಕನ್ನಡ ಅಧ್ಯಯನ ಸಂಸ್ಥೆ. ಮೈಸೂರು ವಿಶ್ವ ವಿದ್ಯಾನಿಲಯ. ಮೈಸೂರು ೧೯೬೦
ಧರಣೇಂದ್ರಯ್ಯ, ಎ. ಎಸ್.	ಹಸಿವು ಮತ್ತು ವರ್ತನೆ. ಮಾನವಿಕ ಕರ್ನಾಟಕ. ಮೈಸೂರು ವಿಶ್ವವಿದ್ಯಾನಿಲಯ,ಮೈಸೂರು: ಸೆಪ್ಟೆಂಬರ ೧೯೬೦
ಧರಣೇಂದ್ರಯ್ಯ, ಎ. ಎಸ್.	ಮಾನಸಿಕ ಆರೋಗ್ಯ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೧೯೬೩
ಧರಣೇಂದ್ರಯ್ಯ. ಎ. ಎಸ್.	ಸಾಮಾನ್ಯ ಮನೋವಿಜ್ಞಾನ, ಕನ್ನಡ ಅಧ್ಯಯನ ಸಂಸ್ಥೆ. ಮೈಸೂರು ೧೯೬೫
ಧರಣೇಂದ್ರಯ್ಯ. ಎ. ಎಸ್.	(ಅನು)ಮನೋವಿಶ್ಲೇಷಣೆ ನಡೆದು ಬಂದ ದಾರಿ. ಮೈಸೂರು : ಕನ್ನಡ ಅಧ್ಯಯನ ಸಂಸ್ಥೆ ೧೯೬೦
ನಯಸೇನ,	ಧರ್ಮಾಮೃತ

ರವೀಂದ್ರನಾಥ ಎಸ್. ಎಸ್.	ಸಸ್ಯಗಳಿಗೂ ಬೇಕು ಸಂಗೀತ-ನಾಟ್ಯ, ಪ್ರಜಾವಾಣಿ ಸಾಪ್ತಾಹಿಕ ಪುರವಣಿ ೨೩-೧೧-೭೫
ರಾಮಚಂದ್ರರಾವ ಎಸ್. ಕೆ.	ವರ್ಧಮಾನ ಮಹಾವೀರ ಬೆಂಗಳೂರು: ೧೯೭೬
Animal citizen	April- Sept. 1971 vol XIII No. 3–4
Anne Besant	Speech delivered at The world Vegetarian Congress 1957
Diwakar, S. C.	Religion and Peace, Mathura: All India Digumber Jain Sangh. U. P. 1962
Geeta Doctor	Vegetarianism, Illustrated Weekly vol XCVI, 42; Oct.75
Paramaj, D. S.	Lord Mahaveera's Voice of Non-violence. Sanmati Publi cations, 1975 Sl. No. 34
Swasti Shree	Devendrakeerti Bhataraka Swamiji., Vegetarianism and World Peace.Speech delivered at the 23rd World Vegetarian Congress, University of Maine at Orono, U. S. A.

Voice of Ahimsa vol. XVII 1967 No. 56

ಉಪನ್ಯಾಸ ಗ್ರಂಥಮಾಲೆಯ ಇತ್ತೀಚಿನ ಪ್ರಕಟನೆಗಳು

ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ

ಕಳೆ ನಿಯಂತ್ರಣ —ಎಂ. ಎಂ. ಹೊಸಮನಿ

ನಮ್ಮ ದೇಶದಲ್ಲಿ ಬಡತನ ಹಾಗೂ ಅದರ ನಿವಾರಣೆ —ಎಂ. ಸಿ. ಕೊಡ್ಲಿ

ಶ್ರಮಜೀವಿಗಳ ಕಲ್ಯಾಣ —ಎಂ. ಸಿ. ಹಿಪ್ಪರಗಿ

ಬಸವಣ್ಣನವರ ಧ್ಯೇಯಾದರ್ಶಗಳಿಗೆ ಸಮಕಾಲೀನರ ಕಾಣಿಕೆ —ಎಸ್. ಜಿ. ಹಂಡಿ

ಹರಿಶ್ಚಂದ್ರಕಾವ್ಯದಲ್ಲಿಯ ರಸಸ್ಥಾನಗಳು —ಸಿ. ಎಲ್. ಹೆರಕಲ್ಲ

ಕಾರವಾರ ಜಿಲ್ಹೆಯ ಶಾಸನಗಳು —ಆರ್. ಎನ್. ಗುರವ

ಕನ್ನಡದಲ್ಲಿ ಸಾಂಗತ್ಯ ಸಾಹಿತ್ಯ —ವೀರಣ್ಣ ರಾಜೂರ

ಮಾನಸಿಕ ರೋಗಗಳು —ಎಂ. ಬಿ. ರೇಣುಕಾರ್ಯ

ಕನ್ನಡದಲ್ಲಿ ಕಾದಂಬರಿ ಸಾಹಿತ್ಯ —ದು. ನಿಂ. ಬೆಳಗಲಿ

ಗರತಿಯ ಹಾಡುಗಳಲ್ಲಿ ಕೌಟುಂಬಿಕ ಜೀವನ ಚಿತ್ರಣ —ದೇವೇಂದ್ರಕುಮಾರ ಹಕಾರಿ

ಪ್ರಸಾರಾಂಗ (ವ್ಯಾಸಂಗವಿಸ್ತರಣ–ಪ್ರಕಟನ ವಿಭಾಗ)
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦೦೦೩